ADDITIONAL AND SUPPLEMENTARY DEMANDS FOR GRANTS FOR THE YEAR 1961-62.

DEMAND NO. 5—FOREST.

10. Forest.

Sri B. RACHIAH (Minister for Agriculture, Co-operation and Forest).—Sir, on the recommendation of the Governor of Mysore, I beg to move :

> "That a further sum not exceeding Rs. 50,00,100 be granted to the Government to defray the charges which will come in course of payment during the year ending 31st day of March 1962, in respect of 'Forest.'"

Sri B. HUTCHE GOWDA (Turuvekere).—Sir, on a point of order. ಸ್ವಾಮಿ, ಈ Supplementary and Additional Demandsನಲ್ಲಿ ಸುಮಾರು 20 ಕೋಟಿ ರೂಪಾಯಿ ಇದೆ. ಎಂಟು ಕೋಟಿ ಚಿಲ್ಲರೆಯಷ್ಟು ಖರ್ಚುಮಾಡಿದ್ದಾರೆ. ನಮ್ಮ ಕಂಟಿಂಜನ್ಸಿ ಫಂಡ್ ಇರುವುದೇ ಎರಡು ಕೋಟಿ ರೂಪಾಯಿ. ಆದುದರಿಂದ ಇದು ಹೇಗಾಯಿತು. ಯಾವ ಯಾವ ಬಾಬಿಗೆ ಖರ್ಚು ಬಿದ್ದಿದೆ ಎಂಬ ಬಗ್ಗೆ ನಾವು ತಿಳಿದುಕೊಳ್ಳಬೇಕು. ಈ ವಿವರಗಳನ್ನು ನಮಗೆ ಒದಗಿಸಬೇಕು.

Mr. SPEAKER.—Is there really any point of order in it ? During the course of debate, you will speak on it, you can criticise it and you can point out and you can vote it out.

Sri B. HUTCHE GOWDA.—I want information.

Mr. SPEAKER.—Desiring information is not a point of order. The Hon'ble Minister will go on : Motion moved :

> "That a further sum not exceeding Rs. 50,00,100 be granted to the Government to defray the charges which will come in course of payment during the year ending 31st day of March 1962 in respect of "Forest".

We may take it. That all the demands are before the House and the debate can cover the whole range I suppose that wil be all right.

Before the debate begins, I would desire to invite the attention of the Members to rule 172 which discribes the scope of debate, the exact ambit of the debate. Rule 172 reads thus :

> "The Debate on Supplementary Grants shall be confined to the items constituting the same and no discussion may be raised on the original grants nor the policy underlying, save in so far as it may be necessary to explain or illustrate particular items under consideration."

It is not unlikely that a few members may be new. It is in that light I have mentioned this thing. I know there are many Hon'ble Members who are experienced. But still a sort of a reminder to Hon'ble Members—those who are old and new, perhaps would not be wrong.

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸಭಾಪತಿಯವರೆ, 1961-62ನೆಯ ಸಾಲಿನ ಅನುಪೂರಕ ಅನುದಾನಗಳಿಗೆ ಸಂಬಂಧಪಟ್ಟ ಬೇಡಿಕೆಗಳ ಬಗ್ಗೆ ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ಸುಮಾರು ಇಪ್ಪತ್ತು ಕೋಟಿ ರೂಪಾಯಿಗಳಿಗೆ ಮೇಲ್ಪಟ್ಟ ಸಪ್ಲಿಮೆಂಟರಿ ಡಿಮ್ಯಾಂಡುಗಳನ್ನು ಈ ನಮ್ಮ ಸಭೆಯ ಮುಂದಿಟ್ಟಿರುವ ಈ ಸಮಯದಲ್ಲಿ ನಾನಾದರೂ ಕೂಡ ಒಂದು ಕುತೂಹಲಕರವಾದ ಪ್ರಶ್ನೆಯನ್ನು ಸಭಾಪತಿಯವರ ಮೂಲಕ ಸರ್ಕಾರದವರನ್ನು ಕೇಳಬಯಸುತ್ತೇನೆ.

ಆ ಕುತೂಹಲದ ವಿಷಯ ಏನೆಂದರೆ ಈ ದಿವಸ ಹಣಕಾಸಿನ ಮಸೂದೆಯನ್ನು ಈ ಸಭೆಯ ಮುಂದೆ ಮಂಡಿಸಿರತಕ್ಕ ಮಾನ್ಯ ಮುಖ್ಯಮಂತ್ರಿಗಳೇ ಇನ್ನು ಮುಂದೆಯೂ ಈ ಹಣಕಾಸಿನ ಜವಾಬ್ದಾರಿಯನ್ನು ವಹಿಸುತ್ತಾರೆಯೇ ? ಈಗಾಗಲೇ ಪತ್ರಿಕೆಗಳಲ್ಲಿ ವರದಿಯಾಗಿರುವ ರೀತಿಯಲ್ಲಿ ಮುಖ್ಯಮಂತ್ರಿಗಳು ದೆಹಲಿ ಯಾತ್ರೆಯನ್ನು ಮುಗಿಸಿಕೊಂಡು ಬಂದ ಮೇಲೆ ಮಂತ್ರಿಗಳ ಸಂಖ್ಯೆ ಏನಾದರೂ ಬದಲಾವಣೆಯಾಗುತ್ತದೆಯೇ ? ಈ ನಮ್ಮ ದೇಶದಲ್ಲಿ ಮಂತ್ರಿಗಳ ಸಂಖ್ಯೆ ನಿರ್ದಿಷ್ಟವಾಗಿ ಎಷ್ಟಿದೆ ಎನ್ನತಕ್ಕಂಥ ಒಂದು ಅಂಶವನ್ನು ಈ ಸಭೆಯ ಗಮನಕ್ಕೆ ತಂದು ಅವರ ಒಪ್ಪಿಗೆಯನ್ನು ತೆಗೆದುಕೊಂಡರೆ ಒಳ್ಳೆಯದು. ಆಗ ಈ ಒಂದು ಅಂಶ ದೇಶದ ಎಲ್ಲಾ ಕಡೆಗೂ ಪತ್ರಿಕೆಗಳ ಮುಖಾಂತರ ಗೊತ್ತಾಗುತ್ತದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ನಮ್ಮ ದೇಶದ ಮಂತ್ರಿಗಳ ನಿರ್ದಿಷ್ಟವಾದ ಸಂಖ್ಯೆ ಎಷ್ಟು ಎಂಬುದನ್ನು ದಯವಿಟ್ಟು ಹೇಳಿದರೆ ನಮಗೆ ಸಮಾಧಾನವಾಗುತ್ತದೆ.

ಶ್ರೀ ಎಸ್. ಆರ್. ಕಂಠಿ.—ಈಗ ತಾವು ಯಾವ ಐಟಂ ಮೇಲೆ ಮಾತನಾಡುತ್ತಿದ್ದೀರಿ ?

1-30 P.M.

ಶ್ರೀ ಎಸ್. ಶಿವಪ್ಪ.—ಹಣಕಾಸಿಗೆ ಸಂಬಂಧಪಟ್ಟ ಮಸೂದೆಯ ಮೇಲೆ ಮಾತನಾಡುತ್ತಾ ಇರುವ ಕಾಲದಲ್ಲಿ ನಮ್ಮ ದೇಶದ ಹಣಕಾಸಿನ ಜವಾಬ್ದಾರಿಯನ್ನು ವಹಿಸಿಕೊಂಡಿರತಕ್ಕ ಆರ್ಥಿಕ ಸಚಿವರಿಂದ ಈ ಸಭೆಯ ಮಾನ್ಯ ಸದಸ್ಯರು ಸರಿಯಾದ ಉತ್ತರಗಳನ್ನು ಅಪೇಕ್ಷಿಸುತ್ತಾರೆ. ಆದ್ದರಿಂದ ಈ ಒಂದು ಪ್ರಶ್ನೆಗೆ

ಇಲ್ಲಿ ಅವಕಾಶವಿದೆ. ಅದಕ್ಕೋಸ್ಕರವಾಗಿ ತಮ್ಮ ಮಂತ್ರಿಮಂಡಲದ ನಿರ್ದಿಷ್ಟವಾದ ಸಂಖ್ಯೆ ಎಷ್ಟು ಎಂಬುದನ್ನು ಹೇಳಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇದು ದೇಶಕ್ಕೆ ಸಂಬಂಧಪಟ್ಟ ವಿಷಯ. ಆದ್ದರಿಂದ ತಮ್ಮ ಮಂತ್ರಿ ಮಂಡಲದ ನಿರ್ದಿಷ್ಟವಾದ ಸಂಖ್ಯೆ ಎಷ್ಟು ಎಂಬುದನ್ನು ಆದಷ್ಟು ಜಾಗ್ರತೆಯಾಗಿ ಹೇಳತಕ್ಕಂಥಾದ್ದು ತಮ್ಮ ಜವಾಬ್ದಾರಿ ಎಂದು ನಾನು ತಿಳಿದುಕೊಂಡಿದ್ದೇನೆ. ತಾವು ದಿಲ್ಲಿಗೆ ಹೋಗಿ ಬಂದ ಮೇಲೆ ಏನಾಗುತ್ತದೋ ಎಂದು ನಮಗೆ ಅನುಮಾನಾಸ್ಪದವಾಗಿದೆ. ಏತಕ್ಕೆಂದರೆ ಅನೇಕಸಾರಿ ತಾವೇ ಹೇಳಿದ್ದೀರಿ.—ಇನ್ನು ಆರು ತಿಂಗಳು ಕಳೆದ ಮೇಲೆ ತಮ್ಮ ಮಂತ್ರಿಮಂಡಲ ಏನೋ ಆಗುತ್ತದೆ ಎಂದು.

Mr. SPEAKER.—We are not discussing the future of the Ministry here. There is no scope for it now.

Sri S. SHIVAPPA.—This is a question of public importance.

Mr. SPEAKER.—May be. But it is not within the scope of the supplementary demand.

Sri S. SHIVAPPA.—Under the Rules of Procedure, there is no other opportunity to ventilate my griveance. This is one of the opportunities given to me to speak on the Finance Bill. I leave it to the Speaker to get the necessary answer from the Leader of the House.

Mr. SPEAKER.—The Hon'ble Member may please speak on the supplementary Demand.

ಶ್ರೀ ಎಸ್. ಶಿವಪ್ಪ.—ಸಪ್ಲಿಮೆಂಟರಿ ಎಸ್ಟಿಮೇಟಿನಲ್ಲಿ ತಾವು 2014·57ಲಕ್ಷ ರೂಪಾಯಿಗಳು ಬೇಕು ಎಂದು ಕೇಳಿದ್ದೀರಿ. ಇದಕ್ಕೆ 378 ಲಕ್ಷ ರೂಪಾಯಿಗಳನ್ನು ಕೇಂದ್ರ ಸರ್ಕಾರದವರ ಸಹಾಯದಿಂದಲೂ 752 ಲಕ್ಷ ರೂಪಾಯಿಗಳನ್ನು ಟೆಕ್ನಿಕಲ್ ಗ್ರೌಂಡ್ಸ್ ಮೇಲೂ ಅಡ್ಜಸ್ಟ್ ಮಾಡಬೇಕೆಂದು ಹೇಳಿದ್ದೀರಿ. ಆದರೆ 885 ಲಕ್ಷ ರೂಪಾಯಿಗಳನ್ನು ಹೇಗೆ ಸರಿದೂಗಿಸುತ್ತೀರೆಂಬುದನ್ನು ತಾವು ಎಲ್ಲಿಯೂ ತೋರಿಸಿಲ್ಲ. ಶ್ರೀಮಾನ್ ಹುಚ್ಚೇಗೌಡರು ಹೇಳಿದ ಹಾಗೆ ನಮ್ಮಲ್ಲಿ ಬಡ್ಜೆಟ್ ಪ್ರಾವಿಷನ್ ಇರತಕ್ಕದ್ದು ಕಂಟಿಂಜೆನ್ಸಿ ಫಂಡ್ ಎರಡು ಕೋಟಿ ರೂಪಾಯಿಗಳು ಮಾತ್ರ. ಇವೊತ್ತಿನ ದಿವಸ 8 ಕೋಟಿ 85 ಲಕ್ಷ ರೂಪಾಯಿಗಳನ್ನು ಯಾವ ರೀತಿಯಿಂದ ಸರಿದೂಗಿಸುತ್ತೀರಿ ಎನ್ನುವ ವಿವರಣೆಯನ್ನು ಕೊಡುವುದಕ್ಕೆ ನೀವು ಅಸಮರ್ಥರಾಗಿದ್ದೀರಿ. ಈ ಸಪ್ಲಿಮೆಂಟರಿ ಡಿಮ್ಯಾಂಡನ್ನು ತರತಕ್ಕಂಥ ಒಂದು ಸಂಪ್ರದಾಯವೇನೆಂದರೆ ಬಡ್ಜೆಟ್ಟಿನಲ್ಲಿ ದೇಶದ ಅಭಿವೃದ್ಧಿ ಕಾರ್ಯಗಳಿಗೆ ಒದಗಿಸಿರತಕ್ಕ ಹಣವೆಲ್ಲವೂ ಖರ್ಚಾಗಿ ಹಣ ಸಾಲದೇ ಹೋದರೆ, ಆಗ ಅದಕ್ಕೆ ಬೇಕಾದ ಹಣವನ್ನು ಕಂಟಿಂಜೆನ್ಸಿ ಫಂಡಿನಿಂದ ತೆಗೆದುಕೊಂಡು ಸಪ್ಲಿಮೆಂಟರಿ ಡಿಮ್ಯಾಂಡನ್ನು ಸಭೆಯ ಮುಂದೆ ಇಟ್ಟು ಈ ಸಭೆಯ ಒಪ್ಪಿಗೆಯನ್ನು ತೆಗೆದುಕೊಳ್ಳತಕ್ಕದ್ದು. ಇವೊತ್ತಿನ ದಿವಸ ಸಪ್ಲಿಮೆಂಟರಿ ಡಿಮ್ಯಾಂಡಿನಲ್ಲಿ ಕೇಳಿರತಕ್ಕ ಹಣ ಒಂದೆರಡು ಕೋಟಿ ರೂಪಾಯಿಗಳಲ್ಲ, 20 ಕೋಟಿ ರೂಪಾಯಿಗಳನ್ನು ಕೇಳಿದ್ದಾರೆ. ಬಹುಶಃ ಮೈಸೂರು ದೇಶದ ವರಮಾನದ ಅರ್ಧ ಭಾಗದಷ್ಟು ಹಣವನ್ನು ಈ ಸಪ್ಲಿಮೆಂಟರಿ ಬಡ್ಜೆಟ್ಟಿನಲ್ಲಿ ಕೇಳಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಹಣಕಾಸಿನ ಮುಂಗಡಪತ್ರವನ್ನು ರಚನೆಮಾಡತಕ್ಕ ಕಾಲದಲ್ಲಿ ನಮ್ಮ ದೇಶದಲ್ಲಿ ಮುಂದಿನ ವರ್ಷದಲ್ಲಿ ನಡೆಯತಕ್ಕ ಕೆಲಸಕಾರ್ಯಗಳಿಗೆ ಎಷ್ಟು ಹಣ ಬೇಕು ಎಂಬುದು ಗಮನದಲ್ಲಿರಲಿಲ್ಲವೇ? ಬಡ್ಜೆಟ್ಟಿನ ಅಂದಾಜನ್ನು ಹಾಕತಕ್ಕ ಕಾಲದಲ್ಲಿ ಯಾವ ಬಾಬುಗಳಿಗೆ ಹೆಚ್ಚಿಗೆ ಹಣ ಬೇಕು ಎನ್ನುವುದು ತಮ್ಮ ಗಮನದಲ್ಲಿರಲಿಲ್ಲವೇ? ತಮ್ಮಲ್ಲಿ ಯಾವ ಒಂದು ಆರ್ಥಿಕ ನೀತಿಯೂ ಇಲ್ಲ ಎನ್ನುವುದನ್ನು ನಿರ್ದಿಷ್ಟವಾಗಿ ತೋರಿಸುತ್ತದೆ. ಪ್ಲಾನಿಂಗ್ ನೀತಿಯನ್ನು ಸಂಪೂರ್ಣವಾಗಿ ಬೆಳೆಸಿಕೊಂಡು ಬಂದಿಲ್ಲ. ಬಡ್ಜೆಟ್ಟನ್ನು ನಿರೂಪಣೆ ಮಾಡಿರತಕ್ಕ ಕ್ರಮ ಸರಿಯಾಗಿಲ್ಲ. ಈ ಸಪ್ಲಿಮೆಂಟರಿ ಬಡ್ಜೆಟ್ ಎಸ್ಟಿಮೇಟಿನಲ್ಲಿರತಕ್ಕ ಎರಡು ಮೂರು ಐಟಮ್‌ಗಳನ್ನು ತಮ್ಮ ಮುಂದೆ ನಿರ್ದಿಷ್ಟವಾಗಿ ಹೇಳುತ್ತೇನೆ.

ಮೊದಲನೆಯದಾಗಿ ಅರಣ್ಯದ ಬಾಬಿಗೆ 50 ಲಕ್ಷ ರೂಪಾಯಿಗಳು ಬೇಕೆಂದು ಕೇಳಿದ್ದಾರೆ. 50 ಲಕ್ಷ ರೂಪಾಯಿಗಳು ಏತಕ್ಕೋಸ್ಕರ ಬೇಕು ಎಂದು ನಾನು ಕೇಳುತ್ತೇನೆ. ಮರಗಳನ್ನು ಯಾರಿಗೋ ಸಪ್ಲೈ ಮಾಡಬೇಕು, ಅದಕ್ಕೋಸ್ಕರ ಮರಗಳನ್ನು ಕಡಿದು ಸಾಗಿಸುವುದಕ್ಕೆ ಅಷ್ಟು ಹಣ ಬೇಕೆಂದು ಕಾಣುತ್ತದೆ. ಸಾಮಾನ್ಯವಾಗಿ ಅರಣ್ಯ ಇಲಾಖೆಯಲ್ಲಿ ನಾವು ಲಾಭವನ್ನು ಸಂಪಾದನೆ ಮಾಡಬೇಕು. ಅದನ್ನು ಬಿಟ್ಟು ಯಾರಿಗೋ ಅಥವಾ ಯಾವುದೋ ಕಂಪೆನಿಗೆ ಮರಗಳನ್ನು ಸಾಗಿಸುವುದಕ್ಕೆ 50 ಲಕ್ಷ ರೂಪಾಯಿಗಳು ಬೇಕು ಎಂದು ಕೇಳಿದರೆ ಇದು ನಾಚಿಕೆಗೇಡಿನ ವಿಷಯ. ನಮ್ಮ ದೇಶದ ಅರಣ್ಯ ದಿನೇ ದಿನೇ ಹಾಳಾಗುತ್ತಿದೆ. ಸಾಮಾನ್ಯವಾಗಿ ಮೈಸೂರು ದೇಶದ ಅರಣ್ಯದಲ್ಲಿರತಕ್ಕ ಬೆಲೆಬಾಳುವ ಮರಮುಟ್ಟು ಮೊದಲಾದುವುಗಳನ್ನು ಟೆಂಡರ್ ಕರೆದು ಮಾರಾಟ ಮಾಡತಕ್ಕ ಪದ್ಧತಿ ಇದೆ. ಆದರೆ ಇತ್ತೀಚೆಗೆ ಅರಣ್ಯ ಸಂಪತ್ತನ್ನು ಕೆಲವರು ಮಂತ್ರಿಗಳ ಬಂಧುಗಳಿಗೂ ಮತ್ತು ಸ್ನೇಹಿತರಿಗೂ ಕೊಟ್ಟಿದ್ದಾರೆ. ಒಂದು ಘನ ಅಡಿಗೆ ಆರಾಣೆ, ಎಂಟಾಣೆಯಂತೆ ಮಾರಿದ್ದಾರೆ. ಅರಣ್ಯ ಸಂಪತ್ತಿನ ಬೆಲೆ ಹೇಗಿದೆ ಎಂಬುದನ್ನು ಕಂಡುಹಿಡಿಯುವುದಕ್ಕೆ ಇವರಿಗೆ ಬರುವುದಿಲ್ಲವೆಂದು ಕಾಣುತ್ತದೆ. ಇವರು ಅರಣ್ಯ ಸಂಪತ್ತನ್ನು ಮಾರಾಟಮಾಡಿರುವುದರಿಂದ 20–30 ಲಕ್ಷ ರೂಪಾಯಿಗಳು ನಮ್ಮ ದೇಶಕ್ಕೆ ನಷ್ಟವಾಗಿದೆ. ಈ ರೀತಿ ಇವರು ಮಾರಾಟಮಾಡುವುದರಿಂದ ನಮ್ಮ ದೇಶಕ್ಕೆ ವಿಪರೀತ ನಷ್ಟವಾಗುತ್ತಿದೆ ಎಂದು ನಾನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ.

ಆಮೇಲೆ ಡಿಮ್ಯಾಂಡ್ ನಂಬರ್ 10 ರಲ್ಲಿ 71 ಲಕ್ಷ ರೂಪಾಯಿಗಳನ್ನು ಕೇಳಿದ್ದಾರೆ. ಏತಕ್ಕೋಸ್ಕರ ಈ ಬಾಬಿಗೆ ಹಣ ಸಾಲದೆ ಹೋಗಿದೆ? ವಿಪರೀತವಾಗಿ ಮಳೆ ಬಂತು, ಪ್ರವಾಹ ಬಂತು. ಅದಕ್ಕೋಸ್ಕರ ಹೆಚ್ಚಿಗೆ ಹಣವನ್ನು ಖರ್ಚು ಮಾಡಿದ್ದೇವೆ ಎಂದು ಒಂದು ಕಡೆ ಹೇಳುತ್ತಾರೆ. ಆ ಮೇಲೆ ಇನ್ನೊಂದು ಕಡೆ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿರುವ ಸ್ಕೀಮುಗಳಿಗೆ ಹೆಚ್ಚಿಗೆ 40 ಲಕ್ಷ ರೂಪಾಯಿಗಳನ್ನು ಕೇಳಿದ್ದಾರೆ. ಯಾವ ಒಂದು ನಿರ್ದಿಷ್ಟವಾದ ಕೆಲಸ ಕಾರ್ಯಗಳಿಗೆ ಎಷ್ಟು ಹಣ ಬೇಕು ಎಂಬುದನ್ನು ಈ ಬೇಡಿಕೆಯಲ್ಲಿ ಇಟ್ಟಿಲ್ಲ. ಸುಮ್ಮನೆ ಮೊಗಮ್ ಆಗಿ 40 ಲಕ್ಷ ರೂಪಾಯಿಗಳು ಬೇಕು ಎಂದು ಕೇಳಿದ್ದಾರೆ. ಇವೊತ್ತಿನ ದಿವಸ ಸಪ್ಲಿಮೆಂಟರಿ ಬಡ್ಜೆಟ್ಟನ್ನು ವರ್ಷದ

(ಶ್ರೀ ಎಸ್. ಶಿವಪ್ಪ)

ಕೊನೆಯಲ್ಲಿ ಈ ಸಭೆಯ ಮುಂದೆ ತಂದಿದ್ದಾರೆ. ಈಗಲಾದರೂ ಕೂಡ ನಿರ್ದಿಷ್ಟವಾಗಿ ಇಂತಿಂಥಾ ಬಾಬಿಗೆ ಇಷ್ಟು ಹಣ ಬೇಕು ಎಂದು ಇವರು ಕೇಳಿಲ್ಲ. ಆ ಮೇಲೆ ಒಂದು ಕಡೆ 100 ರೂಪಾಯಿಗಳನ್ನು ಕೇಳಿದ್ದಾರೆ. ನ್ಯೂ ಸರ್ವೀಸಿಗೆ ಎಂದು ಕೆಲವು ಕಡೆ ಹಣವನ್ನು ಕೇಳಿದ್ದಾರೆ. ಲೆಕ್ಕಪತ್ರ ಇಲ್ಲದೆ ಎಷ್ಟು ಬೇಕಾದರೂ ಖರ್ಚುಮಾಡುತ್ತಿದ್ದಾರೆ. ಇಂಥಾ ಒಂದು ಖಾತೆಗೆ ಇಷ್ಟು ಹಣ ಬೇಕು ಎಂದು ಕೇಳದೆ ಗೊತ್ತುಗುರಿ ಇಲ್ಲದೆ ಲಕ್ಷಗಟ್ಟಲೆ ರೂಪಾಯಿಗಳನ್ನು ಸಾಂಕೇತಿಕವಾಗಿ ಕೇಳಿದ್ದಾರೆ. ನಮ್ಮ ಹಣಕಾಸಿನ ಪರಿಸ್ಥಿತಿಯ ನಿರ್ದಿಷ್ಟವಾದ ಒಂದು ಲೆಕ್ಕ ನಮಗೆ ಸಿಕ್ಕುತ್ತಿಲ್ಲ. ಇಂಥಾ ಒಂದು ಸಾಂಕೇತಿಕವಾದ ಬೇಡಿಕೆಯನ್ನು ಸರ್ಕಾರದವರು ಕೇಳುವುದರಿಂದ ನಮ್ಮ ದೇಶಕ್ಕೆ ದೊಡ್ಡ ಅಪಾಯ ಬರುತ್ತದೆ.

1-30 P.M.

ಆ ಮೇಲೆ 13ನೆಯ ನಂಬರಿನ ಡಿಮ್ಯಾಂಡ್ ನೋಡಿದರೆ ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಕೆಲಸವನ್ನು ಬೇರೆಯವರಿಗೆ ಸ್ವಲ್ಪ ಭಾಗವಹಿಸಿರುವುದರಿಂದ ಅದಕ್ಕಾಗಿ ಹಣ ಬೇಕಾಗಿದೆ ಎಂದು ಕೇಳಿರುವುದು ಕಂಡು ಬರುತ್ತದೆ. ಅದು ನಿಷ್ಪಕ್ಷಪಾತವಾಗಿ ನಡೆಯಬೇಕೆಂಬ ಉದ್ದೇಶದಿಂದ ಮೊದಲು ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ಈ ನೇಮಕಗಳ ವಿಚಾರವನ್ನು ಸಂಪೂರ್ಣವಾಗಿ ವಹಿಸಲಾಗಿತ್ತು. ಅದೇ ಈ ದಿವಸ ಮೂರನೆಯ ದರ್ಜೆ ನೌಕರರ ನೇಮಕದ ಜವಾಬ್ದಾರಿಯನ್ನು ಪಬ್ಲಿಕ್ ಸರ್ವಿಸ್ ಕಮಿಷನ್ನಿಂದ ವಹಿಸಿಕೊಂಡು ಸರ್ಕಾರ ಅದಕ್ಕಾಗಿ 27 ಸಾವಿರ ರೂಪಾಯಿಗಳ ವೆಚ್ಚದಲ್ಲಿ ಬೇರೆ ಸಿಬ್ಬಂದಿ ನೇಮಿಸಿ ಈ ಹಣಕ್ಕೆ ಮಂಜೂರಾತಿಯನ್ನು ಕೇಳುತ್ತಿದೆ. ಈ ಹೆಚ್ಚುವರಿ ಹಣವೇಕೆ ಖರ್ಚುಮಾಡಬೇಕಾಗಿತ್ತು? ಇದರಿಂದ ಪ್ರಯೋಜನವೇನು? ಇದನ್ನು ತಿಳಿಸಬೇಕಾಗಿದೆ. ಪಬ್ಲಿಕ್ ಸರ್ವಿಸ್ ಕಮಿಷನ್ ಕೆಲಸದಲ್ಲಿ ಈ ರೀತಿ ಪ್ರವೇಶಮಾಡಿ ಅದು ಮಾಡುತ್ತಿದ್ದ ಕೆಲಸದಲ್ಲಿ ಸ್ವಲ್ಪ ಭಾಗವನ್ನು ಇತರರಿಗೆ ವಹಿಸಿರುವುದು ತಪ್ಪು ಎಂದು ನನಗನ್ನಿಸುತ್ತದೆ.

ಇದೇ ಡಿಮ್ಯಾಂಡಿನ ಆರನೆಯ ಐಟಂನಲ್ಲಿ ಅಡ್ವರ್ಟೈಸ್‌ಮೆಂಟ್‌ಗಾಗಿ ಒಂದು ಲಕ್ಷ ರೂಪಾಯಿಗಳನ್ನು ಹೆಚ್ಚಾಗಿ ಕೇಳಿದ್ದಾರೆ. ಮೊದಲು ಬಡ್ಜೆಟ್ಟಿನಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿತ್ತು. ಮತ್ತೆ ಈಗ ಒಂದು ಲಕ್ಷ ರೂಪಾಯಿಗಳಿಗೆ ಸಪ್ಲಿಮೆಂಟರಿ ಬೇಡಿಕೆ ಬಂದಿರುವುದೇಕೆ? ಹಿಂದೆ ಒದಗಿಸಿದ್ದು ಸಾಲದೆ ಬಂತೆ? ಇಷ್ಟು ಖರ್ಚು ಮಾಡಬೇಕಾದ ಪ್ರಮೇಯವೇನಿತ್ತು ಎಂಬುದನ್ನು ನಿರ್ದಿಷ್ಟವಾಗಿ ತಿಳಿಸಿಲ್ಲ. ನಮ್ಮಲ್ಲಿ ಸರ್ಕಾರ ಇನ್‌ಫರ್‌ಮೇಷನ್ ಬುಲೆಟಿನ್ ಹೊರಡಿಸುತ್ತಿದೆ. ಅದೇ ಇಲಾಖೆ ಈ ಕೆಲಸ ಮಾಡಬಹುದಾಗಿತ್ತು. ಚೆನ್ನಾಗಿ ಅಡ್ವರ್ಟೈಸ್ ಆಗಲೆಂದು ಇತರ ಪತ್ರಿಕೆಗಳಲ್ಲಿ ಹಾಕಿಸಿರಬಹುದು. ಆದರೆ ಹಾಗೆ ಮಾಡುವಾಗ ನಿಷ್ಪಕ್ಷಪಾತವಾಗಿ ಯೋಗ್ಯವಾದ ಪತ್ರಿಕೆಗಳಿಗೆಲ್ಲಾ ಅವಕಾಶ ಕೊಟ್ಟಿದ್ದೀರಾ? ಹಾಗೆ ಕೊಡದೆ ತಮಗೆ ಬೇಕಾದವರಿಗೆ ಮಾತ್ರ ಪ್ರೋತ್ಸಾಹ ಕೊಡುವುದು ಸರಿಯಲ್ಲ. ಯಾವ ಯಾವ ಪತ್ರಿಕೆಗಳಲ್ಲಿ ಅಡ್ವರ್ಟೈಸ್ ಮಾಡಿದೆಯೆಂಬುದನ್ನು ತಿಳಿಸಿರುವುದಿಲ್ಲ. ಇದನ್ನು ಸ್ಪಷ್ಟಪಡಿಸಬೇಕು.

ಐಟಂ ನಂಬರ್ 35 ರಲ್ಲಿ ಗವರ್ನರ್‌ರವರಿಗೆ ಡಿಸ್ಕ್ರೀಷನರಿ ಗ್ರ್ಯಾಂಟ್ ಕೊಡುವುದಕ್ಕಾಗಿ 2,70,900 ರೂಪಾಯಿಗಳನ್ನು ಒದಗಿಸಲಾಗಿದೆ. ಈ ಬಾಬತು ಹಿಂದೆ ಆರು ವರ್ಷಗಳ ಹಣ ಏಕೆ ವಿಲೇ ಆಗಲಿಲ್ಲವೆಂಬುದನ್ನು ಹೇಳಬೇಕು. 25,000 ರೂಪಾಯಿಗಳನ್ನು ವರ್ಷವೊಂದಕ್ಕೆ ಒದಗಿಸುತ್ತಿತ್ತು. ಒಪ್ಪಂದದ ಪ್ರಕಾರ ವರ್ಷಕ್ಕೆ 50 ಸಾವಿರ ರೂಪಾಯಿಗಳನ್ನೊದಗಿಸಬಹುದು, ಅದರ ಪ್ರಕಾರ: ೧೯೫೬ ರಿಂದ ೧೯೬೧ ರ ವರೆಗೆ ಐದು ವರ್ಷಗಳ ಹಣ ಒದಗಿಸಿದೆ ಎಂದು ತಿಳಿಸಲಾಗಿದೆ. ಈ ಹಿಂದೆ ಬಡ್ಜೆಟ್ ವರ್ಷೇ ವರ್ಷೆ ಮಾಡುವಾಗ ಒದಗಿಸಬೇಕೆಂಬುದು ಗೊತ್ತಿರಲಿಲ್ಲವೇ? ಇದಕ್ಕಾಗಿ ಈಗೇಕೆ ಸಪ್ಲಿಮೆಂಟರಿ ಬೇಡಿಕೆ ತರಬೇಕಾಗಿತ್ತು? ಈ ಬಾಬಿಗೆ ಹಣ ಒದಗಿಸಬೇಕೆಂಬುದು ಹಿಂದೆ ಗೊತ್ತಿರಲಿಲ್ಲವೇ? ಈ ದಿವಸ ವರ್ಷದ ಕೊನೆಯಲ್ಲಿ, ಫೆಬ್ರುವರಿಯಲ್ಲೇಕೆ ಹಣ ಕೇಳುತ್ತಿದ್ದೀರಿ ಎಂಬುದು ಗೊತ್ತಾಗಲಿಲ್ಲ. ಇಷ್ಟು ದಿವಸಗಳವರೆಗೆ ತಾವೇನು ಮಾಡುತ್ತಿದ್ದಿರಿ? ಸಪ್ಲಿಮೆಂಟರಿ ಬೇಡಿಕೆಯಲ್ಲಿ ಇದು ಬರಲು ಅರ್ಹವಾದ ಅಂಶವೆ? ಈ ಬಾಬಿಗೆ ಮೊದಲೇ ಅವಕಾಶ ಮಾಡಬೇಕಾಗಿತ್ತು. ಅದಕ್ಕೆ ಸಪ್ಲಿಮೆಂಟರಿ ಡಿಮ್ಯಾಂಡ್ ತಂದಿರುವುದು ಸರಿಯಲ್ಲ.

ಆ ಮೇಲೆ ಅರಮನೆ ಬಾಬತ್ತು ವಿದ್ಯುಚ್ಛಕ್ತಿ ಇಲಾಖೆಗೆ ಪಾವತಿ ಮಾಡಲು ೩,೬೭,೦೦೦ ರೂಪಾಯಿಗಳು ಬೇಕೆಂದು ಕೇಳಿದ್ದಾರೆ. ಹಳೆಯ ಬಾಕಿಗಾಗಿ ಈ ಡಿಮ್ಯಾಂಡ್ ನಮ್ಮ ಮುಂದೆ ಬಂದಿದೆ. ಇಂಥಾ ಅಂಶ ಸಪ್ಲಿಮೆಂಟರಿ ಡಿಮ್ಯಾಂಡಿನಲ್ಲಿ ಬರುವುದು ಯೋಗ್ಯವಲ್ಲ. ಇದಕ್ಕೆ ಮೊದಲೇ ಬಡ್ಜೆಟ್‌ನಲ್ಲಿ ಪ್ರಾವಿಷನ್ ಮಾಡಿ ಸಾಲದಿದ್ದರೆ ಸಪ್ಲಿಮೆಂಟರಿ ಬೇಡಿಕೆ ತರುವುದು ಸ್ವಾಭಾವಿಕ. ಹಾಗೆ ಮಾಡದೆ ಐದಾರು ವರ್ಷಗಳ ಬಾಕಿಗಾಗಿ ಈಗ ಹಣ ಕೇಳುವುದನ್ನು ನೋಡಿದರೆ ನಿಜವಾಗಿಯೂ ಹಣಕಾಸಿನ ಲೆಕ್ಕ ಸರಿಯಾಗಿಟ್ಟಿಲ್ಲವೆಂದು ನಿರ್ದಿಷ್ಟವಾಗಿ ಕಾಣುತ್ತದೆ.

ಹೀಗೆ ರೀತಿ ನೀತಿಯಿಲ್ಲದೆ ಕೆಲವು ಅಂಶಗಳನ್ನು ಸಪ್ಲಿಮೆಂಟರಿ ಡಿಮ್ಯಾಂಡ್‌ನಲ್ಲಿ ಸೇರಿಸಿರುವುದನ್ನು ನೋಡಿದರೆ ನಮ್ಮ ಮೈಸೂರು ದೇಶದ ಆರ್ಥಿಕ ಪರಿಸ್ಥಿತಿ ಹೇಗಿದೆಯೆಂಬುದನ್ನು ಅರ್ಥಮಾಡಿಕೊಳ್ಳುವುದಕ್ಕೇ ಸಾಧ್ಯವಿಲ್ಲವಾಗಿದೆ. ನೆನ್ನೆತಾನೆ ಮುಖ್ಯ ಮಂತ್ರಿಗಳು ತಿಳಿಸಿದ ಅಂಕಿಅಂಶಗಳಂತಿದ್ದರೆ ಬಡ್ಜೆಟ್ ಮತ್ತು ಆರ್ಥಿಕ ಪರಿಸ್ಥಿತಿಯನ್ನು ತಿಳಿದು ಒಂದು ಭಾವನೆಯನ್ನು ಪಡೆಯಬಹುದು. ಅದನ್ನು ಬಿಟ್ಟು ಮೊದಲು ಕೊಡುವುದು ಒಂದು ಬಡ್ಜೆಟ್, ಅನಂತರ ಎರಡು ಮೂರು ಸಪ್ಲಿಮೆಂಟರಿ ಬಡ್ಜೆಟ್ ತರುವುದು ಈ ರೀತಿಯಾದರೆ ಹಣಕಾಸಿನ ಪರಿಸ್ಥಿತಿ ಅರ್ಥವಾಗುವುದು ಕಷ್ಟ. ಮನಸ್ಸಿಗೆ ಬಂದ ಹಾಗೆ ಎಸ್ಟಿಮೇಟ್ ಇಲ್ಲದೆ ಪ್ರವಾಸ ವಗೈರೆ ಮಾಡಿ ಸಪ್ಲಿಮೆಂಟರಿ ಬೇಡಿಕೆ ತರಬಹುದು. ಈ ರೀತಿ ಮಾಡುವುದು ಬಹಳ ಅಪಾಯಕರ ಎಂಬುದನ್ನು ಈ ಸಭೆಯ ಮತ್ತು ಮುಖ್ಯ ಮಂತ್ರಿಗಳ ಗಮನಕ್ಕೆ ತರಬೇಕಾಗಿದೆ.

ಅದೇ ರೀತಿಯಲ್ಲಿ ಇವೊತ್ತಿನ ದಿವಸ ಪೋಲೀಸ್ ಇಲಾಖೆಗೆ ೯,೬೫,೦೦೦ ರೂಪಾಯಿಗಳ ಹೆಚ್ಚುವರಿ ಬೇಡಿಕೆಯಿದೆ. ಮೋಟಾರು ವಾಹನಗಳನ್ನು ಕೊಳ್ಳುವುದು ವಗೈರೆಗೆ ೨೪,೩೪,೬೯೭ ರೂಪಾಯಿಗಳು ಬೇಕೆಂದು ಮೊದಲು ಹೇಳಿ ಈಗ ೪·೫೦ ಲಕ್ಷ ರೂಪಾಯಿಗಳು ಬೇಕೆಂದು ಕೇಳುತ್ತಿದ್ದೀರಿ. ಜನರಲ್ ಎಲೆಕ್ಷನ್‌ಗಾಗಿ ಖರ್ಚಾಗಿದೆಯೆಂದು ಹೇಳುತ್ತಿದ್ದೀರಿ. ಇದಕ್ಕಾಗಿ ಹೆಚ್ಚು ವಾಹನಗಳು,

ಸಿಬ್ಬಂದಿ ವಗೈರೆ ಬೇಕಾಯಿತೆಂದು ಹೇಳಿ ಎಷ್ಟು ಬೇಕಾದರೂ ಕೇಳಬಹುದು. ಮಹಾಚುನಾವಣೆ ನಮ್ಮ ಜವಾಬ್ದಾರಿಗೆ ಸೇರಿದ್ದೋ ಅಥವಾ ಕೇಂದ್ರ ಸರ್ಕಾರದ ಜವಾಬ್ದಾರಿಗೆ ಸೇರಿದ್ದೋ ಎಂದು ಕೇಳಬೇಕಾಗಿದೆ, ಹೆಚ್ಚಿನ ಜವಾಬ್ದಾರಿ ಕೇಂದ್ರಕ್ಕೆ ಇದೆ. ಹಾಗಿರುವಾಗ ಬೇರೆ ಬೇರೆ ಡಿಮ್ಯಾಂಡುಗಳಲ್ಲಿ ಚುನಾವಣೆಗಾಗಿ ನಾಲ್ಕೈದು ಲಕ್ಷ ರೂಪಾಯಿಗಳನ್ನು ತೋರಿಸಿದೆ. ಹಾಗೆ ಮಾಡಿ ಸುಮಾರು ೫೦ ಲಕ್ಷ ರೂಪಾಯಿಗಳನ್ನು ಚೂರು ಚೂರು ಮಾಡಿ ತೋರಿಸದೆ ಒಂದೇ ಬಾಬಿನಲ್ಲಿ ಒಟ್ಟು ಹಣವನ್ನೇಕೆ ತೋರಿಸಬಾರದಾಗಿತ್ತು? ಯಾರಿಗೂ ಇದರ ಲೆಕ್ಕ ಸಿಕ್ಕಬಾರದೆಂದು ಬೇರೆ ಬೇರೆ ಡಿಮ್ಯಾಂಡಿನಲ್ಲಿ ಸ್ವಲ್ಪ ಸ್ವಲ್ಪ ತೋರಿಸಿರಬಹುದೆಂದು ತೋರುತ್ತದೆ. ಈ ಬಾಬಿನಲ್ಲಿ ನಮ್ಮ ಸರ್ಕಾರಕ್ಕೆಷ್ಟು ಖರ್ಚಾಗಿದೆ, ಕೇಂದ್ರ ಸರ್ಕಾರಕ್ಕೆಷ್ಟು ಖರ್ಚಾಗಿದೆ ಎಂದು ನಿರ್ದಿಷ್ಟವಾದ ಅಂಕಿಅಂಶಗಳು ಬೇಕಾಗಿವೆ. ಸುಮ್ಮನೆ ಖರ್ಚು ಮಾಡಿ ಚುನಾವಣೆ ಯಶಸ್ವಿಯಾಗಿ ನಡೆಯಿತು ಎಂದು ಹೇಳಿದರೆ ಸಾಲದು. ಚೂರು ಚೂರಾಗಿ ಇಲ್ಲಷ್ಟು ಅಲ್ಲಷ್ಟು ತೋರಿಸುವುದು ಸರಿಯಲ್ಲ. ನಿರ್ದಿಷ್ಟವಾಗಿ ಎಷ್ಟು ಖರ್ಚಾಯಿತು ಎಂದು ಜನರಲ್ ಎಲಕ್ಷನ್ನಿಗೆ ಬೇರೊಂದು ಕಲಮುಮಾಡಿ ತೋರಿಸಿದ್ದರೆ ಚೆನ್ನಾಗಿತ್ತು.

ಇನ್ನು ವಿದ್ಯಾಭ್ಯಾಸದ ಡಿಮ್ಯಾಂಡು ನೋಡಿ ನಾನು ಮೊದಲೇ ಹೇಳಿದಹಾಗೆ, ಈ ಬಾಬಿನಲ್ಲಿ ಪ್ರತಿಯೊಂದು ಕಡೆಯಲ್ಲಿಯೂ ಮೊಗುಮ್ಮಾಗಿ ಹೇಳಿದ್ದೀರೇ ಹೊರತು ನಿರ್ದಿಷ್ಟವಾಗಿ ಎಷ್ಟು ಬೇಕೆಂದು ಹೇಳುವುದಿಲ್ಲ. ಸುಮ್ಮನೆ ಸಾಂಕೇತಿಕವಾಗಿ 100 ರೂಪಾಯಿ ಬೇಕೆಂದು ಹೇಳಿಬಿಟ್ಟಿದ್ದೀರಿ. ಹೀಗೆ ಕೇಳುವುದರ ಉದ್ದೇಶವೇನೆಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕೆಂದು ಕೇಳುತ್ತೇನೆ. ಆರ್ಥಿಕ ಮಂತ್ರಿಗಳೂ, ವಿದ್ಯಾಮಂತ್ರಿಗಳೂ ಹಾಗೂ ದೇಶದ ಮುಖ್ಯಮಂತ್ರಿಗಳೂ ಒಬ್ಬರೇ ಆಗಿರುವುದರಿಂದ ತಮಗೆ ಎಲ್ಲವನ್ನೂ ವಿವರವಾಗಿ ತಿಳಿಸಲು ಬಿಡುವಿಲ್ಲವೆಂದು ಹೇಳಬಹುದು. ಆದರೂ ಕೆಲವು ವಿಷಯಗಳಲ್ಲಿ ನಿರ್ದಿಷ್ಟವಾಗಿ ಹೇಳಲು ಸಾಧ್ಯವಿದೆ. ಸ್ಕಾಲರ್‌ಷಿಪ್‌ಗಳನ್ನು ಕೊಡುವುದಕ್ಕಾಗಿ ಇಷ್ಟು ಜನರಿಗೆ ಹೆಚ್ಚಿಗೆ ಸಹಾಯ ಕೊಡಬೇಕಾಗಿ ಬಂದಿರುವುದರಿಂದ ಇಷ್ಟು ಹೆಚ್ಚಿಗೆ ಹಣ ಬೇಕೆಂದು ಕೇಳಬಹುದಾಗಿತ್ತು. ಆಗ್ಗೆ ನಮಗೂ ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಕೊಡಬಹುದು ಎಂದು ಹೇಳುವುದಕ್ಕೆ ಸಹಾಯವಾಗುತ್ತಿತ್ತು. ಹಾಗೇನೂ ವಿವರಗಳನ್ನು ಕೊಡದೆ, ಸಾಂಕೇತಿಕವಾಗಿ ಕೇಳಿ, ರಿಸರ್ವ್‌ನಲ್ಲಿ ಹಣವಿದೆ, ಅದರಿಂದ ಖರ್ಚುಮಾಡಿಕೊಳ್ಳುತ್ತೇವೆಂದು ಹೇಳುವ ನೀತಿ ಸರಿಯಲ್ಲ.

ಇದೇ ವಿದ್ಯಾಭ್ಯಾಸದ ಡಿಮ್ಯಾಂಡಿನಲ್ಲಿ 9ನೆಯ ಐಟಂನಲ್ಲಿ ಗ್ರಾಮ ಸೇವಾ ಮಂಟಪ ಹನುಮನಬಟ್ಟಿ, ಧಾರವಾಡ ಜಿಲ್ಲೆಗೆ ಒಂದು ಲಕ್ಷ 97 ಸಾವಿರ ಚಿಲ್ಲರೆ ರೂಪಾಯಿಗಳು ಬೇಕೆಂದು ಹೇಳಿದ್ದೀರಿ. ಈ ವಿದ್ಯಾ ಮಂದಿರ ಯಾವುದು? ದೇಶದ ಇತರೆ ಕಡೆಗಳಲ್ಲಿ ಇಂಥದು ಇದೆಯೇ? ಯಾವ ತೆರದ ವಿದ್ಯಾ ಮಂಟಪವೋ ನನಗೆ ಗೊತ್ತಿಲ್ಲ. ಇಂಥ ಮಂದಿರ ಕೇವಲ ಧಾರವಾಡ ಜಿಲ್ಲೆಯಲ್ಲಿ ಏಕೆ ಸ್ಥಾಪನೆಯಾಯಿತು? ಇದರ ಕಾರ್ಯಕಲಾಪಗಳೇನು? ಕಾರ್ಯಕ್ಷೇತ್ರವೇನು? ರೀತಿನೀತಿಗಳೇನು? ಅದರ ಬಗ್ಗೆ ನಿಯಮಾವಳಿಗಳೇನಾದರೂ ಇವೆಯೇ ಎಂಬ ವಿಚಾರದಲ್ಲಿ ವಿವರಗಳನ್ನು ಸಭೆಯ ಮುಂದಿಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಏಕೆಂದರೆ ವಿಶೇಶತರವಾದ ಇಂಥ ಒಂದು ಸಂಸ್ಥೆಯಿರುವುದು ನಮ್ಮೆಲ್ಲರಿಗೂ ಆಶ್ಚರ್ಯವನ್ನುಂಟುಮಾಡುತ್ತಿದೆ. ಏಕೆಂದರೆ, ವಿದ್ಯಾಭ್ಯಾಸದ ವಿಷಯದಲ್ಲಿ ನನಗೂ ತಕ್ಕಮಟ್ಟಿಗೆ ಅನುಭವವಿದೆ; ಇದು ಯಾವ ತರದ ಮಂದಿರವೋ ನನಗೆ ಗೊತ್ತಿಲ್ಲ! ಧಾರವಾಡ ಜಿಲ್ಲೆಗೆ ಮಾತ್ರ ಏಕೆ ಇಂಥ ಸಂಸ್ಥೆ ಬಂತು? ಇದಕ್ಕಾಗಿ ವಿಶೇಷ ಪ್ರಾವಿಷನ್ ಮಾಡುವ ಆವಶ್ಯಕತೆಯಾದರೂ ಏನು ಎಂಬುದನ್ನು ತಿಳಿಸಬೇಕೆಂದು ಹೇಳುತ್ತೇನೆ.

ನಾನು ಈ ವಿದ್ಯಾಭ್ಯಾಸದ ಬೇಡಿಕೆಯಮೇಲೆ ಮಾತನಾಡುವ ಈ ಸಂದರ್ಭದಲ್ಲೇ ಒಂದು ವಿಷಯದ ಕಡೆಗೆ ಸರ್ಕಾರದವರ ಗಮನವನ್ನು ಸೆಳೆಯಬಯಸುತ್ತೇನೆ. ತಾವಿಲ್ಲಿ ಅನೇಕ ಬಾಬುಗಳಿಗೆ ಸಪ್ಲಿಮೆಂಟರಿ ಹಣ ಕೇಳುವ ಸಂದರ್ಭದಲ್ಲಿ ಹಳ್ಳಿಗಾಡುಗಳಲ್ಲಿರುವ ಸ್ಕೂಲು ಬಿಲ್ಡಿಂಗ್‌ಗಳಿಗಾಗಿ ಏಕೆ ಒಂದು ಬೇಡಿಕೆಯನ್ನಿಡಲಿಲ್ಲವೋ ಗೊತ್ತಿಲ್ಲ. ಅನೇಕ ಹಳ್ಳಿಗಳಲ್ಲಿ ಸ್ಕೂಲುಗಳು ಮುರುಕಲು ಮನೆಗಳಲ್ಲೋ, ಜಗಲಿಯ ಮೇಲೊ, ನಡೆಯುತ್ತಿರುವುದನ್ನು ನಾವೆಲ್ಲಾ ಚುನಾವಣೆಗಳ ಕಾಲದಲ್ಲಿ ಅತ್ತಕಡೆ ಹೋದ ಸಮಯದಲ್ಲಿ ನೋಡಿದ್ದೇವೆ. ದೇಶದ ಭಂಡಾರದಂತಿರುವ ನಮ್ಮ ಮಕ್ಕಳು ಕಗ್ಗತ್ತಲಿನಲ್ಲಿ ತೊಳಲುತ್ತಿದ್ದಾರೆ. ಇಂಥದಕ್ಕಾಗಿ ಹೆಚ್ಚಿನ ಹಣ ಕೇಳಿದ್ದರೆ ನಾವೆಲ್ಲಾ ಎಷ್ಟೋ ಸಂತೋಷಪಡುತ್ತಿದ್ದೆವು.

ಡಿಮ್ಯಾಂಡ್ 29, ಸಿವಿಲ್ ವರ್ಕ್ಸ್ ಬಗ್ಗೆ ಹೇಳುವುದಾದರೆ, ತಾವು ಈ ಬಾಬಿನಲ್ಲಿ ಸುಮಾರು 4 ಕೋಟಿ 62 ಲಕ್ಷ ರೂಪಾಯಿಗಳನ್ನು ಕೇಳುತ್ತಿದ್ದೀರಿ. ಇದರಲ್ಲಿ ಯಾವುದೊಂದು ಬಾಬು ನೋಡಲಿ 10 ಲಕ್ಷ 20 ಲಕ್ಷಕ್ಕೆ ಕಡಮೆಯಿಲ್ಲ. ಇಷ್ಟೊಂದು ಹೆಚ್ಚಿಗೆ ಬೇಕೆಂದು ಕೇಳುವ ಸಮಯದಲ್ಲಿ, ಹಿಂದೆ ಕೊಟ್ಟಿದ್ದ ಹಣವೆಷ್ಟು, ಎಷ್ಟು ಖರ್ಚಾಯಿತು, ಎಷ್ಟುಮಟ್ಟಿಗೆ ಕಾಮಗಾರಿ ನಡೆದಿದೆ ಎಂಬುದನ್ನಾದರೂ ತಿಳಿಸುವುದು ಬೇಡವೆ? ಈ ಹಣವೆಲ್ಲಾ ಕೇವಲ ಕೆಲವು ಜಿಲ್ಲೆಗಳಲ್ಲಿ, ಮಂತ್ರಿಗಳ ಪ್ರಭಾವವಿರುವ ಜಿಲ್ಲೆಗಳಲ್ಲಿ ಮಾತ್ರ ಖರ್ಚಾಗಿದೆ ಎಂದು ನನಗೆ ತಿಳಿದುಬರುತ್ತದೆ. ಇಂಥ ನೀತಿಯನ್ನು ತಾವೇಕೆ ಅನುಸರಿಸುತ್ತಿದ್ದೀರಿ ಎಂದು ನಾನು ಕೇಳುತ್ತಿದ್ದೇನೆ. ಅದ್ದರಿಂದ, ತಾವು ಈ ಹಣವನ್ನು ಹಂಚಿಕೆ ಮಾಡುವ ಕಾಲದಲ್ಲಿ, ದೇಶದಲ್ಲಿ ನಿಜವಾಗಿ ಎಲ್ಲಿ ಕೊರತೆ ಯಿದೆಯೋ ಅಲ್ಲಿಗೆ ಸಹಾಯ ದೊರಕುವಂತೆ ಧರ್ಮರೀತಿಯಿಂದ ಹಂಚಿಕೆ ಮಾಡಬೇಕೆಂದು ಹೇಳುತ್ತೇನೆ. ಈಗ ಸರಿಯಾಗಿ ಹಂಚಿಕೆಯಾಗುತ್ತಿಲ್ಲವೆಂದು ನಾನು ಅಂಕಿಅಂಶಗಳ ಮುಖಾಂತರ ಕೊಡಬಲ್ಲೆ.

ಕೊನೆಯದಾಗಿ ‘stores’ ಗಳಿಗೆಂದು ಹಣ ಕೇಳಿರುವುದು ಇಲ್ಲಿ ಕಂಡುಬರುತ್ತದೆ. ಈಬಗ್ಗೆ ಕೇಳಿರುವ ಹಣವನ್ನು ನೋಡಿದರೆ, ಕೆಲವು ಭಾಗಗಳಲ್ಲಿ ಹೇಗಿದೆ ಎಂದರೆ, ಮೊದಲು ಬಜೆಟ್ ಪ್ರಾವಿಜನ್ ಎಷ್ಟಿತ್ತೋ ಅದಕ್ಕಿಂತಲೂ ಹೆಚ್ಚಾಗಿಯೇ ಈಗ ಕೇಳುತ್ತಿದ್ದೀರಿ. ಇದು ಎಷ್ಟರಮಟ್ಟಿಗೆ ಹೋಗಿದೆಯೆಂದರೆ ‘ಹನುಮಂತರಾಯನ ಬಾಲ ಬೆಳೆದಂತೆ’ ಎನ್ನಬಹುದು.

ಶ್ರೀ ಎಸ್. ಆರ್. ಕಂಠಿ.—ಸ್ವಲ್ಪ ಐಟಂ ನಂಬರು ಹೇಳಿ.

ಶ್ರೀ ಎಚ್. ಶಿವಪ್ಪ.—18ನೆಯ ನಂಬರು ನೋಡಿ, ಸ್ವಾಮಿ. 27 ಲಕ್ಷ ರೂಪಾಯಿಗಳನ್ನು ಕೇಳಿದ್ದೀರಿ. ಮೊದಲು ತಾವು ಎಷ್ಟು provide ಮಾಡಿಕೊಂಡಿದ್ದಿರೋ ಅದಕ್ಕೂ ಇನ್ನೂ ಸ್ವಲ್ಪ ಜಾಸ್ತಿಯೇ ತಾವು ಕೇಳಿದ್ದೀರಿ. ಅದರಲ್ಲೂ ‘Stores’ ವಿಚಾರದಲ್ಲಿ ನಿರ್ದಿಷ್ಟವಾಗಿ ಮುಂಚೆಯೇ ಹೇಳುವುದಕ್ಕೇನೂ ಕಷ್ಟ

(ಶ್ರೀ ಎಸ್. ಶಿವಪ್ಪ)

ವಿರಬಾರದು. ಅಂಥಾದ್ದರಲ್ಲಿ ಈ ರೀತಿ ಕೇಳುವುದು ಎಂದರೆ ನಿಮ್ಮ ಹಣಕಾಸಿನ ಏರ್ಪಾಡು ಎಷ್ಟು ಚೆನ್ನಾಗಿದೆಯೆಂದು ವ್ಯಕ್ತವಾಗುತ್ತದೆ. ಹಣಕಾಸಿನ ವಿಷಯದಲ್ಲಿ ವರ್ಷಕ್ಕೆ ಮುಂಚೆಯೇ ಮೂಲ ಬಡ್ಜೆಟ್ ಮಾಡುವ ಕಾಲದಲ್ಲೇ, ನಮಗೆ ಮುಂದಿನ 12 ತಿಂಗಳುಗಳಲ್ಲಿ ಏನೇನು ಖರ್ಚುವೆಚ್ಚವಿದೆಯೆಂದು ನಿರ್ದಿಷ್ಟವಾಗಿ, ಶಾಸ್ತ್ರೀಯವಾಗಿ ಪರಿಶೀಲಿಸಿ ಹೇಳುವಂಥ ಸಂಸ್ಥೆ ನಮಗೆ ಬೇಕು. ನೀವು ಈಗ ಇಡುತ್ತಿರುವ ಸಪ್ಲಿಮೆಂಟರಿ ಬಡ್ಜೆಟ್ ನೋಡಿದರೆ ನಿಮ್ಮಲ್ಲಿ ಅಂಥ ಮೆಷಿನರಿ ಇಲ್ಲವೆಂದು ಕಾಣುತ್ತದೆ. ಅಥವಾ ಸರಿಯಾದ ಬಡ್ಜೆಟ್ ತಯಾರು ಮಾಡುವ ಶಕ್ತಿ ನಿಮಗಿಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಕೆಲವು "Book Adjustments" ಗಳಿವೆ.

ಶ್ರೀ ಎಸ್. ಶಿವಪ್ಪ.—ಆದರೂ ಕೋಟಿ-ಕೋಟಿ ಗಟ್ಟಲೆ 20-30 ಕೋಟಿ ಸಪ್ಲಿಮೆಂಟರಿ ಬಡ್ಜೆಟ್ ಮಂಡಿಸುವುದೆಂದರೆ, ನಿಮ್ಮ ಆರ್ಥಿಕ ನೀತಿ ಸರಿಯಾಗಿಲ್ಲವೆಂದು ನಾನು ಹೇಳಬಯಸುತ್ತೇನೆ.

ಒಟ್ಟಿನಲ್ಲಿ ಹೇಳುವುದಾದರೆ, ಇಂದು ನಮ್ಮ ಆರ್ಥಿಕ ಮಂತ್ರಿಗಳು ಒಂದು ವಿಚಿತ್ರರೀತಿಯ ಬಡ್ಜೆಟನ್ನು ನಮ್ಮ ಮುಂದಿಟ್ಟಿದ್ದಾರೆ. ಅತ್ತ ಶಾಸನಸಭೆಯ ಕಾರ್ಯಕಲಾಪಗಳು ತಿರುಗು ಮುರುಗಾಗಿವೆ. ಏಕೆಂದರೆ ನೂತನವಾಗಿ ರಚಿತವಾದ ಸಭೆಯ ಮುಂದೆ, ಸಪ್ಲಿಮೆಂಟರಿ ಬಡ್ಜೆಟ್ಟು ಮೊದಲನೆಯದಾಗಿ ಇಡಲ್ಪಟ್ಟಿದೆ. ಇದು ಹಿಂದೆಯೇ ಬರಬೇಕಾಗಿತ್ತು. ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುವುದಕ್ಕೆ ಮೊದಲೇ ಬರಬೇಕಾಗಿತ್ತು. ಇವೂತ್ತು ನಿಮ್ಮ ಈ ಸಭೆಯ ಕಾರ್ಯಕಲಾಪಗಳು ಹಿಂದುಮುಂದಾಗಲು ಷುರುವಾಗಿದೆ. ಮೊದಲನೆ ದಿವಸವೇ ಹೀಗೆ ಲಾಗ ಹಾಕುತ್ತಿದ್ದೀರಿ. ಏತಕ್ಕೆ ಈ ರೀತಿಯಲ್ಲಿ ಆಯಿತು ಎಂಬುದನ್ನು ನಾನು ಇಲ್ಲಿ ವಿಷಾದದಿಂದ ಹೇಳಬೇಕಾಗಿದೆ. ಈ ರೀತಿ ಲಾಗ ಹಾಕುವ ನೀತಿ ಸರಿಯೇ, ನ್ಯಾಯವೇ ಎಂಬುದಾಗಿ ನಾನು ಈ ಸಮಯದಲ್ಲಿ ಕೇಳುತ್ತೇನೆ. ಈಗ ನಾನು ಈ ಸಭೆಯ ಮುಖ್ಯಮಂತ್ರಿಗಳಿಗೆ ಮತ್ತೊಮ್ಮೆ ಹೇಳುತ್ತೇನೆ. ಸಪ್ಲಿಮೆಂಟರಿ ಬಡ್ಜೆಟ್ಟಿನ ಮೇಲೆ ಮಾತನಾಡುವಾಗ ಕೊನೆಯದಾಗಿ ಒಂದು ಮಾತನ್ನು ಕೇಳಿಕೊಳ್ಳುತ್ತೇನೆ. ದೇಶದಲ್ಲಿ ಜನಗಳಿಗೆ ಕುತೂಹಲವನ್ನು ಎಬ್ಬಿಸುವ ವಿಷಯ; ಎಂದರೆ ಮಂತ್ರಿಮಂಡಲ ವಿಚಾರ. ಆ ವಿಷಯದಲ್ಲಿ ಮುಖ್ಯಮಂತ್ರಿಗಳಾದವರು ಈ ಸಭೆಯ ನಂಬಿಕೆಗೆ ಪಾತ್ರರಾಗಬೇಕು. ನಿರ್ದಿಷ್ಟವಾಗಿ ಮಂತ್ರಿಮಂಡಲದ ಸಂಖ್ಯೆ ಎಷ್ಟು ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿಬಿಡಲಿ, ಸಾಕು. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

I am asking the Leader of the House to place before the House what exactly is the size of his Cabinet.

Sri G. VENKATAI GOWDA (Palyam).—The estimates for the year 1961-62 by way of second instalments have been placed before us. This is in addition to the first instalment which had already been placed before us in the month of September 1961.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನನ್ನಲ್ಲಿ ಒಂದು ಸಂದೇಹ ಬಂದಿದೆ. ನೆನ್ನೆ ದಿನ ಮುಖ್ಯಮಂತ್ರಿಗಳು ತಮ್ಮ ಭಾಷಣವನ್ನು ಓದಿದರು. ಈಗ ಸಪ್ಲಿಮೆಂಟರಿ ಡಿಮ್ಯಾಂಡ್‌ಮೇಲೆ ಮಾತನಾಡಬೇಕು ಎಂದು ಹೇಳಿದರೆ ಹೇಗೆ? ಇದರಲ್ಲಿರುವುದು ಮೈಸೂರು ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಎಸ್. ಆರ್. ಕಂಠಿಯವರು ಮಾಡಿದ ಭಾಷಣವೆಂದು. ಅಂದಮೇಲೆ ಇದರಲ್ಲಿರುವುದನ್ನು ಏನು ಮಾಡೋಣ?

Mr. SPEAKER.—The Hon'ble Member is not a stranger to the House. He knows that when the supplementary demand in on the anvil and is being discussed, he should not raise any other point.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ಅನುಭವದಿಂದಲೇ ತಮ್ಮನ್ನು ಕೇಳುತ್ತಿದ್ದೇನೆ. ಅನೇಕ ಸಂದರ್ಭಗಳಲ್ಲಿ ಹಣಕಾಸಿನ ಮಂತ್ರಿಗಳು ಮಾಡಿದ ಭಾಷಣದ ಪ್ರತಿ ಮತ್ತು ನಮಗೆ ಒದಗಿಸಿರುವ ಅದಕ್ಕೆ ಸಂಬಂಧಪಟ್ಟ ಸಾಹಿತ್ಯ-ಇವೆಲ್ಲದರ ಮೇಲೆ ಮಾತನಾಡಿದ್ದೇವೆ. ಅಂದಮೇಲೆ ಮುಖ್ಯಮಂತ್ರಿಗಳು ಸಪ್ಲಿಮೆಂಟರಿ ಡಿಮ್ಯಾಂಡ್‌ಮೇಲೆ ಸದಸ್ಯರು ಮಾತನಾಡುವಾಗ,

"You can cover the entire budget", ಎಂದು ನಮಗೆ ಹೇಳಿದ್ದಾರೆ.

Mr. SPEAKER.—The Hon'ble Member Sri G. Venkatai Gowda may continue his speech.

Sri G. VENKATAI GOWDA.—The first instalment amounted to more than Rs. 4 crores. Now you are asking this House to sanction about Rs. 20 crores. So, by way of first and second instalments of supplementary estimates, the Government have spent in the course of this year which has not been provided for in the original budget nearly Rs. 24 crores. Out of this amount, you were pleased to say that the expenditure met from revenue alone comes to nearly Rs. 7 crores. Why I am raising this subject is simply for the purpose of knowing what the financial position of the State would be if this provision had been made in the Budget Estimates of 1961-62. I am not saying that the Government is not entitled to ask for Supplementary Demands. They are perfectly entitle to, provided the demands are consistent with the demands laid down in this behalf. Article 205 of the Constitution provides that the Government is entitled to ask for supplementary demands if it finds that certain amounts that have been earmarked for certain works are found insufficient in the course of the year or if a need has arisen during the current financial year, the performance of which is absolutely

essential in the interest of the State and in such a contingency the Government can take up that work.

My submission is after going through the several demands that have been incorporated in the several supplementary demands, I find more than 15 demands could have been foreseen even at the time when the original budget for 1961-62 was prepared or they could have been safely included in the Budget Estimates for 1962-63 which the Hon'ble Chief Minister was pleased to present to us yesterday. I mean to say that several of these things could have been foreseen.

Take for example, under 'new service,' they bring anything and everything. If the Government is not in a position to foresee a contingency, then they could take up such things if there is need. But here are several items which the Government could have thought of even at the time of preparing the financial statements fo 1961-62. If they had really included those items in the original Budget, I submit that the financial picture of the State would have been upset. According to the Chief Minister who presented us yesterday with statistics, the revenue deficit according to the revised estimates is Rs. 411.08 lakhs. The first instalment of expenditure met from revenue is about Rs. 91 lakhs and the expenditure met from revenue by way of second instalment is more than Rs. 6 crores. If you take these into account, the deficit would be more than Rs. 7 crores during the year 1961-62. So, I have come to the conclusion that these things are being hushed up just to avoid a huge deficit being shown. That would not be fair and in the interest of showing a clear picture of the finances of the State because in spite of the best efforts, even the Chief Minister would not be able to show what the financial position of the State is. Yesterday he was pleased to concede that it was some what gloomy. I appreciate the view that he has taken which is more or less correct. But taking into account those revenue deficits as a result of supplementary demands, the financial position would be more gloomy in as much as for the year 1961-62 the revenue deficit alone would be more than Rs. 7 crores as against Rs. 411.08 mentioned by the Hon'ble Chief Minister yesterday. Sir, there was no need to take up this year those works which have not been provided for in the Budget. They could have been safely deferred and included in the budget for 1962-63. The Chief Minister has stated that the capital outlay not met from revenue is nearly Rs. 954 lakhs. When such is the case, is there any justification for the Government to come forward by way of supplementary demands asking for money which they could have easily deferred ? No doubt, they are also not included in the Plan or original Budget estimates and this House could not give its approval for them.

I shall show how the Government were not justified in asking for them. So far as Demand No. 5 is concerned, Sri. Shivappa has already pointed out that they are asking for Rs. 50 lakhs for supplying sleepers. If they had given corresponding receipts under that head, it would have been possible to correctly assess the percentage of income that we are spending towards expenses. In respect of afforestation, I should say that it has become a total failure in the State of Mysore. That is my impression because in my own Taluk they have spent lakhs and lakhs of rupees for afforestation, but nothing has come out as a result of afforestation. I request the Hon'ble Minister in charge of Forests at least to take interest and see that the money spent for afforestation works, is really spent usefully for the benefit of the State.

With regard to Demand No. 7, sanction was accorded in 1961 for the appointment of staff for the enforcement of the Mysore Motor Vehicles (Taxation on Passengers and Goods) Act, 1961 for inspection of Stage Carriages, Goods Vehicles, collection of revenue and maintenance of accounts involving an average expenditure of Rs. 3,31,692 per annum. They have spent it and they have treated it as a new service. My submission is that the Mysore Motor Vehicles (Taxation on

(SRI G. VENKATAI GOWDA)

Passengers and Goods) Act, 1961, was passedin the year 1961 and even if they wanted money for the establishment and appointment of some staff, they could have foreseen all those things. They did not do it. Even otherwise, they could have deferred it. My submission is that they have not shown what the corresponding yield is by making such an appointment.

2-00 P.M.

We know that in every district there is the Regional Transport Officer and his establishment. They could as well carry out the provisions of this Mysore Motor Vehicles (Taxation on Passenger and Goods) Act. Most of the Private operators have chosen to compound the tax instead of taxing the passenger and submitting returns, etc. The work under the provisions of this Act is too simple. The existing staff under the R.T.O. is already sufficient and this additional payment for the appointment of the staff is unnecessary and this amount is wasteful expenditure in my opinion and this could have been easily avoided. That they have not chosen to consider is my objection.

Coming to Demand No. 10, they have asked for 31 lakhs of rupees over and above 40 lakhs in view of the increased expenditure towards several works, sustained heavy damages, etc. My submission is that in the first instalment of supplementary estimates, they took the approval of the House for a sum of 155 lakhs in this connection. They have provided out of that sum of Rupees forty lakhs and now they say it is quate. I do not know how far the flood victims have been rehabilitated. So far as my knowledge goes, no doubt, the Government have provided money. But how far the flood victims have been benefited by the amount provided, is for the Government to consider dispassionately. Several victims have not been given the relief they deserved and that the Government wanted them to get. As a matter of fact interest-free loans have been granted by the Government for these flood victims. But they have fixed Rs. 200 as the price for an acre of wet land and Rs. 50 for an acre of dry land. Supposing a man possesses four acres of land and his land is damaged his land is valued at Rs. 800. In reality, it could have fetched him four or five thousand rupees. But if the Tahsildar values it at Rs. 800 and if there is an encumbrance of a thousand rupees, the victims cannot be given any relief according to the rules framed by Government. I request the Government to re-examine and consider what would be the price that wet land would fetch. But if they assess the wet land at Rs. 200 per acre, the victim cannot get any loan, even if the Government wants to help and protect the ryot. I request the Government to re-examine and see that all flood victims are given interest free loans which Government generously have granted. The victims are not benefited because, the rules that are there, are strictly followed by the Government servants, and as a result this lacunae is there.

So far as the advertisement charges are concerned, they have asked for a lakh of rupees. I do not know whether there is any justification to increase the expenditure.

In item No. 36 of Demand No. 13—other items, there is "the question of payment of arrear bills on installations and maintenance charges in respect of Palace Electrical Installations under consideration of Government and it has been decided to settle the bills for the period prior to 31st October 1956. amounting to Rs. 2,04,721—59 N.P Further the bills on account of Royalty on street lights for the period from 1st July 1960 to end of December 1961, amounting to Rs. 208, 251 64 N.P. have also been received from the Mysore State Electricity Board." Sir, this is a thing that the Government knew even before the preparation of the original Budget estimates for 1961-62. Therefore, waht prevented the Government from not including these amounts in the original estimates? They knew that these bills had to be paid. It is a matter relating to the period prior to 31st October 1956. They were not included in the Budget for 1956 nor in the *Budgets of* the later years: and now they come

forward and ask the approval of this House for the payment of the arrears in these supplementary demands. I submit that this is a thing which cannot be justified in the present situation, because they knew it before. They could as well have included it in the original estimates.

As regards Demand No. 17, items 2 to 5 and 8—all these have already been dealt with by my friend. The expenditure is anaccount of the drafting of the Police personnel for duties in connection with the General Elections. When they knew that this amount had to be paid, sufficient provision should have been made in the original estimates. I do not think there is any reason for asking for this expenditure now, under the supplementary estimates. Under item No. 6, a sum of Rs. 24 lakhs had already been sanctioned and now they require another sum of eight lakhs. I do not know how far they are justied in asking for this amount. It is the same case under item No.7. If they wanted the monyes for the reorganisation of the existing M.S.R.P. they could have included this amount in the regular budget for 1962-63. Why should they include this amount in the supplementary demands, where moneys are being sanctioned for a period of about three to five months? On the fifth March they have drawn a sum of Rs. 15,000 from the Contingency Fund. As a matter of principle that I am saying they need not have asked for this amount in the Supplementary estimates. Under Demand No. 24 it is remarked that—

> "the Government of India have recently communicated their concurrence for the Centrally Sponsored Schemes for the Welfare of Scheduled Castes and Excriminal Tribes at a total cost of Rs.5.28 lakhs..........The expenditure is reimbursable by Government of India."

We do not know when the Government of India sent that communication. It is said recently, Is it June, July or August or what month? This is a concurrence. Onthe 24th February 1962 Government issued an order. It goes from the Vidhana Soudha and reaches the taluk heaadquarters by the end of February. And in the month of March, they expect the entire sum to be spent before the close of 31st March 1962.Is it humanly possible? But they loudly say that they have sanctioned five lakhs of rupees for the welfare of the Scheduled Castes and ex-criminal tribes. But could this amount be spent before 31st March 1962? They cannot and inevitably they will have to surrender the amount. This shows, how far the Government are affording benefits to the scheduled castes and ex-criminal tribes and other backward classes. I know that about two years ago, an order went from the Vidhana Soudha on the 31st March 1962, which reached the District Office the same day and the District Head was asked to spend the amount on that very day. Was it humanly possible? I submit that it is merely ridiculous.

Then under Demand No. 27 under Grant-in-aid for the running of Khadi and Village Industries, the explanatory note says that "sanction has been accorded to the payment of a block grant of Rs. five lakhs to the Khadi Board in addition to the payment of grant-in-aid..........I do not know what reasons prompted the Government to take such a decision. They say that the Planning Commission have intimated that the Khadi and Village Industries Board are Statutory Bodies and therefore commitments have to be made. They say that it is a New Service,with the result, that several items which do not appear to be justified, have been placed before the Hon'ble House for approval. They could have been brushed aside for the moment. You will find that there are severalitems like construction of *Pravasi Mandirs* in so many taluk headquarters. They could have very well deferfed this item. My feeling is that these things have been done in order to keep it in darkness so far as the finances of the State are concerned.

With these observations I wish to submit that several demands contained in this Supplementary Estimate do not justify our approval.

2-30 P.M.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ ಅಧ್ಯಕ್ಷರೇ, ತಾವು ಅಧ್ಯಕ್ಷ ಪಟ್ಟವನ್ನೇರಿದಾಗಲೇ ತಮ್ಮಲ್ಲಿ ಒಂದು ವಿಚಾರವನ್ನು ಮನವಿ ಮಾಡಿಕೊಂಡೆ. ರಾಮ ರಾಜ್ಯದಲ್ಲಿ ಭರತನ ಪಟ್ಟಾಭಿಷೇಕವಾಗಿದೆಯೆಂದು ಹೇಳಿದೆ. ರಾಮ ಅರಣ್ಯವಾಸದಲ್ಲಿರುವಾಗ ಈ ದಿನ ಅರಣ್ಯಮಂತ್ರಿಗಳು ಅರಣ್ಯ ಶಾಖೆಗಾಗಿ ಹೆಚ್ಚುವರಿ ಬೇಡಿಕೆಯನ್ನು ನಮ್ಮ ಮುಂದಿಟ್ಟಿದ್ದಾರೆ. ಇದರಿಂದ ನಾನು ಹೇಳಿದುದು ಸರಿಯೆಂದು ಗೊತ್ತಾಗುತ್ತದೆ. ರಾಮ ಕಾಡಿಗೆ ಹೋಗಿದ್ದಾನೆ, ಭರತನಿಗೆ ಪಟ್ಟಾಭಿಷೇಕವಾಗಿದೆ. ಇಂಥ ಸಮಯದಲ್ಲಿ ದೇಶದ ಆಡಳಿತ ಸುಗಮವಾಗಿ ನಡೆಯಬೇಕು, ದೇಶಕ್ಕೆ ಕಲ್ಯಾಣವಾಗಬೇಕೆಂದು ಜನ ನಿರೀಕ್ಷಿಸುವುದಾದರೂ ಹೇಗೆ? ರಾಮನ ಬರುವಿಕೆಯನ್ನು ಶಬರಿ ಕಾದಿರುವಳು ಎನ್ನುವ ಹಾಗಿದೆ. ಅರಣ್ಯ ಖಾತೆಯಿಂದ ಪ್ರಾರಂಭವಾದ ಬೇಡಿಕೆಗಳನ್ನು, ಸರ್ಕಾರ ನಡೆಯುತ್ತಿರುವುದನ್ನೂ, ಖೋತಾ ಬಡ್ಜೆಟನ್ನೂ ನೋಡಿದರೆ, ಇದೆಲ್ಲ ದೇಶದ ಕಲ್ಯಾಣಕ್ಕಲ್ಲವೆಂದು ಈ ಸಭೆಯ ಮುಂದೆ ಖಂಡಿತವಾಗಿ ಹೇಳಬೇಕಾಗಿದೆ. ಈಗ ಮುಖ್ಯ ಮಂತ್ರಿಗಳು ಮಾಡಿದ ಭಾಷಣದ ಮೇಲೆ ಹೇಳ ಬೇಕೇ, ಅಥವಾ ನಮ್ಮ ಕೈಗೆ ಕೊಟ್ಟಿರುವ ಖೋತಾ ಬಡ್ಜೆಟ್ ಮೇಲೆ ಮಾತನಾಡಬೇಕೇ ಅಥವಾ ಸಪ್ಲಿಮೆಂಟರಿ ಬಡ್ಜೆಟ್ ಮೇಲೆ ಮಾತನಾಡ ಬೇಕೇ ಎಂಬುದು ತೋರುವುದಿಲ್ಲ. ಸಪ್ಲಿಮೆಂಟರಿ ಬಡ್ಜೆಟ್ ಮೇಲೆ ಮಾತನಾಡಬೇಕೆಂದು ತಾವೇನೋ ಹೇಳಿದೀರಿ. ಆದರೆ ನಾವು ಒಂದು ಗೊಂದಲದ ಪರಿಸ್ಥಿತಿಯಲ್ಲಿ ಮಾತನಾಡಬೇಕಾಗಿದೆ, ಈಗ ತಾನೇ ಚುನಾವಣೆಯಿಂದ ಬಂದ ಜನರ ಪ್ರತಿನಿಧಿಗಳು ಸರ್ಕಾರದ ಆಡಳಿತದ ಅನೀತಿಯನ್ನು ಹೇಳುವುದಕ್ಕೆ ಅವಕಾಶವಿಲ್ಲದಿದ್ದರೆ ಅದು ಬಹಳ ಲಿಮಿಟೆಡ್ ಸ್ಕೋಪ್ ಆಗುತ್ತದೆಂದು ನೊಂದ ಮನಸ್ಸಿನಿಂದ ಮಾತನಾಡುತ್ತಿದ್ದೇನೆ.

ಸ್ವಾಮಿ, ಚುನಾವಣೆಗೆ ಸಂಬಂಧಪಟ್ಟ ಹಾಗೆ ಬಹಳ ಮಿತಿಗೊಳಪಟ್ಟು ಮಾತನಾಡಬೇಕಾಗಿದೆ. ಒಂದೆರಡು ವಿಚಾರಗಳನ್ನು ಮಾತ್ರ ಹೇಳುತ್ತೇನೆ. ಜತ್ತಿ ರಾಜ್ಯ ಅಸ್ತಂಗತವಾದ ಮೇಲೆ, ಕಂಠಿರಾಜ್ಯ ಉದಯವಾದ ಮೇಲೆ ಜತ್ತಿಯಿಂದ ಬಂದ ಕುತ್ತು ಪರಿಹಾರವಾಗುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ...........

ಶ್ರೀ ಎಸ್. ಆರ್. ಕಂಠಿ.—ಇದು ಸಪ್ಲಿಮೆಂಟರಿ ಡಿಮ್ಯಾಂಡ್‌ಗಳಿಗೆ ಪೀಠಿಕೆಯೆಂದು ಅಧ್ಯಕ್ಷರಲ್ಲಿ ಹೇಳುತ್ತಿದ್ದೇನೆ. (ನಗು!)

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ದೇಶದಲ್ಲಿ ನ್ಯಾಯ, ಧರ್ಮ, ಸತ್ಯದ ಹೆಸರಿಸಲ್ಲಿ, ಮಹಾತ್ಮಾಗಾಂಧಿಯವರ ಹೆಸರಿನಲ್ಲಿ ದೇಶದ ರಾಜ್ಯಾಂಗಕ್ಕನುಗುಣವಾಗಿ ಚುನಾವಣೆಯನ್ನು ನಡೆಸುತ್ತೇವೆಂದು ದೊಡ್ಡ ದೊಡ್ಡ ಮಾತುಗಳನ್ನಾಡಿದ ನಾಯಕರು ಚುನಾವಣೆಯಲ್ಲಿ ಮಾಡಿದ ಅನ್ಯಾಯ ಪರಂಪರೆಗಳನ್ನು ಹೇಳುವುದಕ್ಕೆ ಅವಕಾಶವಿಲ್ಲವಲ್ಲಾ ಎಂದು ಅಧ್ಯಕ್ಷರಲ್ಲಿ ಮಮ್ಮಲ ಮರುಗಿ ಮಾತನಾಡುತ್ತಿದ್ದೇನೆ. ತಾವೇ ಹಾಕಿಕೊಂಡ ನೀತಿಗೆ ವಿರೋಧವಾಗಿ ಅಧಿಕಾರ ಸ್ಥಾನಗಳಿಗೆ ಹೊಸ ನೇಮಕಗಳನ್ನು ಮಾಡುವುದಿಲ್ಲ, ಪ್ರಮೋಷನ್‌ಗಳನ್ನು ಕೊಡುವುದಿಲ್ಲ ಎಂದು ಹೇಳಿದ ಜತ್ತಿ ಮಂತ್ರಿಮಂಡಲ; ಅದಕ್ಕೆ ವಿರೋಧವಾಗಿಯೇ ಮಾಡಿತು, ಈಗ ತಾನೇ ಅಧಿಕಾರಕ್ಕೆ ಬಂದು ಅಂಬೆಗಾಲು ಇಡುತ್ತಾ, ನಾನು ಉಳಿಯುತ್ತೇನೋ ಅಳಿಯುತ್ತೇನೋ ಎಂದು ಸಂದೇಹದ ರಾಜ್ಯದಲ್ಲಿರುವ ಕಂಠಿಯವರ ವಿಷಯದಲ್ಲಿ ನಾನು ಒಂದು ಮಾತನ್ನೂ ಆಡುವುದಿಲ್ಲ. ಆದರೆ ಹಿಂದೆ ಕಮಿಷನರ ಆಡಳಿತದಲ್ಲಿ, ಬ್ರಿಟಿಷರ ಆಡಳಿತದಲ್ಲಿ ನಡೆದುದನ್ನು ಆಕ್ಷೇಪಿಸುತ್ತಿದ್ದ ನೀವು ಏನು ಮಾಡಿದಿರಿ? ನಿಮ್ಮ ಹಿಂದಿನ ಸರ್ಕಾರ ಏನು ಮಾಡಿತು ಎಂದು ಕೇಳುತ್ತೇನೆ. ನಮ್ಮ ದೇಶದಲ್ಲಿ ಅನಾಹುತ ಮಾಡಿತು ಎಂದುಮಾತ್ರ ಹೇಳುತ್ತೇನೆ. ದೇಶದಲ್ಲಿ ಚುನಾವಣೆಗಳು "fair and free atmosphere", ನಲ್ಲಿ ನಡೆಯುವಂತೆ ವ್ಯವಸ್ಥೆ ಮಾಡುತ್ತೇವೆಂದು ದೊಡ್ಡ ದೊಡ್ಡ ಭಾಷಣಗಳನ್ನು ಮಾಡಿದ ಜನರು ಅದಕ್ಕೆ ವಿರುದ್ಧವಾಗಿ ವರ್ತಿಸಿದ್ದಾರೆ. ಸೊಸೈಟಿ ಇನ್‌ಸ್ಪೆಕ್ಟರುಗಳು, ವಿಲೇಜ್ ಲೆವಲ್ ವರ್ಕರುಗಳು, ಪೋಲೀಸ್ ಕಾನ್‌ಸ್ಟೇಬಲ್‌ಗಳು, ತಾಸೀಲ್ದಾರರಗಳು, ಬಿ. ಡಿ. ಓ. ಗಳು, ಅಪೇಕ್ಸ್ ಬ್ಯಾಂಕ್ ಚೇರ್ಮನ್, ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಚೇರ್ಮನ್‌ಗಳು ಇಂಥವರಿಗೆ ಸರ್ಕಾರಿ ಹಣವನ್ನು ಕೊಟ್ಟು, ಕಾರುಗಳು ಜೀಪುಗಳನ್ನು ಕೊಟ್ಟು ಚುನಾವಣೆಯಲ್ಲಿ ತಮ್ಮ ಪರವಾಗಿ ಪ್ರಚಾರ ಮಾಡಿಸಿದ್ದಾರೆ. ಇಂಥವರು ರಾಜ್ಯಭಾರ ಮಾಡಿಕೊಂಡು, ತಮ್ಮ ಕೈ ಮಲಿನ ಮಾಡಿಕೊಂಡು ಆಡಳಿತ ನಡೆಸುತ್ತಿರುವ ಜನರಿಂದ ದೇಶದ ಜನರು ಎಂಥ ಕಲ್ಯಾಣವನ್ನು ಬಯಸಬಹುದೆಂದು ಕೇಳುತ್ತೇನೆ. ಇವರು ಅಧಿಕಾರ ಮಾಡುವಾಗ ಅನುಸರಿಸಿದ ಮಾರ್ಗಗಳು ಸ್ವಚ್ಛವಾಗಿದ್ದುವೆ, ಚುನಾವಣೆಯಲ್ಲಿ ಇವರೆಲ್ಲರೂ ಸರಿಯಾಗಿ, ನ್ಯಾಯವಾಗಿ ನಡೆದರೇ, ಅಧಿಕಾರ ಸೂತ್ರಗಳನ್ನು ಹಿಡಿಯಲು ಇವರು ಅರ್ಹರೇ ಎಂದು ನಾನು ಕೇಳಬೇಕಾಗಿದೆ. ಪಬ್ಲಿಕ್ ಪ್ರಾಸಿಕ್ಯೂಟರುಗಳು, ಸರ್ಕಾರಿ ಪ್ಲೀಡರುಗಳು ಇವರೆಲ್ಲ ಜನರ ಹಣವನ್ನು ಪಡೆದು...........

Sri GANJI VEERAPPA (Harihar).—On a point of order. Sir. Is it a general discussion of theBudget or a mere discussion of the supplementary demands ?

Mr. SPEAKER.—I do not find any point of order in it. He has got 15 minutes in all ; he is spending his time, perhaps less profitably. I may tell him now that it would be better for him if he spends his time more usefully.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ಎರಡು ನಿಮಿಷವನ್ನು ಕಳೆದಿದ್ದಾರೆ.

ಸರ್ಕಾರಿ ಹಣದಲ್ಲಿ ಪೋಲೀಸಿನವರಿಗೆ ಕೊಟ್ಟಿದ್ದಾರೆ

ಅಧ್ಯಕ್ಷರು.—ಈ ರಾಮಾಯಣ ಬೇಡ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹಾಗಾದರೆ, let the Chief Minister annuounce by this evening "This is the size of my Cabinet" ಅದಿಲ್ಲ, ಭರತ ರಾಜ್ಯಭಾರ ಮಾಡುತ್ತಿದ್ದಾನೆ ರಾಮ ಕಾಡಿನಲ್ಲಿದ್ದಾನೆ (ನಗು !)

ಇದೇನು ಬಡ್ಜೆಟ್ ಮೇಲಿನ ಚರ್ಚೆಯೇ ಎಂದು ಶ್ರೀಮಾನ್ ಗಾಂಜಿ ವೀರಪ್ಪನವರು ಕೇಳಿದರು. ಈ ಹಸರು ಬೈಂಡು ಹಾಕಿರುವ ಪುಸ್ತಕವನ್ನು ನೋಡಿದರೆ, ಸರ್ಕಾರದಿಂದ ಹಣ ಹೇಗೆ ಖರ್ಚಾಗಿದೆ ಎನ್ನುವುದು ಎಲ್ಲರಿಗೂ ಗೊತ್ತಾಗುತ್ತದೆ. ನಾನು ಹೇಳುವುದಕ್ಕೆ ಆಧಾರವಿದೆಯೆಂಬುದನ್ನು ರಾಜಕಾರಣಿಗಳೂ ಅರಿತು ನುರಿತವರೂ ಆದ ಅವರು ತಿಳಿದು ಕೊಳ್ಳುತ್ತರೆಂದು ನಂಬಿದ್ದೆ. ಶ್ರೀ ಮಾನ್ ವೆಂಕಟೇಗೌಡರು ಹೇಳಿರುವುದನ್ನು ನಾನು ಮತ್ತೆ ಹೇಳುವುದಿಲ್ಲ. ನಾನು ಏನು ಹೇಳ ಬೇಕೆಂದಿದ್ದೇನೋ ಅದನ್ನೆಲ್ಲ ಹೇಳಲು ಬಡ್ಜೆಟ್ ಮೇಲೆ, ರಾಜ್ಯಪಾಲರ

ಭಾಷಣದ ಮೇಲೆ ಚರ್ಚೆನಡೆಯುವಾಗ ಬೇಕಾದಷ್ಟು ಅವಕಾಶವಿದೆ. ಹೋದ ತಿಂಗಳು ೧೯ರಿಂದ ೨೫ರವರೆಗೆ ರಾಜ್ಯದಲ್ಲಿ ಚುನಾವಣೆಗಳು ನಡೆದು. ಹೊಸ ಮಂತ್ರಿ ಮಂಡಲ ಅಧಿಕಾರಕ್ಕೆ ಬಂದು. ತಮ್ಮ ಅಧ್ಯಕ್ಷತೆಯಲ್ಲಿ ನಾವು ಈ ಸಭೆಯಲ್ಲಿ ಮಾತನಾಡುತ್ತಿದ್ದೇವೆ. ಇಷ್ಟಾದರೂ ಚುನಾವಣೆಯಲ್ಲಿ ನಡೆದ ಲೋಪ ದೋಷಗಳನ್ನು ಸರಿಪಾಡದೇ ಯಿರುವ ಪಕ್ಷ ಅಧಿಕಾರ ನಡೆಸುವುದಕ್ಕೆ ಯಾವ ನೀತಿಯು ಬೆಂಬಲವಿದೆ? ಇಂಥ ಜನರು ದೇಶದ ಜನರಿಗೆ ನಿಜವಾಗಿಯೂ ಒಳ್ಳೆಯ ಸರ್ಕಾರವನ್ನು ಕೊಡುತ್ತಾರೆಯೇ? 'ನಮ್ಮಲ್ಲಿ ವ್ಯವಹಾರವಿಲ್ಲ' ಎಂದು ಹೇಳಿದರು. ಹದಿನಾಲ್ಕು ಜನ ಮಂತ್ರಿಗಳು, ಹತ್ತು ಜನ ಉಪ ಮಂತ್ರಿಗಳು ಮಂತ್ರಿ ಮಂಡಲವನ್ನು ರಚಿಸುವುದಾಗಿ 20 ದಿನಗಳ ಹಿಂದೆ ಮುಖ್ಯ ಮಂತ್ರಿಗಳು ಘೋಷಣೆ ಮಾಡಿದರು. ಇದುವರೆಗೂ ಅದು ಸಾಧ್ಯವಾಗದೆ ಈ ಹೊತ್ತು ಅವರು ಗೊಂದಲದಲ್ಲಿ ಸಿಕ್ಕಿ ಕೊಂಡಿದ್ದಾರೆ. ದೇಶದ ಜನರು ಕಾತರದಿಂದ ನೋಡುತ್ತಿದ್ದಾರೆ. ಮಹಾರಾಷ್ಟ್ರದ ಮುಖ್ಯ ಮಂತ್ರಿ ಚವಾಣರವರು ಮಂತ್ರಿ ಮಂಡಲದ ರಚನೆಯ ವಿಷಯದಲ್ಲಿ "This is up to me. This is my fat discretion. This power is vested in me to announce that this is the size of my Cabinet" ಎಂದು ಹೇಳಿದ್ದಾರೆ. ಆದರೆ ಇಲ್ಲಿ ಮುಖ್ಯ ಮಂತ್ರಿಗಳು ಹೇಳಿದ ಮಾತನ್ನು ಉಳಿಸಿ ಕೊಳ್ಳುವುದಕ್ಕೆ ಅಡ್ಡಿ ಆತಂಕಗಳನ್ನು ತಂದೊಡ್ಡಿದ್ದಾರೆ, ಪಕ್ಷದವರು ಕಾಂಗ್ರೆಸ್ ಪಕ್ಷದಲ್ಲಿ ಭಿನ್ನ ಭಿನ್ನ ಮತದವರಿಂದ, ಛಿದ್ರವಾಗಿ ಹೋಗಿರುವಾಗ ಇಂಥ ಪಕ್ಷದವರಿಂದ ದೇಶಕ್ಕೆ ಕಲ್ಯಾಣವಾಗುತ್ತದೆಂದು ಯಾರು ನಂಬಿದ್ದಾರೆ? ಮುಖ್ಯಮಂತ್ರಿ ಶ್ರೀಮಾನ್ ಕಂಠಿಯವರಿಗೆ ಹೇಳುತ್ತೇನೆ: ಇವೊತ್ತಿನ ದಿವಸ ನಿಮ್ಮ ಕಾಂಗ್ರೆಸ್ ಪಕ್ಷದಲ್ಲಿ ೧೩೮ ಜನ ಸದಸ್ಯರಿದ್ದೀರಿ. ನಿಮ್ಮಲ್ಲಿ ಧೈರ್ಯ ಸ್ಥೈರ್ಯಗಳಿದ್ದರೆ ನಿಮಗೆ ಸರಿಯಾದ ಸರ್ಕಾರವನ್ನು ಸ್ಥಾಪನೆ ಮಾಡಬೇಕೆಂಬ ಉದ್ದೇಶ ಇದ್ದರೆ ಈ ದಿವಸ ಐದು ಗಂಟೆಯೊಳಗಾಗಿ ಕ್ಯಾಬಿನೆಟ್ ಸೈಜ್ ಎಷ್ಟು, ಮಂತ್ರಿಗಳೆಷ್ಟು ಉಪಮಂತ್ರಿಗಳೆಷ್ಟು ಎಂಬುದನ್ನು ಹೇಳಿ.

Mr. SPEAKER.—The present Ministry cannot come under 'General Administration'.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ಜನರಲ್ ಅಡ್ಮಿನಿಸ್ಟ್ರೇಷನ್ ಮೇಲೆ ಮಾತನಾಡುತ್ತಿದ್ದೇನೆ.

Mr. SPEAKER.—As some members are entirely new to others as well as to the Reporters, some difficulty is being felt to take down the name of the member. So, as I have already said, the members may kindly announce their names and constituencies.

ಶ್ರೀ ಸಿ ಜೆ. ಮುಕ್ಕಣ್ಣಪ್ಪ.—ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಇವೊತ್ತು ಅಧಿಕಾರದಲ್ಲಿರತಕ್ಕ ಮಂತ್ರಿಗಳಿಗೆ ಯಾವ ಖಾತೆ ಯಾರಿಗೆ ಹೋಗುತ್ತದೆಯೋ, ಅಗ್ರಿಕಲ್‌ಚರಲ್ ಖಾತೆ ಯಾರಿಗೆ ಹೋಗುತ್ತದೆಯೋ ಅರಣ್ಯ ಖಾತೆ ಯಾರಿಗೆ ಹೋಗುತ್ತದೆಯೋ ಎನ್ನುವ ಭಯ ಅವರಿಗೆ ಇದೆ.

ಶ್ರೀ ಬಿ. ರಾಚಯ್ಯ.—ಅಂಥಾ ಭಯವೇನೂ ಇಲ್ಲ. ಫೈಲಿನ ಮೇಲೆ ಜೋರಾಗಿಯೇ ಬರೆಯುತ್ತೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅದಕೋಸ್ಕರವಾಗಿ ಈಗ ಅಧಿಕಾರದಲ್ಲಿರತಕ್ಕ ಕಾಂಗ್ರೆಸ್ ಸರ್ಕಾರಕ್ಕೆ ನಾನು ಏನು ಹೇಳುತ್ತೇನೆಂದರೆ ಇವರು ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ಇದ್ದಂಥ ಅನೀತಿಯುತವಾದಂಥ ಸರ್ಕಾರದ ಆರ್ಡರುಗಳನ್ನೂ, ಅನೀತಿಯುತವಾದ ಅಪಾಯಿಂಟ್‌ಮೆಂಟ್‌ಗಳನ್ನೂ ರದ್ದು ಮಾಡಬೇಕು. ಮತ್ತು ನೀತಿ ರಹಿತವಾದ ಬೋರ್ಡುಗಳನ್ನು ರದ್ದು ಮಾಡಬೇಕು. ಇವೊತ್ತಿನ ದಿವಸ ಅಧಿಕಾರದಲ್ಲಿರತಕ್ಕವರಿಗೆ ಸರಿಯಾಗಿ ಕೆಲಸ ಮಾಡಬೇಕೆಂಬ ಇಚ್ಛೆ ಇದ್ದರೆ ಹಿಂದೆ ಕಾಂಗ್ರೆಸ್ ಮಂತ್ರಿ ಮಂಡಲದವರು ಎಲ್ಲಾ ಡಿಪಾರ್ಟ್‌ಮೆಂಟ್‌ಗಳಲ್ಲಿಯೂ, ತಮ್ಮ ಇಚ್ಛೆ ಬಂದವರಿಗೆ ಯಾರು ಯಾರಿಗೆ ಪ್ರಮೋಷನ್ ಕೊಟ್ಟಿದ್ದಾರೆಯೋ, ಯಾರು ಯಾರಿಗೆ ಟ್ರಾನ್ಸ್‌ಫರ್ ಮಾಡಿದ್ದಾರೆಯೋ ಆ ಎಲ್ಲಾ ಆರ್ಡರುಗಳನ್ನೂ ನೀವು ಪರಿಶೀಲನೆ ಮಾಡಬೇಕು. ಭದ್ರವಾದ ಸರ್ಕಾರ ಯಾವುದೇ ಒಂದು ಪಾರ್ಟಿಯಲ್ಲಿ ಆಗುವುದಕ್ಕೆ ಸಾಧ್ಯವಿಲ್ಲ. ಅದಕ್ಕೋಸ್ಕರವಾಗಿ ಈಗ ನಮ್ಮ ವಿರೋಧ ಪಕ್ಷದಲ್ಲಿರತಕ್ಕ 69 ಜನಗಳನ್ನು ನಿಮ್ಮ ಗುಂಪಿನಲ್ಲಿ ಸೇರಿಸಿಕೊಂಡು ಒಂದು ಸಮ್ಮಿಶ್ರ ಮಂತ್ರಿ ಮಂಡಲವನ್ನು ರಚನೆಮಾಡಿ ದೇಶಕ್ಕೆ ಒಳ್ಳೆಯ ಸರ್ಕಾರವನ್ನು ಕೊಡಬೇಕು ಎಂದು ಹೇಳಿ ಅಧ್ಯಕ್ಷರು ನನಗೆ ಕೊಟ್ಟಿದ್ದ ಕಾಲಾವಕಾಶಕ್ಕಿಂತಲೂ ಮುಂಚಿತವಾಗಿಯೇ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಮಾನ್ಯ ಅಧ್ಯಕ್ಷರೇ, ಸೋಷಿಯಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿ ಮಾದರಿಯ ಪ್ರಜಾಪ್ರಭುತ್ವ ಸರ್ಕಾರದವರು ಸುಮಾರು ೨೦ ಕೋಟಿ ಚಿಲ್ಲರೆ ರೂಪಾಯಿಗಳ ಸಪ್ಲಿಮೆಂಟರಿ ಬಡ್ಜೆಟ್ ಬೇಡಿಕೆಗಳನ್ನು ಈ ಸಭೆಯ ಮುಂದೆ ಮಂಡಿಸಿರುವುದನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ. ಪಿ. ಡಬ್ಲ್ಯು.ಡಿ. ಇಲಾಖೆಯವರು ಖರ್ಚು ಮಾಡಿರುವ ಹಣವನ್ನು ನೋಡಿದರೆ ಇವರು ಈ ದೇಶದ ಜನ ಆಗಬಹುದೇ, ಎಂದು ನಾನು ಕೇಳುತ್ತೇನೆ. ಎಲೆಕ್ಷನ್ನಿಗೆ ಸಂಬಂಧಪಟ್ಟ ಹಾಗೆ ಅವರಿಗೆ ಬೇಕಾದಂಥ ಕಂಟ್ರಾಕ್ಟರುಗಳಿಗೆ ಕಂಟ್ರಾಕ್ಟ್ ಕೊಟ್ಟು ಅಲ್ಲಲ್ಲೆ ಪ್ಲಾನ್ ಸ್ಯಾಂಕ್ಷನ್ ಮಾಡಿ, ಚೀಫ್ ಇಂಜಿನಿಯರನ್ನು ಸೂಪರಿನ್‌ಟೆಂಡಿಂಗ್ ಇಂಜಿನಿಯರನ್ನು ಅವರ ಕಾನ್‌ಸ್ಟಿಟ್ಯೂಯೆನ್ಸಿಗೆ ಕರೆದುಕೊಂಡು ಹೋಗಿ ಬೇಕಾದಷ್ಟು ಹೊಸ ಕೆರೆಳಗನ್ನೂ, ಹೊಸ ಬಾವಿಗಳನ್ನೂ ಕಟ್ಟಿಸುವುದಕ್ಕೆ ಪ್ರಾರಂಭ ಮಾಡುವುದು. ಈ ರೀತಿ ಮಾಡಿ ಓಟು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದರು. ಆದರೂ ಕೆಲವರು ವಿಫಲರಾದರು, ಕೆಲವರು ಗೆದ್ದರು. ಸೋಷಿಯಾಲಿಸ್ಟಿಕ್ ಪ್ಯಾಟರನ್ ಆಫ್ ಸೊಸೈಟಿಯ ಮಾದರಿಯ ಪ್ರಜಾಪ್ರಭುತ್ವದ ಹೆಸರಿನಲ್ಲಿ ಈ ರೀತಿ ಅನ್ಯಾಯಗಳು ನಡೆಯುತ್ತಾ ಇರುವುದು ಶೋಚನೀಯ. ಮಹಾತ್ಮ ಗಾಂಧಿಯವರ ಹೆಸರಿನಲ್ಲಿ ಓಟು ಕೇಳುವ ಜನಗಳಿಗೆ, ಸಮತಾವಾದ ಸಮಾಜವನ್ನು ರಚನೆ ಮಾಡುವ ಜನಗಳಿಗೆ ಮುಂದಿನ ಸಾಲಿನಲ್ಲಿ ಎಷ್ಟು ಹಣ ಖರ್ಚಾಗುತ್ತದೆ ಎನ್ನುವ ಒಂದು ಪ್ಲಾನ್ ಎಕಾನಮಿ ಇರಲಿಲ್ಲವೇ? ಇವೊತ್ತಿನ ದಿವಸ ಸಪ್ಲಿಮೆಂಟರಿ ಬಡ್ಜೆಟ್ ಬೇಡಿಕೆಯಲ್ಲಿ ೨೦ ಕೋಟಿ ರೂಪಾಯಿಗಳನ್ನು ಕೇಳುತ್ತಾ ಇರುವುದರಲ್ಲಿ ಅರ್ಥವಿಲ್ಲ. ನಾವು ಇದನ್ನು ಖಂಡಿತವಾಗಿಯೂ ಕೂಡ ಒಪ್ಪುವುದಕ್ಕಾಗುವುದಿಲ್ಲ. ನನಗೆ ಗೊತ್ತಿರುವ ಹಾಗೆ ಶ್ರೀಮಾನ್ ಜತ್ತಿಯವರ ಮಂತ್ರಿಮಂಡಲ ಅಧಿಕಾರದಲ್ಲಿದ್ದಾಗ ನಮ್ಮ ಜಿಲ್ಲೆಯ ಕೆಲವರು ಮಾಲೂರಿಗೆ ಚೀಫ್ ಇಂಜಿನಿಯರನ್ನು ಕರೆದುಕೊಂಡು ಹೋಗಿ ಮಾಲೂರು ಕಾನ್‌ಸ್ಟಿಟ್ಯೂಯೆನ್ಸಿಗೆ ೩-೪ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿಸಿದರು. ಆದರೂ

(ಶ್ರೀ ಪಿ. ವೆಂಕಟಗಿರಿಯಪ್ಪ)

ಅವರು ಎಲೆಕ್ಷನ್‌ನಲ್ಲಿ ಸೋತುಹೋದರು. ಈ ರೀತಿ ಇವರು ಮಾಡುತ್ತಾ ಇರುವುದು ಪ್ಲಾನ್ಡ್ ಎಕಾನಮಿಯೇ ಎಂದು ನಾನು ಕೇಳುತ್ತೇನೆ. ಎಲೆಕ್ಷನ್ ಟೈಮ್‌ನಲ್ಲಿ ಶ್ರೀಮಾನ್ ಜತ್ತಿಯವರ ಪಾರ್ಟಿಯ ಒಬ್ಬರಿಗೆ ಸಪೋರ್ಟ್ ಮಾಡುವುದಕ್ಕಾಗಿ, ಅವರು ಚುನಾವಣೆಯಲ್ಲಿ ಗೆದ್ದು ಬರುವುದಕ್ಕಾಗಿ ನಾಲ್ಕು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇದು ಖಂಡಿತವಾಗಿಯೂ ಮಹಾತ್ಮ ಗಾಂಧಿಯ ಹೆಸರಿನಲ್ಲಿ ಓಟನ್ನು ಕೇಳುವ ಜನಗಳಿಗೆ ಅವಮಾನ. ಸೋಷಿಯಾಲಿಸ್ಟಿಕ್ ಪ್ಯಾಟರನ್ ಆಫ್ ಸೊಸೈಟಿಯನ್ನು ಸ್ಥಾಪನೆ ಮಾಡುತ್ತೇವೆ ಎಂದು ಹೇಳಿಕೊಳ್ಳತಕ್ಕ ಜನ ಇಪ್ಪತ್ತು ಕೋಟಿ ರೂಪಾಯಿಗಳನ್ನು ಕೇಳುತ್ತಾ ಇರುವುದನ್ನು ನೋಡಿದರೆ ಇವೊತ್ತಿನ ದಿವಸ ದೇಶದಲ್ಲಿ ಜನಗಳಿಗೆ ಅನ್ಯಾಯವಾಗುತ್ತಿದೆ ಎಂದು ಹೇಳುತ್ತೇನೆ. ಇದಕ್ಕೆ ಬೇರೆ ರುಜುವಾತು ಬೇಕಾಗಿಲ್ಲ. ಇವೊತ್ತಿನ ದಿವಸ ದೇಶದಲ್ಲಿ ಇದರಿಂದ ಅರಾಜಕತೆ ಉಂಟಾಗಿದೆ. ಇಂಥಾ ಒಂದು ಧರ್ಮದ ಹೆಸರಿನಲ್ಲಿ, ಸಮಾಜದ ಹೆಸರಿನಲ್ಲಿ ಒಂದು ವ್ಯವಸ್ಥೆಯಿಲ್ಲದೆ ಒಂದು ಪ್ಲಾನು ಇಲ್ಲದೆ ದೇಶದ ಹಣವನ್ನು ಖರ್ಚು ಮಾಡಿದ ಶ್ರೀಮಾನ್ ಜತ್ತಿ ಮಂತ್ರಿಮಂಡಲದವರ ಹಾಗೆ ಈಗ ನೂತನವಾಗಿ ಅಧಿಕಾರಕ್ಕೆ ಬಂದಿರುವ ಶ್ರೀ ಕಂಠಿಯವರ ಮಂತ್ರಿಮಂಡಲವು ಇರಬಾರದು. ಮತ್ತು ಇಂಥಾ ಅನಾಯಕತ್ವಕ್ಕೆ ಅವಕಾಶ ಕೊಡದೆ ಹೆಚ್ಚಿನ ವ್ಯವಸ್ಥಿತ ರೀತಿಯಲ್ಲಿ, ಸೋಷಿಯಲಿಸ್ಟಿಕ್ ಪ್ಯಾಟರನ್ ಆಫ್ ಸೊಸೈಟಿಯ ಎಕಾನಮಿ ಎಂದು ಏನು ಹೇಳುತ್ತಾರೆಯೋ ಅ ಒಂದು ವ್ಯವಸ್ಥಿತವಾದ ಆರ್ಥಿಕ ತಳಹದಿಯ ಮೇಲೆ ನಮ್ಮ ದೇಶದ ಬಡ್ಜೆಟ್ಟನ್ನು ತಯಾರು ಮಾಡುತ್ತಾರೆಂದು ಆಶಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಹುಚ್ಚೇಗೌಡ.—ಸ್ವಾಮಿ, ಈಗ ಈ ಸಭೆಯ ಮುಂದಿಟ್ಟಿರುವ ಅನುದಾನ ಬೇಡಿಕೆಗಳನ್ನು ಪೂರ್ತಿಯಾಗಿ ನಾನು ವಿರೋಧಿಸುತ್ತೇನೆ. ಏತಕ್ಕೆಂದರೆ ನಾನು ಅನೇಕ ವರ್ಷಗಳಿಂದ ಈ ಶಾಸನ ಸಭೆಯಲ್ಲಿ ಸದಸ್ಯನಾಗಿದ್ದೇನೆ. ಆದರೆ ಇಂಥಾ ಸಪ್ಲಿಮೆಂಟರಿ ಬಡ್ಜೆಟ್ಟನ್ನು ನಾನು ಯಾವಾಗಲೂ ನೋಡಲಿಲ್ಲ. ಈ ವರ್ಷ ಇಪ್ಪತ್ತು ಕೋಟಿ ಚಿಲ್ಲರೆ ರೂಪಾಯಿಗಳನ್ನು ಸಪ್ಲಿಮೆಂಟರಿ ಡಿಮ್ಯಾಂಡಿನಲ್ಲಿ ಕೇಳುತ್ತಾ ಇರುವುದನ್ನು ನೋಡಿದರೆ ನಮ್ಮ ದೇಶದ ಆಯವ್ಯಯದಲ್ಲಿ ಸುಮಾರು ನೂರಕ್ಕೆ ಐವತ್ತರಷ್ಟು ಸಪ್ಲಿಮೆಂಟರಿ ಡಿಮ್ಯಾಂಡ್ ಬರುತ್ತದೋ ಏನೋ ಎಂದು ನನಗನ್ನಿಸುತ್ತದೆ. ಈಗ ೨೦ ಕೋಟಿ ಚಿಲ್ಲರೆ ರೂಪಾಯಿಗಳನ್ನು ಕೇಳುತ್ತಾ ಇದ್ದೀರಿ. ಇದನ್ನು ಮೊದಲೇ ನೀವು ಏತಕ್ಕೆ ಕಂಡುಹಿಡಿಯಲಿಲ್ಲ? ಈಗ ಈ ಸಪ್ಲಿಮೆಂಟರಿ ಡಿಮ್ಯಾಂಡಿನಲ್ಲಿ ಕೊಟ್ಟಿರುವುದು ಯಾವುದೂ ಸಮಂಜಸವಾಗಿ ಕೊಟ್ಟಿಲ್ಲ. ಅಲ್ಲದೆ ನಮ್ಮ ಸರ್ಕಾರಕ್ಕೆ ಕಂಟಿಂಜೆನ್ಸಿ ಫಂಡ್ ಇರತಕ್ಕದ್ದು ಎರಡು ಕೋಟಿ ರೂಪಾಯಿಗಳು ಮಾತ್ರ. ಹಣ ಉಳಿದಿದೆ ಎಂದು ಹೇಳಿ ಅದನ್ನು ಈಗ ಖರ್ಚುಮಾಡುತ್ತಿದ್ದೀರಿ. ಈ ವರ್ಷ ಖರ್ಚು ಮಾಡಿರುವುದು ಇದರಲ್ಲಿ ಇಲ್ಲ. ಈಗ ಈ ಸಭೆಯಲ್ಲಿ ಮಾನ್ಯ ಹಣಕಾಸಿನ ಮಂತ್ರಿಗಳು ಇಲ್ಲ............

Mr. SPEAKER.—There are other Ministers.......

ಶ್ರೀ ಬಿ. ಹುಚ್ಚೇಗೌಡ.—ಏತಕ್ಕೆಂದರೆ ಮಾನ್ಯ ಮುಖ್ಯಮಂತ್ರಿಗಳು, ಹಾಗೂ ಆರ್ಥಿಕ ಮಂತ್ರಿಗಳು ಈ ಸಭೆಯನ್ನು ಕಡೆಗಾಣಿಸಿ ಈ ಸಭೆಯ ಗೌರವಕ್ಕೆ ಧಕ್ಕೆ ಬರುವ ರೀತಿಯಲ್ಲಿ ನಡೆಯುತ್ತಿದ್ದಾರೆ. ಇದರಲ್ಲಿ ಅಂಕಿಅಂಶಗಳು ಬೇರೆಯಾಗಿವೆ. ಅವುಗಳನ್ನು ವೇಗ್ ಆಗಿ ಕೊಟ್ಟಿದ್ದಾರೆ. ಒಂದೂ ಕೂಡ ಸಮಂಜಸವಾಗಿಲ್ಲ.

2-30 P.M.

೨೮ ಕೋಟಿಯಲ್ಲಿ ೧೮ ಐಟಂಗಳಿಗೆ ನೂರು ರೂಪಾಯಿಗಳ ಟೋಕನ್ ಗ್ರ್ಯಾಂಟನ್ನು ಕೇಳಲಾಗಿದೆ. ಇದರಿಂದ ಖರ್ಚು ಇನ್ನೂ ಹೆಚ್ಚಾಗಬಹುದೆಂಬ ಅನುಮಾನ ಬರುತ್ತಿದೆ. ಟೋಕನ್ ಗ್ರ್ಯಾಂಟ್ ಕೇಳುವುದು ನನಗೆ ಸರಿಯಾಗಿ ಅರ್ಥವಾಗಿಲ್ಲ. ಉಪಾಧ್ಯಾಯರ ಟ್ರೈನಿಂಗಿಗೆ, ರೂರಲ್ ಇನ್‌ಸ್ಟಿಟ್ಯೂಟ್ ವಗೈರೆಗೆಲ್ಲಾ ನೂರು ರೂಪಾಯಿಗಳ ಟೋಕನ್ ಗ್ರ್ಯಾಂಟ್ ಕೇಳಿ, ನ್ಯೂ ಸರ್ವಿಸ್ ಎಂದು ಹೇಳುತ್ತಿದ್ದಾರೆ. ಇಷ್ಟು ಹಣ ಬೇಕೆಂದು ಸ್ಪಷ್ಟವಾಗಿ ತಿಳಿಸಿದ್ದರೆ ಚೆನ್ನಾಗಿತ್ತು. ವರ್ಷ ಮುಗಿಯುತ್ತಾ ಬಂದಿರುವಾಗ ಟೋಕನ್ ಗ್ರ್ಯಾಂಟ್ ಕೇಳಿದರೆ ನಂಬುವುದು ಹೇಗೆ?

ಆ ಮೇಲೆ ಅನೇಕ ಡಿಮ್ಯಾಂಡುಗಳಲ್ಲಿ ಕೋರ್ಟ್ ಖರ್ಚು ಕೊಡಲು ಹಣಬೇಕಾಗಿದೆಯೆಂದು ನಮೂದಿಸಲಾಗಿದೆ. ಇದನ್ನು ನೋಡಿದರೆ ಉದ್ದೇಶಪೂರ್ವಕವಾಗಿ ಹೊಣೆಗಾರಿಕೆ ತಪ್ಪಿಸಿಕೊಂಡು ಜನರಿಗೆ ಅನ್ಯಾಯ ಮಾಡಿರುವಂತೆ ಕಂಡುಬರುತ್ತಿದೆ. ಈ ರೀತಿ ಅಧಿಕಾರದ ದುರುಪಯೋಗವಾಗುತ್ತಿದೆ. ಈ ದಿವಸ ಹೈಕೋರ್ಟಿನಲ್ಲಿ ರಿಟ್ ಅರ್ಜಿಗಳ ಸಂಖ್ಯೆ ಬಹಳವಾಗಿ ಹೆಚ್ಚುತ್ತಿದೆ. ಹೊಸದಾಗಿ ಇಬ್ಬರು ನ್ಯಾಯಾಧೀಶರನ್ನು ನೇಮಕ ಮಾಡಿದ್ದಾರೆ ಎಂದೇನು ಕೇಳಿಬರುತ್ತಿದೆ ಎಂಬುದನ್ನು ನೋಡಿದರೆ ಜನರಿಗೆಷ್ಟು ತೊಂದರೆಯಾಗುತ್ತಿದೆಯೆಂಬುದು ಭಾಸವಾಗುತ್ತದೆ. ಈ ರಿಟ್ ಸಂಬಂಧವಾಗಿ ಸರ್ಕಾರದ ಮೇಲೆ ಅನೇಕ ಟೀಕೆಗಳು ಬಂದಿವೆ. ಸರ್ಕಾರದವರು ಥಿಕ್‌ಸ್ಕಿನ್ಡ್ ಆಗಿ ಯಾವುದಕ್ಕೂ ಲಕ್ಷ್ಯ ಮಾಡದೆ ತಮ್ಮ ಮನಸ್ಸಿಗೆ ಬಂದ ಹಾಗೆ ವರ್ತಿಸುತ್ತಿರುವುದು ಶುದ್ಧ ನಾಚಿಕೆಗೇಡು. ಯಾವ ಸರ್ಕಾರವೇ ಆಗಲಿ ಸಾರ್ವಜನಿಕ ಟೀಕೆಗಳಿಗೆ ಸ್ವಲ್ಪ ಮಟ್ಟಿಗೆ ಮಾನ್ಯತೆ ಕೊಡಬೇಕಾದ್ದು ಧರ್ಮ. ಹೈಕೋರ್ಟ್ ಸ್ಟ್ರಿಕ್ಚರ್ ಪಾಸ್ ಮಾಡಿದರೆ ಅದನ್ನು ಲಕ್ಷ್ಯಮಾಡದೆ ಮುಂದುವರಿಯುವುದು ಸರಿಯಲ್ಲ.

Sri D. VENKATARAMIAH (Robertsonpet).—On a point of order is the word 'Shameless' parliamentary?

Mr. SPEAKER.—I will give a ruling later.

ಶ್ರೀ ಬಿ. ಹುಚ್ಚೇಗೌಡ.—ಪ್ರಜಾ ಸರ್ಕಾರವೆನ್ನಿಸಿಕೊಳ್ಳುವುದಕ್ಕೆ ಮೊದಲು ತಕ್ಕ ಯೋಗ್ಯತೆ ಪಡೆಯಬೇಕು, ನ್ಯಾಯಬದ್ಧವಾಗಿ ಕೆಲಸ ಮಾಡಿ ಸರಿಯಾದ ನೀತಿಯನ್ನನುಸರಿಸಬೇಕು.

೨೮ನೆಯ ಪುಟದಲ್ಲಿ ಒಂದನೆಯ ಐಟಂನ ವಿವರಣೆಯಲ್ಲಿ ೧,೬೪,೦೦೦ ರೂಪಾಯಿಗಳ ಅಡ್ವಾನ್ಸ್ ಪಾವತಿ ಮಾಡಿದೆಯೆಂದು ವಿಶದವಾಗಿ ಹೇಳಿರುವಾಗ ನೂರು ರೂಪಾಯಿಗಳ ಟೋಕನ್ ಗ್ರ್ಯಾಂಟ್ ಕೇಳುವುದೇಕೆ? ನಾಲ್ಕನೆಯ ಐಟಂನಲ್ಲೂ ಇದೇ ರೀತಿಯಿದೆ.

Sri C. J. MUCKANNAPPA.—May I know what is meant by 'gapha'?

Mr. SPEAKER.—Unless the Member yields, you cannot speak.

ಶ್ರೀ ಬಿ. ಹುಚ್ಚೇಗೌಡ.—ಅಧ್ಯಕ್ಷರು ಎಷ್ಟೋ ಬ್ಯಾಂಕುಗಳ ವಿಚಾರವನ್ನು ತಿಳಿದುಕೊಂಡಿದ್ದಾರೆ.

ಈ ತರಹ ನೂರು ರೂಪಾಯಿಗಳ ಟೋಕನ್ ಗ್ರಾಂಟ್ ಕೇಳುವ ಡಿಮ್ಯಾಂಡ್‌ಗಳನ್ನು ಎಲ್ಲಾದರೂ ನೋಡಿದ್ದಾರೆಯೇ? ಎಲ್ಲೂ ನೋಡಿರಲಾರರು. ನಿಜವಾಗಿಯೂ ಇದು ಜನರಿಗೆ ಅರ್ಥವಾಗುತ್ತದೆಯೇ? ಆದುದರಿಂದ ಈ ಬಡ್ಜೆಟ್ ಖಂಡಿತ ತಿರಸ್ಕಾರಕ್ಕೆ ಯೋಗ್ಯವಾದುದು ಇದನ್ನು ಒಪ್ಪುವುದಕ್ಕಾಗುವುದಿಲ್ಲ.

giving effect to only such plans that conform to the requirements of the particular Constitutional set up. Well, it is in this connection I request that a more realistic attitude be taken in the matter of planning. Particularly I want to draw the attention of the Members to the amount earmarked for irrigation wells. In doing anything we must draw upon the experiences of other Nations. There is something like the Tennessee Valley Preject in America. Why did you spend so much of money and got the Nation into indebtedness by giving them loans for irrigation wells instead of having a project like Tennessee Valley? You have wasted so much of public funds also. This is a thing about which a Seminar was held by the Gubbi Taluk Board and a Plan was prepared and I forwarded the same to the previous Ministry. The then Chief Minister, Sri B. D. Jatti said that he would give serious consideration to it. Hon'ble Members already know that much water has flown under the bridge since then.

With these few words, I conclude my address today and I thank the Hon'ble Speaker and the House and the Congress Party for their patient hearing.

*ಶ್ರೀ ಟಿ. ಮಾದಯ್ಯಗೌಡ (ರಾಮನಗರ).—ಸಭಾಪತಿಗಳೇ, ಈ ಸಪ್ಲಿಮೆಂಟರಿ ಡಿಮ್ಯಾಂಡ್ ಸಂಬಂಧದಲ್ಲಿ ಮಾನ್ಯ ಸದಸ್ಯರು ಏನು ಬೇಕಾದರೂ ಮಾತನಾಡಬಹುದು ಎಂಬುದಾಗಿ ಭಾವಿಸಿದ್ದರೆ ನನ್ನ ಮನಸ್ಸಿಗಾದರೂ ಅನ್ನಿಸುತ್ತದೆ. ಅದು ಸರಿಯಾದುದಲ್ಲವೆಂದು. ನಮ್ಮ ವಿಧಿಯಲ್ಲಿ 172ನೇ ವಿಧಿಯ ಪ್ರಕಾರ ನಮ್ಮ ಈ ಸಪ್ಲಿಮೆಂಟರಿ ಡಿಮ್ಯಾಂಡಿನಲ್ಲಿ ಯಾವ ಐಟಂ ಇದೆಯೋ ಅಷ್ಟಕ್ಕೆ ಮಾತ್ರ ಮಾತನಾಡಬೇಕೇ ವಿನಾ ಅದನ್ನು ಬಿಟ್ಟು "A"ಯಿಂದ "Z"ರವರೆಗೂ ಪೆರುನಿಂದ ಟಿಂಬಕ್ಟೂವರೆಗೂ ಮಾತನಾಡುತ್ತಾ ಹೋದರೆ ಬಹುಶಃ ಅದು ಸರಿಯಲ್ಲ. ಈಗ ನಾವು ಮೊದಲನೆಯ ಸಲ ಇಲ್ಲಿ ಸೇರುತ್ತಿದ್ದೇವೆ. ಅನೇಕರು ಹೊಸಬರು. ಆದ್ದರಿಂದ ತಮ್ಮ ಔದಾರ್ಯವನ್ನು ಉಪಯೋಗಿಸಿಕೊಂಡು ಈ ಸಭೆಯಲ್ಲಿ ಏನು ಬೇಕಾದರೂ ಮಾತನಾಡಬಹುದು ಎಂಬುದಾಗಿ ತಿಳಿದು ಮಾತನಾಡುತ್ತಿದ್ದಾರೆ. ನಮ್ಮ ಮುಂದೆ ಇರತಕ್ಕ ಈ ಸಪ್ಲಿಮೆಂಟರಿ ಡಿಮ್ಯಾಂಡುಗಳು ಏನಿವೆಯೋ ಅವನ್ನು ಕೂಲಂಕಷವಾಗಿ ಓದಿದರೆ, ಅದರಲ್ಲಿರತಕ್ಕ ವಿವರಗಳನ್ನು ಚೆನ್ನಾಗಿ ಮನಗಂಡರೆ ಬಹುಶಃ ನನ್ನ ಮಾನ್ಯ ಮಿತ್ರರು ಏನು ಇದುವರೆಗೂ ಟೀಕೆಟಿಪ್ಪಣಿಗಳನ್ನು ಮಾಡಿದರೋ ಅವೆಲ್ಲವೂ ವ್ಯರ್ಥ ಮತ್ತು ಅನಾವಶ್ಯಕವೆಂದು ನನಗಾದರೂ ಭಾಸವಾಗುತ್ತದೆ. ಈ ಸಪ್ಲಿಮೆಂಟರಿ ಗ್ರಾಂಟುಗಳನ್ನು ಸರ್ಕಾರದವರು ಕೋರುವಾಗ ಏತಕ್ಕೋಸ್ಕರ ಅದನ್ನು ಕೋರುತ್ತಾರೆ ಅನಾವಶ್ಯಕವಾಗಿ ಖರ್ಚನ್ನು ಏನಾದರೂ ಮಾಡಿದ್ದಾರೆಯೇ, ಅಥವಾ ಅನಿರೀಕ್ಷಿತವಾಗಿರತಕ್ಕಂಥ ವಿಚಾರಗಳಿಗೆ ಏನಾದರೂ ಖರ್ಚು ಮಾಡಿದ್ದಾರೆಯೇ, ಮತ್ತು ಈ ರೀತಿ ಖರ್ಚು ಮಾಡುವುದರಿಂದ ದೇಶಕ್ಕೆ ಪ್ರಯೋಜನವಾಗಿದೆಯೇ ಅಥವಾ ಇಲ್ಲವೇ—ಇತ್ಯಾದಿ ವಿಷಯಗಳನ್ನು ಗಮನಕ್ಕೆ ತೆಗೆದುಕೊಂಡು ನಾವು ಟೀಕೆ ಟಿಪ್ಪಣಿಗಳನ್ನು ಮಾಡಿದರೆ ಅದು ಸರಿಹೋಗುತ್ತದೆಯೇ ವಿನಾ ಕೇವಲ ಟೀಕೆ ಟಿಪ್ಪಣಿಗಳನ್ನು ಮಾಡಬೇಕು, ಸರ್ಕಾರದವರನ್ನು ಕಟುವಾಗಿ ಟೀಕಿಸಬೇಕು ಎನ್ನತಕ್ಕಂಥ ಧೋರಣೆ ಇಟ್ಟುಕೊಂಡು ವಿರೋಧಪಕ್ಷದವರು ಟೀಕಿಸಿದರೆ ಅದು ಸರಿಯಾದುದಲ್ಲವೆಂದು ನನ್ನ ಮನಸ್ಸಿಗಾದರೂ ತೋರುತ್ತದೆ.

4-30 P.M.

ನನ್ನ ಸ್ನೇಹಿತರಿಗೆ ಹೇಗೆ ಹೆಚ್ಚಿನ ಅವಕಾಶವಿಲ್ಲವೋ ಹಾಗೆಯೇ ನನಗೂ ಹೆಚ್ಚಿನ ಅವಕಾಶವಿಲ್ಲ. ಆದರೂ ಕೂಡ ನಾನು ಈ ಸಪ್ಲಿಮೆಂಟರಿ ಗ್ರಾಂಟ್ ನೋಡಿದ್ದರಲ್ಲಿ ಎಲ್ಲಾ ಡಿಮ್ಯಾಂಡ್‌ಗಳಲ್ಲೂ, ಅವಶ್ಯಕ, ಯತ್ನವಿಲ್ಲದೆ ಖರ್ಚು ಮಾಡಲೇಬೇಕು; ಮಾಡದಿದ್ದರೆ ವಿಧಿ ಇಲ್ಲ ಎಂದು ಕಂಡು ಬಂದದ್ದರಿಂದ ಆ ರೀತಿ ಖರ್ಚು ಮಾಡಿದ್ದಾರೆ ಎಂದು ನನ್ನ ಆಲೋಚನೆ. ಈ ವಿವರಣೆಗಳನ್ನು ನೋಡಿದರೂ ಹಾಗೆಯೇ ಗೊತ್ತಾಗುತ್ತದೆ. ನಾವು ಸುಮಾರು 20 ಕೋಟಿ ರೂಪಾಯಿ ಖರ್ಚು ಮಾಡುತ್ತೇವೆ, ಏನು ಇಷ್ಟು ಭಾರಿ ಹಣ; ಏನೋ ಒಂದು ಭಾರಿ ಅನಾಹುತ ನಡೆದುಹೋಗಿದೆ ಎಂಬ ಭೀತಿಯನ್ನು ಅವರು ಇಟ್ಟುಕೊಂಡು, ದೇಶಕ್ಕೂ ಕೂಡ ಒಂದು ಅನಾವಶ್ಯಕವಾದ ಭೀತಿಯನ್ನು ಕಲ್ಪಿಸುತ್ತಾ ಇದ್ದಾರೆ ಎಂದು ನನಗಾದರೂ ಭಾಸವಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನೀವು ಮಂತ್ರ ಹಾಕಿ! (ನಗು!)

ಶ್ರೀ ಟಿ. ಮಾದಯ್ಯಗೌಡ.—ಸ್ವಲ್ಪ ಕೇಳಿ. ಮಾನ್ಯ ಮಿತ್ರರು ಇನ್ನೂ ದಂಡಕಾರಣ್ಯದಲ್ಲೇ ಇದ್ದಾರೆ. ಅಯೋಧ್ಯಾ ಪಟ್ಟಣಕ್ಕೆ ಬಂದಿಲ್ಲ. ವಿಚಾರ ವಿನಿಮಯ ಮಾಡಿಕೊಂಡರೆ ಈ ರೀತಿ ಅನಾವಶ್ಯಕ ಮಾತುಗಳಿಗೆ ಅವಕಾಶವಿಲ್ಲ ಎಂದು ನಾನಾದರೂ ಬಹಳ ನಮ್ರತೆಯಿಂದ ನಮ್ಮ ಮಿತ್ರರಿಗೆ ಹೇಳಬೇಕಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸೀತೆಯನ್ನು ಕಳೆದುಕೊಂಡ ಜಾಗ ತಮ್ಮದು. (ನಗು!)

ಶ್ರೀ ಟಿ. ಮಾದಯ್ಯಗೌಡ.—ಈಗ ಏನು ಹಣವನ್ನು ಖರ್ಚು ಮಾಡಿ ಸರ್ಕಾರದವರು ಕೇಳುತ್ತಾ ಇದ್ದಾರೆಯೋ ಅದು ಅವಶ್ಯಕವೇ, ಅಲ್ಲವೇ ಎಂಬುದನ್ನು ನಾನು ಈಗ ಈ ಸಭೆಯಲ್ಲಿ ತೋರಿಸಬೇಕು ಎಂದು ಉದ್ದೇಶಪಟ್ಟಿದ್ದೇನೆ. ಉದಾಹರಣೆಗೆ ಕೆಲವು ಡಿಮ್ಯಾಂಡುಗಳನ್ನು ಮಾತ್ರ ತೆಗೆದುಕೊಂಡು ತಮಗೆ ತೋರಿಸುತ್ತೇನೆ. ಐದನೇ ಡಿಮ್ಯಾಂಡ್‌ನಲ್ಲಿ ಸರ್ಕಾರದವರು ಫಾರೆಸ್ಟ್ ಇಲಾಖೆಯ ಕೆಲವು ಬಾಬುಗಳಿಗೆ ಹಣ ಕೇಳುತ್ತಾರೆ. ಕೆಲವು ಟೀಕೆಗಳನ್ನು ನಮ್ಮ ಮಿತ್ರರು ಮಾಡಿದರು : ಫಾರೆಸ್ಟ್ ಇಲಾಖೆ ನಮಗೆ ಹಣವನ್ನು ಕೊಡಬೇಕು, ನಮಗೆ ಆದಾಯ ತರಬೇಕು ; ಖರ್ಚು ಏಕೆ ಮಾಡಬೇಕು ಎಂದು ಅವರು ಕೇಳುತ್ತಾರೆ. ಖರ್ಚು ಮಾಡುವುದೇ ಆದಾಯ ಬರುವುದಕ್ಕೆ. ಫಾರೆಸ್ಟಿನಲ್ಲಿ ಯಾವ ಸಿಬ್ಬಂದಿ ನೇಮಕ ಮಾಡಬಾರದು, ಯಾವ ಖರ್ಚನ್ನು ಮಾಡಬಾರದು, ಅಲ್ಲಿ ಕನ್‌ಸರ್ವೆನ್ಸಿ ಇದಕ್ಕೆಲ್ಲಾ ಬೇಕಾದ ಏರ್ಪಾಡು ಇಡಬಾರದು ; ಹಣ ಮಾತ್ರ ಬರಬೇಕೆಂದರೆ ಆದು ಹೇಗೆ

ಬರುತ್ತದೆಯೋ ಗೊತ್ತಿಲ್ಲ. ಮಾನ್ಯ ಸ್ನೇಹಿತರು ಹೇಳಿದ ಹಾಗೆ ಯಂತ್ರ ಹಾಕಬೇಕಾಗುತ್ತದೆ.

Timber and other products are being removed from the Forests by Government ಎಂದು ಹೇಳುತ್ತಾರೆ. ಹೆಚ್ಚು ಹಣ ಖರ್ಚು ಮಾಡಿದರೆ ಹೆಚ್ಚು ಆದಾಯ ಬರುತ್ತದೆ. ಆದಾಯವೂ ಬೇಡ, ಖರ್ಚು ಬೇಡ ಎಂದರೆ ಅದು ಬೇರೆ ವಿಚಾರ ಆಯಿತು. ಹತ್ತು ಲಕ್ಷ ರೂಪಾಯಿ ಖರ್ಚು ಮಾಡಿದರೆ 50 ಲಕ್ಷವೋ ಒಂದು ಕೋಟಿ ರೂಪಾಯಿಗಳೋ ಬರುತ್ತವೆ ಎಂದರೆ ಏಕೆ ಖರ್ಚು ಮಾಡಬಾರದು ,

ಇನ್ನೊಂದು ಉದಾಹರಣೆಯನ್ನು ಹೇಳುವುದಾದರೆ 7ನೇ ಡಿಮ್ಯಾಂಡಿನಲ್ಲಿ ಎಂದರೆ "Taxes on Vehicles", ಈ ಬಾಬಿನಲ್ಲಿ ನಮಗೆ ವರಮಾನ ಬೇಕು, ಹೆಚ್ಚು ಆದಾಯ ಬೇಕು, ಅದಕ್ಕೆ ಸಿಬ್ಬಂದಿ ಮುಂತಾದುವನ್ನು ಏರ್ಪಡಿಸಿಕೊಳ್ಳಬೇಕು. ಹಾಗೆ ಸಿಬ್ಬಂದಿ ಬೇಕೇ ?, ಬೇಡವೇ ? ಹಣ ಖರ್ಚು ಮಾಡುವುದು ನ್ಯಾಯವೇ, ಅಲ್ಲವೇ ? ಹೀಗೆ ಹೆಚ್ಚು ವರಮಾನ ಬೇಕಾದರೆ ಹೆಚ್ಚು ಖರ್ಚು ಮಾಡಬೇಕು. ಅದಕ್ಕೆ ತಕ್ಕಷ್ಟು ಖರ್ಚು ಮಾಡಬೇಕು, ವರಮಾನ ಪಡೆದುಕೊಳ್ಳಬೇಕು. ಇಂಥ ಕೆಲವು ಐಟಂಗಳು ಯಾವುಯಾವುದಕ್ಕೆ ಖರ್ಚು ಮಾಡಿದ್ದಾರೋ ಅವನ್ನು ಒಪ್ಪಿಕೊಳ್ಳಬೇಕೆಂದು ನಾನಾದರೂ ಅಭಿಪ್ರಾಯಪಡುತ್ತೇನೆ.

ಹೀಗೆಯೇ, "Unforeseen Expenditure", ಎಂಬುದು ಸಹ ಬರುತ್ತದೆ. ಈ ಸಾಲಿನಲ್ಲಿ ದೇಶದಲ್ಲಿ ಪ್ರವಾಹ ಮುಂತಾದುವುಗಳಿಂದ ದೊಡ್ಡ ಅನಾಹುತವಾಗಿದೆ, ಬೇಕಾದಷ್ಟು ನಷ್ಟ ಸಂಭವಿಸಿತು. ಹಾಗೆಯೇ ಅಲ್ಲಲ್ಲಿ ಕ್ಷಾಮ ಡಾಮರಗಳು ತಲೆ ಎತ್ತಿಕೊಂಡು ಕೂಡಲೇ ಸರ್ಕಾರದವರು ತಕ್ಕ ಪರಿಹಾರ ಕೊಡಬೇಕಾಯಿತು. ಒಂದು ವೇಳೆ ಸರ್ಕಾರದವರು ಅದಕ್ಕೆ ಹಣ ಖರ್ಚು ಮಾಡಲಲ್ಲ. ಪ್ರವಾಹದಲ್ಲಿ ನೊಂದಿರತಕ್ಕವರಿಗೆ ಸಕಾಲದಲ್ಲಿ ಸಹಾಯ ಒದಗಿಸಲಿಲ್ಲ, ಯಾರಾದರೂ ಕ್ಷಾಮಡಾಮರಗಳಿಗೆ ಒಳಗಾದೊಡನೆಯೇ ತಕ್ಕ ಪರಿಹಾರವನ್ನು ಒದಗಿಸದಿರುವ ಸಂದರ್ಭದಲ್ಲಿ ಇದೇ ಮಾನ್ಯ ಸದಸ್ಯರು ಸರ್ಕಾರದವರಿಗೆ ಏನು ಅನ್ನುತ್ತಾ ಇದ್ದರು ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಅಲ್ಲೂ ಕೂಡ ಅನೇಕ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇದು ಅನಾವಶ್ಯಕವಾದ ಖರ್ಚೇ ? ಎಂಟು ತಿಂಗಳಿಗೆ ಮುಂಚೆಯೇ ಬಡ್ಜೆಟ್ ಇಟ್ಟರು. ಆಗ ಅದರಲ್ಲಿ ಸೇರಿಸಬಹುದಾಗಿತ್ತು ಎಂಬ ಸಂಗತಿಯನ್ನೂ ಮಾನ್ಯ ಮಿತ್ರರು ಆಲೋಚನೆ ಮಾಡಬೇಕು.

ಇನ್ನು ಕೆಲವು ಬಹಳ ಪ್ರಯೋಜನಕರವಾದ ಬಾಬುಗಳಿಗೆ ಹಣ ಖರ್ಚು ಮಾಡಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ನೀರಾವರಿ ಕೆಲಸವನ್ನು ಪ್ರಾರಂಭ ಮಾಡಿದರು, ಜಾಗ್ರತೆ ಕೆಲಸ ಮುಗಿಸಲಿ ಎಂಬ ಆಶೆ ನಮಗೆಲ್ಲರಿಗೂ ಇದೆ. ಎಷ್ಟೋ ಕೆಲಸ ಮಾಡಬೇಕೆಂದು ನಿರೀಕ್ಷಿಸಿದ್ದರು ಹೆಚ್ಚು ಕೆಲಸ ಆಗಿದೆ. ನಮಗೆಲ್ಲಾ ಬಹಳ ಸಂತೋಷ. ಆದಕ್ಕೆ ಹಣವನ್ನು ಒದಗಿಸುವುದು ತಪ್ಪೇ ?

"Tractor Service", ಇದೆ. ಸ್ಪೇರ್ ಪಾರ್ಟ್ಸ್‌ಗೆ ಹಣ ಒದಗಿಸಿದ್ದಾರೆ. ಕೆಲವು ಹಳೆಯ ಬುಲ್‌ಡೋಜರುಗಳು ಇದ್ದುವು. ಅವನ್ನು ಕೂಡಲೇ ರಿಪೇರಿ ಮಾಡಿಕೊಂಡರೆ ಅದರ ಪ್ರಯೋಜನವನ್ನು ಜನರಿಗೆ ಒದಗಿಸಬಹುದ ಎಂದು ಹಣ ಒದಗಿಸಿದ್ದಾರೆ. ಹಾಗೆ ಹಣ ಒದಗಿಸದಿದ್ದರೆ, ಬುಲ್‌ಡೋಜರುಗಳು ಕೆಟ್ಟುಹೋಗಿ ಮೂಲೆ ಮೂಲೆಯಲ್ಲಿ ಬಿದ್ದಿರುತ್ತಿದ್ದುವು; ಇದರಿಂದ ಜನರಿಗೆ ಸಹಾಯವಾಗುತ್ತಾ ಇರಲಿಲ್ಲ. ಸ್ಪೇರ್ ಪಾರ್ಟ್ಸ್ ತೆಗೆದುಕೊಳ್ಳಬಾರದಾಗಿತ್ತೇ ಎಂದು ಅವರೇ ಹೇಳುತ್ತಾ ಇದ್ದರು. ಅದನ್ನು ನಿವಾರಣೆ ಮಾಡುವುದಕ್ಕೆ ಸ್ಪೇರ್ ಪಾರ್ಟ್ಸ್ ತೆಗೆದುಕೊಳ್ಳುವುದು ಮತ್ತು ಹೊಸ ಬುಲ್‌ಡೋಜರುಗಳನ್ನು ಕೊಂಡುಕೊಳ್ಳುವುದು ಇದರಲ್ಲಿ ಯಾವ ರೀತಿ ಅನ್ಯಾಯವಾಗಿದೆ ಎಂಬುದು ನನಗೆ ಅರ್ಥವಾಗಲಿಲ್ಲ.

ಹಾಗೆಯೇ ಚುನಾವಣೆ ನಡೆಸುವ ಸಂದರ್ಭದಲ್ಲಿ ಹೆಚ್ಚು ಪೋಲೀಸ್ ಸಿಬ್ಬಂದಿ ಬೇಕಾಗಿತ್ತು. ಅದಕ್ಕೆ ಹಣ ಖರ್ಚು ಮಾಡಿದ್ದಾರೆ. ದೇಶದಲ್ಲಿ ಚುನಾವಣೆಗಳು ನಡೆದಿವೆ. ಯಾವ ವಿಧವಾದ ಹೆಚ್ಚು ತೊಂದರೆ ಇಲ್ಲದೆ ಸಂಬಂಧಪಟ್ಟ ಇಲಾಖೆಯವರು ನಡೆಸಿಕೊಟ್ಟಿದ್ದಾರೆ. ಅದಕ್ಕೆ ತಕ್ಕಂಥ ಸಿಬ್ಬಂದಿಯನ್ನು ಏರ್ಪಡಿಸಿಕೊಂಡರೆ ಅದಕ್ಕೆ ಕೊಂಚ ಹಣ ಜಾಸ್ತಿ ಖರ್ಚಾದರೆ ಅದಕ್ಕೆ ನಾವು ಅಪಾರ್ಥ ಕಲ್ಪಿಸುವುದು ಖಂಡಿತವಾಗಿಯೂ ಸೂಕ್ತವಲ್ಲ.

ಹೀಗೆಯೇ ಇನ್ನೊಂದು ಐಟಂನ್ನು ಪರಾಂಬರಿಸೋಣವಾಗಲಿ. 22ನೇ ಡಿಮ್ಯಾಂಡಿನಲ್ಲಿ Payments by Government, recoverable from Local Bodies ಎಂದು ಏನಿದೆ ಇದು ಕೇವಲ adjustment ; ಒಂದು ಜೇಬಿನಿಂದ ಹಣ ತೆಗೆದು ಇನ್ನೊಂದು ಜೇಬಿಗೆ ಹಾಕಿಕೊಳ್ಳುವುದು. Explanatory Noteನಲ್ಲಿ " This does not involve any out-go of cash as it is only an accounting adjustment" ಎಂದು ಹೇಳಿದ್ದಾರೆ. ಅದಕ್ಕೆ 4,37,200 ರೂಪಾಯಿ ಖರ್ಚು ಮಾಡಿದ್ದಾರೆ. ಮಾಡಬಾರದಾಗಿತ್ತೇ ? '20 ಕೋಟಿ ರೂಪಾಯಿ' ಖರ್ಚಾಗಿದೆ ಎಂದು ದೊಡ್ಡದಾಗಿ ಹೇಳುತ್ತಾ ಹೋಗುವುದು ಇದು ಒಂದು ಸ್ಲೋಗನ್ ಅಷ್ಟೆ.

ಕೆಲವು ಬಾಬುಗಳಿಗೆ ಕೇಂದ್ರದವರು ಹಣ ಕೊಟ್ಟಿದ್ದಾರೆ. ಬಡ್ಜೆಟ್ ತಯಾರಾಗುವುದಕ್ಕೆ ಮೊದಲೇ ಅವರು ಹಣ ಮಂಜೂರು ಮಾಡಿರಲಿಲ್ಲ. ಈಚೆಗೆ ಮಂಜೂರಾಗಿದೆ. ಅದಕ್ಕೆ ನಮ್ಮ ಭಾಗವನ್ನು ಕೊಟ್ಟರೆ ಆ ಹಣ ಪ್ರಯೋಜನವಾಗುತ್ತದೆ. ಹಾಗೆ ಕೊಡದಿದ್ದರೆ ಅವರು ಹಣ ಕೊಟ್ಟದ್ದು ನಿಷ್ಪ್ರಯೋಜಕವಾಗುತ್ತದೆ. ನಾವು ನಮ್ಮ ಭಾಗದ ಹಣವನ್ನು ಸೇರಿಸಿ, ಆ ಹಣವನ್ನು ಸೇರಿಸಿ ಉಪಯೋಗಿಸಿಕೊಂಡಿದ್ದರಿಂದ ದೇಶಕ್ಕೆ ಹಿತ ಆಯಿತೇ ಅನಾಹುತವಾಯಿತೇ ? ಇದು ಅವಶ್ಯಕವಾದ ಖರ್ಚು ಅಲ್ಲವೇ ? ಹೇಗೆ ಎನ್ನುವುದನ್ನು ಕೂಡ ಮಾನ್ಯ ಸದಸ್ಯರು ಮನಗಾಣಬೇಕು ಎಂದು ನಾನಾದರೂ ಅಂದುಕೊಂಡಿದ್ದೇನೆ. 24ನೆಯ ಬೇಡಿಕೆಯನ್ನು ತಾವು ಪರಾಂಬರಿಸೋಣವಾಗಲಿ. ಇದನ್ನು ಸರಿಯಾಗಿ ಓದಿದರೆ ಗೊತ್ತಾಗುತ್ತದೆ. ಒಂದು ಉಪಯುಕ್ತವಾದ ಕೆಲಸಮಾಡಲು ಕೇಂದ್ರ ಸರ್ಕಾರದ ಸಹಾಯ ಪಡೆಯಲು ಹಣವನ್ನು ನಾವು ಮೊದಲು ಖರ್ಚು ಮಾಡಬೇಕಾಯಿತು. ಅದಕ್ಕಾಗಿ ಈ ಸಪ್ಲಿಮೆಂಟರಿ ಬೇಡಿಕೆ ಬಂದಿದೆ. ಇದು ಅನಾವಶ್ಯಕವಾದ ಯಾವ ಖರ್ಚೂ ಅಲ್ಲವೆಂದು ಸ್ಪಷ್ಟವಾಗುತ್ತದೆ. " Government of India have recently Communicated their concurrence for the Centrally sponsored schemes for the Welfare of Scheduled Castes and Ex-criminal tribes at a total cost of Rs. 5·28 lakhs" .... lakhs was Sanctioned from the Contingency Fund." ಎಂದು ದೀರ್ಘವಾದ ವಿವರಣೆ

(ಶ್ರೀ ಟಿ. ಮಾದಯ್ಯಗೌಡ)

ಕೊಟ್ಟಿದೆ. ಇಂಥಾ ಕಾರ್ಯಗಳಿಗೆ ಅಗತ್ಯವಾದ ಮೊಬಲಗುಗಳನ್ನು ಒಟ್ಟು ಸೇರಿಸಿ 20 ಕೋಟಿ ರೂಪಾಯಿ ಆದರೆ ಅದನ್ನು ಅನಾವಶ್ಯಕ ಖರ್ಚು ಎಂದರೆ ಅದು ಒಪ್ಪತಕ್ಕಮಾತಲ್ಲ. ಈ ಹಣವನ್ನೆಲ್ಲಾ ಏಕೆ ಖರ್ಚು ಮಾಡುತ್ತಾರೆ, ಯಾವರೀತಿಯಲ್ಲ ಖರ್ಚು ಮಾಡುತ್ತಾರೆ, ಎಲ್ಲಿಂದ ತರುತ್ತಾರೆಂಬುದಕ್ಕೆ ಉತ್ತರ ಈ ಅಂದಾಜು ಪತ್ರದಲ್ಲಿ ಕೊಟ್ಟಿರುವ, "Introductory Memorandum" ನಲ್ಲಿದೆ; 4ನೆಯ ಪ್ಯಾರಾ ಓದಿದರೆ ಸ್ಪಷ್ಟವಾಗುತ್ತದೆ. ಆದುದರಿಂದ ಈ ಹಣವನ್ನು ಹೇಗೆ ಒದಗಿಸಿದ್ದಾರೆಂದು ಟೀಕೆ ಮಾಡಬೇಕಾಗಿಲ್ಲ. ಅನಾವಶ್ಯಕವಾದ ಟೀಕೆಗಳಿಂದ ಪ್ರಯೋಜನವಿಲ್ಲ. ಸರ್ಕಾರದವರು ಏನು ಬೇಡಿಕೆಗಳನ್ನು ತಂದಿದ್ದಾರೋ ಅದನ್ನು ಎಲ್ಲರೂ ಪುಷ್ಟೀಕರಿಸಬೇಕಾದುದು ನ್ಯಾಯವೆಂದು ನನಗನಿಸುತ್ತದೆ.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸಿಪುರ).—ಮಾನ್ಯ ಸಭಾಧ್ಯಕ್ಷರೆ, ಸರ್ಕಾರ ನಮ್ಮ ಮುಂದಿಟ್ಟಿರುವ ಈ ಸಪ್ಲಿಮೆಂಟರಿ ಎಸ್ಟಿಮೇಟನ್ನು ವಿರೋಧಿಸಿ ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒಂದೆರಡು ಸಲಹೆಗಳನ್ನು ಕೊಡಲು ಬಯಸುತ್ತೇನೆ. ಇದುವರೆಗೆ ಮಾತನಾಡಿದ ಆಡಳಿತ ಪಕ್ಷದ ಸದಸ್ಯರು ಕೇವಲ ವಿರೋಧ ಪಕ್ಷದ ಸದಸ್ಯರು ಈ ಬಡ್ಜೆಟ್ಟನ್ನು ವಿರೋಧ ಮಾಡುವುದು ಅನಾವಶ್ಯಕವೆಂದು ಹೇಳಿದರು ಈ ಖರ್ಚು ದೇಶದ ಹಿತದೃಷ್ಟಿಯಿಂದ, ಜನತೆಯ ಹಿತದೃಷ್ಟಿಯಿಂದ ಮಾಡಿರುವುದು, ಇದನ್ನು ವಿರೋಧ ಮಾಡದೆ ಒಪ್ಪಿಕೊಳ್ಳುವುದು ಆವಶ್ಯಕವೆಂದು ಹೇಳಿದರು. ಆದರೆ ನಮಗೆ ಇದು ಸರಿಯೆಂದು ಕಾಣುವುದಿಲ್ಲ. ಈಗ ನಮ್ಮ ಮುಂದಿರುವ ಸಪ್ಲಿಮೆಂಟರಿ ಬಡ್ಜೆಟ್ 20 ಕೋಟಿ ರೂಪಾಯಿಗಳನ್ನೊಳಗೊಂಡಿದೆ. ನಿಜವಾಗಿಯೂ ನಿರ್ದಿಷ್ಟವಾಗಿ, ವಿತರಣೆಯಿಂದ ಬಡ್ಜೆಟ್ಟನ್ನು ತಯಾರು ಮಾಡಿದ್ದರೆ ಇಂಥ ಹೆಚ್ಚುವರಿ ಬೇಡಿಕೆಗಳನ್ನೊಳಗೊಂಡ ಬಡ್ಜೆಟ್ಟನ್ನು ತರುವ ಅಗತ್ಯವೇ ಇರುತ್ತಿರಲಿಲ್ಲ.

ಒಂದು ವಿಷಯವನ್ನು ತಮ್ಮ ಮುಂದಿಡುತ್ತೇನೆ. 29ನೆಯ ಬೇಡಿಕೆಯ 11ನೆಯ ಐಟೆಮ್‌ಗೆ ಕೊಟ್ಟಿರುವ ವಿವರ ಈ ರೀತಿಯಿದೆ;

"The grant of Rs 10.00 lakhs provided in the current year's budget is found to be inadequate. Several incomplete works had to be completed and urgent fresh works of inescapable nature had also to be taken up. The expenditure incurred up to end of December 1961 is Rs. 14,56,495 against the sanctioned grant of Rs. 10,00,000. The sanctioned grant is already exceeded and a further expenditure of Rs.14,00 lakhs is anticipated to be incurred during the remaining part of the year over and above the expenditure incurred to end of December 1961. Hence the Demand." ಈ ಒಂದು ಉದಾಹರಣೆಯನ್ನು ನಾವು ನಿಜವಾಗಿ ಪರಿಶೀಲನೆ ಮಾಡುವುದಾದರೆ ಈ ಹಣವನ್ನು ಈ ವರ್ಷದ ಬಡ್ಜೆಟ್‌ನಲ್ಲೇ ಒದಗಿಸಬಹುದಾಗಿತ್ತೆಂಬುದು ವ್ಯಕ್ತವಾಗುತ್ತದೆ. ವಿತರಣೆಯಿಂದ ಬಡ್ಜೆಟ್ಟನ್ನು ಮಾಡಿದ್ದಿದ್ದರೆ ಈ ರೀತಿ 18 ಲಕ್ಷ ರೂಪಾಯಿಗಳನ್ನು ಈಗ ಕೇಳಬೇಕಾದ ಆವಶ್ಯಕತೆಯಿರಲಿಲ್ಲ. ನಿರ್ದಿಷ್ಟ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಂಡು ಮಾಡಬೇಕೇ ವಿನಾ ಸ್ವೇಚ್ಛೆಯಾಗಿ ಕೆಲಸ ಕಾರ್ಯಗಳನ್ನು ಮಾಡಿದರೆ ಹೀಗಾಗುತ್ತದೆ.

ಇನ್ನೊಂದು ಉದಾಹರಣೆಯನ್ನು ಹೇಳುವುದಾದರೆ, 'Rural Communication' ವಿಚಾರವನ್ನು ತಮ್ಮ ಬಡ್ಜೆಟ್ ಭಾಷಣದಲ್ಲಿ ಮುಖ್ಯ ಮಂತ್ರಿಗಳು ಹೇಳಿದ್ದಾರೆ, ತಾಲ್ಲೂಕಿಗೆ 50 ಮೈಲಿಗಳಂತೆ ಈ ಗ್ರಾಮಾಂತರ ರಸ್ತೆಗಳನ್ನು ಮಾಡ ಬೇಕೆಂದಿರುವಾಗ ಕೆಲವು ತಾಲ್ಲೂಕುಗಳಲ್ಲಿ ನಾಲ್ಕುನೂರು ಮೈಲಿಗಳಷ್ಟು ಮಾಡಿರುವ ಸಂದರ್ಭಗಳೂ ಇವೆ, ಇವು ಅವರಿಗೂ ಗೊತ್ತಿದೆ. ಸರ್ಕಾರ ಏನಾದರೊಂದು ಕಾರ್ಯವನ್ನು ತೆಗೆದುಕೊಂಡರೆ ಅದನ್ನು ಸರಿಯಾಗಿ ಮಾಡದೆ ಮನಸ್ವಿಯಾಗಿ ಮಾಡಿದರೆ ಹೀಗಾಗುತ್ತದೆ. ಯಾವ ಕಾರ್ಯಕ್ರಮವನ್ನು ತೆಗೆದುಕೊಂಡರೂ ಕೂಡ ಅದನ್ನು ಇಡೀ ಜನತೆಯ ದೃಷ್ಟಿಯಿಂದ, ದೇಶದ ದೃಷ್ಟಿಯಿಂದ ಮಾಡಬೇಕಾದುದು ಸರ್ಕಾರದ ಆದ್ಯಕರ್ತವ್ಯ. ಈ ಗ್ರಾಮಾಂತರ ರಸ್ತೆಗೆ ಮೈಲಿಗೆ ಐದಾರು ಸಾವಿರ ರೂಪಾಯಿ ಖರ್ಚುಮಾಡಿದರೆ, ಇಂಥ ರಸ್ತೆಯಿಂದ ಪ್ರಯೋಜನವೇನು ? ಇದರಿಂದ ಜನರಿಗೆ ಎಷ್ಟು ಅನುಕೂಲವಾಗಬಹುದೆಂಬುದನ್ನು ಅವರೇ ಯೋಚನೆ ಮಾಡಬೇಕು. 50 ಮೈಲಿ ಮಾಡಬೇಕೆಂದು ಕಾರ್ಯಕ್ರಮವಿದ್ದರೂ ನಾಲ್ಕುನೂರು ಐದುನೂರು ಮೈಲಿ ಮಾಡುವುದು ಕೇವಲ ಚುನಾವಣೆ ಕಾಲದಲ್ಲಿ ಜನರ ಮೆಚ್ಚಿಗೆಗೆ ಪಾತ್ರರಾಗಬೇಕೆಂಬ ಉದ್ದೇಶದಿಂದ ಮಾತ್ರವೇ ವಿನಾ ಇನ್ನೇನೂ ಉದ್ದೇಶವಿಲ್ಲ. ಇದರಿಂದ ಜನತೆಗೆ ಅನುಕೂಲವಾಗಿದೆಯೆ ಎನ್ನುವುದನ್ನು ಸರ್ಕಾರ ನೋಡಬೇಕು. ಅನೇಕ ಕಡೆ ರಸ್ತೆಗಳನ್ನು ಫಾರಂ ಮಾಡಿ ಜಲ್ಲಿ ಹಾಕಿಲ್ಲ, ಕಲ್ವರ್ಟ್‌ಗಳು ಕಾಸ್‌ವೇಗಳನ್ನು ಕಟ್ಟಿಲ್ಲ. ಇದರಿಂದ ಪ್ರಯೋಜನವಾಗುವ ಬದಲು ಅನನುಕೂಲವಾಗಿದೆ. ಇಂಥ ಸರ್ಕಾರ ಯಾವ ಸೌಭಾಗ್ಯಕ್ಕಾಗಿರಬೇಕು ? ಹೀಗೆ 50 ಮೈಲಿ ಮಾಡುವ ಬದಲು ಐದೇ ಮೈಲಿ ಮಾಡಲಿ. ಆದರೆ ಒಳ್ಳೆಯ ಕೆಲಸ ಮಾಡಲಿ, ಜನರಿಗೆ ಅನುಕೂಲವಾಗುವಂತೆ ಮಾಡಲಿ

29ನೆಯ ಬೇಡಿಕೆಯ ವಿವರಣೆಯಲ್ಲಿ "urgent fresh works of inescapable nature had also to be taken up" ಎಂದು ಹೇಳಿದ್ದಾರೆ. ಹೀಗೆಂದರೇನೆಂಬದನ್ನು ಸರ್ಕಾರ ವಿವರಿಸ ಬೇಕೆಂದು ಕೇಳಿಕೊಳ್ಳುತ್ತೇನೆ.

Demand No. 46, item 7 ನಲ್ಲಿ 17.50 ಲಕ್ಷ ರೂಪಾಯಿ ಕೇಳಿದ್ದಾರೆ. "The Budget provision of Rs. 4.00 lakhs under this head is found to be inadequate in view of heavy bills pending settelement and therefore an additional provision of Rs. 17·50 lakhs is necessary. Hence this Demand" ಎಂದು ವಿವರಣೆಯಲ್ಲಿ ಹೇಳಿದ್ದಾರೆ. ಒಂದೇ ಪ್ರಶ್ನೆಯನ್ನು ಕೇಳುತ್ತೇನೆ ಈ ವರ್ಷದ ಬಡ್ಜೆಟ್ ತಯಾರು ಮಾಡುವಾಗ ಬೆಂಗಳೂರು ಸರ್ಕಲ್‌ನಲ್ಲಿ 17·50 ಲಕ್ಷ ರೂಪಾಯಿ ಬಿಲ್ ಕೊಡಬೇಕಾಗಿದ್ದದನ್ನು ಏಕೆ ಸೇರಿಸಿ ಕೊಡಲಿಲ್ಲ? ಹೀಗೆ ಆವಶ್ಯಕವಿತ್ತೇ ಎನ್ನುವುದನ್ನು ನೋಡದೆ, ಬೇಜವಾಬ್ದಾರಿಯಾಗಿ ಬಡ್ಜೆಟ್ ಮಾಡಿದ್ದಾರೆಂದು ಕಾಣುತ್ತದೆ. ಮೊದಲು ಸೇರಿಸದೆ ಹೀಗೆ ಸಪ್ಲಿಮೆಂಟರಿ ಬಡ್ಜೆಟ್ ನಲ್ಲಿ ಇದೇಕೆ ಬಂತು ಎನ್ನುವುದನ್ನು ಮಂತ್ರಿಗಳು ತಿಳಿಸಬೇಕೆಂದು ಕೇಳುತ್ತೇನೆ. ಹೀಗೆ ಇಂಥಾ

ಸರ್ಕಾರ ತಾವು ಕೊಡಬೇಕಾಗಿರ ತಕ್ಕಂಥ ಒಂದು ಬಿಲ್ ಆಗಲೀ, ಅಥವಾ ಇನ್ನು ಯಾವುದೇ ಬಾಬು ಆಗಲೀ ಅವುಗಳನ್ನು ಬಡ್ಜೆಟ್ ತಯಾರು ಮಾಡತಕ್ಕ ಕಾಲದಲ್ಲಿ ಸೇರಿಸಿ ಕೊಳ್ಳ ಬಹುದು. ಹಾಗೇನಾದರೂ ಕೇವಲ ಅನಿವಾರ್ಯದ ಕೆಲಸಕಾರ್ಯಗಳ ಬಿಲ್ಸ್ ಇದ್ದರೆ ಆಗ ಸಪ್ಲಿಮೆಂಟರಿ ಡಿಮ್ಯಾಂಡನ್ನು ಈ ಸಭೆಯ ಮುಂದೆ ತಂದು, ಈ ಸಭೆಯ ಒಪ್ಪಿಗೆಯನ್ನು ಪಡೆಯಬಹುದು. ಈಗ ಸರ್ಕಾರದವರು ಕೊಡಬೇಕಾಗಿರತಕ್ಕಂಥ ಬಿಲ್ಲುಗಳು ಏನಿವೆ ಅವು ಈಗ ರೀಸೆಂಟಾಗಿ ಬಂದಿರ ತಕ್ಕುವುಗಳಲ್ಲ. ಅವು ಹಿಂದಿನ ವರ್ಷ ವ್ಯಯವಾಗಿರ ತಕ್ಕಂಥವುಗಳು ಎಂದು ನಾನು ಹೇಳುತ್ತೇನೆ.

ಇನ್ನು ಡಿಮ್ಯಾಂಡ್ ನಂಬರ್ 5, ಐಟಂ 3ರಲ್ಲಿ " Other Charges ಎಂದು ಇದೆ. ಅದರಲ್ಲಿ " The current year's Budget Provision of Rs.11,85,300 is found to be inadequate according to the progress of expenditure as certain outstanding bills on account of supply of timber to the Mills are pending payment. Hence the Demand " ಎಂದು ಹೇಳಿದ್ದಾರೆ. ಈ ಡಿಮ್ಯಾಂಡಿನಲ್ಲಿ ಕೇಳಿರತಕ್ಕಂಥ ಐದು ಲಕ್ಷ ಚಿಲ್ಲರೆ ರೂಪಾಯಿಗಳ ಬಿಲ್ಲುಗಳನ್ನು ಕೊಡಬೇಕು ಎನ್ನುವುದು ಸರ್ಕಾರಕ್ಕೆ ಗೊತ್ತಿರಲಿಲ್ಲವೇ ಎಂದು ನನಗಾದರೂ ಎನಿಸುತ್ತದೆ. ಇದನ್ನೂ ಕೂಡ ಬಡ್ಜೆಟ್ ತಯಾರು ಮಾಡುವಾಗಲೇ ಏತಕ್ಕೆ ಸೇರಿಸಲಿಲ್ಲ? ಸಂಬಂಧಪಟ್ಟ ಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುತ್ತೇನೆ. ಈಗಾಗಲೇ ಕಾಂಗ್ರೆಸ್ ಪಕ್ಷದಲ್ಲಿ ಮಾತನಾಡಿದ ಮಾನ್ಯ ಸದಸ್ಯರೊಬ್ಬರು ಹೇಳಿದರು : ವಿರೋಧ ಪಕ್ಷದವರು ಎಷ್ಟೇ ವಿರೋಧ ಮಾಡಿದರೂ ಅದನ್ನು ಅಂಗೀಕಾರ ಮಾಡತಕ್ಕಬೆಂಬಲ ತಮಗೆ ಇದೆಯೆಂದು. ಆದ್ದರಿಂದ ನಮ್ಮ ಕರ್ತವ್ಯವೇನಿದ್ದರೂ ಕನ್‌ಸ್ಟ್ರಕ್ಟೀವ್ ಸಜೆಷನ್ಸ್ ಕೊಡತಕ್ಕದ್ದು ಎಂದು ಹೇಳಿ ಸಾರ್ವಜನಿಕರ ದುಡ್ಡನ್ನು ವಿನಿಯೋಗ ಮಾಡುವಾಗ ಆದ್ಯಗಮನವನ್ನು ಕೊಟ್ಟು ಸರಿಯಾದ ವಿತರಣೆಯಿಂದ ನಿರ್ದಿಷ್ಟವಾದ ಕಾರ್ಯಕ್ರಮವನ್ನು ಹಾಕಿಕೊಂಡು ದೇಶದ ಮತ್ತು ಜನತೆಯ ಕಲ್ಯಾಣಕೋಸ್ಕರವಾಗಿ ಅದನ್ನು ಉಪಯೋಗ ಮಾಡಬೇಕು ಎಂದು ಸರ್ಕಾರದವರನ್ನು ಪ್ರಾರ್ಥನೆ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ. ಪಿ. ಅಪ್ಪಣ್ಣ (ವಿರಾಜಪೇಟೆ).—ಮಾನ್ಯ ಅಧ್ಯಕ್ಷರೇ, ಈಗ ಈ ಸಭೆಯ ಮುಂದೆ ಇಟ್ಟಿರತಕ್ಕ ಸಪ್ಲಿಮೆಂಟರಿ ಡಿಮ್ಯಾಂಡಿನ ವಿಚಾರವಾಗಿ ಮಾನ್ಯ ಸದಸ್ಯರು ಮಾತನಾಡುತ್ತಾ ಇರುವುದನ್ನು ನಾನು ಟೀಕೆ ಮಾಡುವುದಿಲ್ಲ. ಆದರೆ ಈಗಾಗಲೇ ಮಾತನಾಡಿದ ಸ್ವತಂತ್ರ ಪಕ್ಷದ ಮಾನ್ಯ ಸದಸ್ಯರೊಬ್ಬರು ಕಾಂಗ್ರೆಸ್ ಪಕ್ಷದಲ್ಲಿರುವಂಥ ತಪ್ಪುಗಳು ಒಂದು ಪತ್ರಿಕೆಯಲ್ಲಿ ಪ್ರಕಟಣೆಯಾದ ವಿಚಾರವಾಗಿ ಮಾತನಾಡಿದರು. ಒಂದು ದೊಡ್ಡ ಕಟ್ಟೆಯನ್ನು ಕಟ್ಟುವುದಕ್ಕೆ ವಿರೋಧವಾಗಿ ಪ್ರಕಟಣೆಗಳನ್ನು ಹೊರಡಿಸಿದ್ದಾರೆ, ಕಾಂಗ್ರೆಸ್ಸಿನ ಸೋಷಿಯಲಿಸ್ಟಿಕ್ ಪ್ಯಾಟರನ್ ಆಫ್ ಸೊಸೈಟಿಯ ಧೋರಣೆಗೆ ಇದು ವಿರೋಧವಾಗಿದೆ ಎನ್ನುವ ರೀತಿಯಲ್ಲಿ ಅವರು ಹೇಳಿದ್ದಾರೆ. ಈ ಸಂದರ್ಭದಲ್ಲಿ ಮಾನ್ಯಸದಸ್ಯರ ಗಣನೆಗೆ ತರಬೇಕಾದಂಥ ಒಂದು ವಿಷಯವೇನೆಂದರೆ ನಾನು ಬಂದಿರುವಂಥಾ ಕ್ಷೇತ್ರ ಕೊಡಗಿನಲ್ಲಿದೆ. ಕೊಡಗಿನಲ್ಲಿ ಚುನಾವಣೆಗೆ ನಿಂತಿದ್ದ ಸ್ವತಂತ್ರ ಪಕ್ಷದ ಉಮೇದುವಾರರು ನಮಗೆ ವೋಟು ಕೊಟ್ಟರೆ ಕೊಡಗಿನಲ್ಲಿ ಕಟ್ಟುವಂಥಾ ಕಟ್ಟೆಯ ವಿರುದ್ಧವಾಗಿ ನಾವು ಹೋರಾಡುತ್ತೇವೆ ಎನ್ನುವಂಥಾ ಒಂದು ಧೋರಣೆಯನ್ನು ಹೊತ್ತಿದ್ದರು. ಆ ರೀತಿ ಅವರು ಆ ಕಟ್ಟೆಯ ವಿರುದ್ಧವಾಗಿ ಹೋರಾಡಿದ್ದರೂ ಸಹ ಸರ್ಕಾರದವರು ಅದಕ್ಕೆ ಸಂಬಂಧ ಪಟ್ಟವರೊಡನೆ ವ್ಯವಹರಿಸಿ ವಿಷಯವನ್ನು ತಿಳಿದುಕೊಂಡು ಈ ಸಂದರ್ಭದಲ್ಲಿ ಸರ್ಕಾರದವರು ಒಂದು ಪ್ರಕಟಣೆಯನ್ನು ಹೊರಡಿಸಿದ್ದಕ್ಕೆ ನಾವು ಸರ್ಕಾರದವರನ್ನು ಅಭಿವಂದಿಸಬೇಕಾಗಿದೆ. ಏತಕ್ಕೆಂದರೆ ಆ ಕಟ್ಟೆಯನ್ನು ಕಟ್ಟುವುದರಿಂದ ಆಗುವಂಥ ಅನಾಹುತವನ್ನು ನಿಲ್ಲಿಸಿದ್ದಾರೆ.

ಇನ್ನು ಈ ಸಭೆಯ ಮುಂದೆ ಮಂಡಿಸಿರುವ ಸಪ್ಲಿಮೆಂಟರಿ ಡಿಮ್ಯಾಂಡಿನ ವಿಚಾರವಾಗಿ ಹೇಳುವುದಾದರೆ ಈಗ ಸರ್ಕಾರದವರು ಈ ಸಭೆಯ ಮುಂದಿಟ್ಟಿರುವ ಡಿಮ್ಯಾಂಡ್ ನಿಜವಾಗಿಯೂ ಅರ್ಹತೆಯನ್ನು ಪಡೆದಿದೆ ಎಂದು ನಾನು ಹೇಳುತ್ತೇನೆ. ನಮ್ಮ ಕೊಡಗು ಜಿಲ್ಲೆಯಲ್ಲಿ ಮಳೆಗಾಲದಲ್ಲಿ ಉಂಟಾದಂಥ ಪ್ರವಾಹದಿಂದ ಜನಗಳು ಪಟ್ಟಿರುವ ಕಷ್ಟವನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಅಂಥಾ ಒಂದು ಕಷ್ಟ ಕಾಲದಲ್ಲಿ ಸರ್ಕಾರದವರು ನಮ್ಮ ಕೊಡಗು ಜಿಲ್ಲೆಯಲ್ಲಿ ಎಷ್ಟೋ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ರಸ್ತೆಗಳನ್ನು ಸೇತುವೆಗಳನ್ನು ಸರಿಪಡಿಸಿದ್ದಾರೆ. ಪ್ರವಾಹದಿಂದ ಕಷ್ಟಪಟ್ಟಂಥ ಜನಗಳಿಗೆ ತಕಾವಿಲೋನು, ಮುಂತಾದುವುಗಳನ್ನು ಕೊಟ್ಟು ಸಹಾಯ ಮಾಡಿದ್ದಾರೆ. ಹಣವನ್ನು ವ್ಯಯಮಾಡಿದ್ದಾರೆ ಎನ್ನುವ ವಿಚಾರ ಎಲ್ಲರಿಗೂ ಗೊತ್ತಿದೆ. ಅಂಥಾ ಒಂದು ಕಷ್ಟಪರಿಸ್ಥಿಯಲ್ಲಿ ಸರ್ಕಾರದವರು ಜನಗಳಿಗೆ ಆ ರೀತಿ ಸಹಾಯವನ್ನು ನೀಡದಿದ್ದರೆ ವಿರೋಧ ಪಕ್ಷದಲ್ಲಿ ಇರುವಂಥ ಮಾನ್ಯ ಸದಸ್ಯರುಗಳು ಇದೇ ಸಭೆಯಲ್ಲಿ ಅದನ್ನು ಟೀಕಿಸುತ್ತಿದ್ದರು. ಆದರೆ ಪರಿಹಾರವನ್ನು ಕೊಡಲಿಕ್ಕೆ ಮುಂದೆ ಬಂದಂಥ ಸರ್ಕಾರದ ಬೇಡಿಕೆಗಳನ್ನು ಟೀಕಿಸಿದ್ದಾರೆ. ಅದು ಸರಿಯಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಟೀಕೆ ಮಾಡಬಾರದು ಎಂದು ಹೇಳುತ್ತೀರಾ?

ಶ್ರೀ ಎ. ಪಿ. ಅಪ್ಪಣ್ಣ.—ಸ್ವಾಮಿ, ನಾನು ಮತ್ತು ನನ್ನ ಅನೇಕ ಮಂದಿ ಸ್ನೇಹಿತರು ಈ ಸಭೆಗೆ ಹೊಸಬರು. ಇದರಲ್ಲಿ ಕೆಲವು ಮಂದಿ ಮಾನ್ಯ ಸದಸ್ಯರು ಹಳಬರೂ ಇದ್ದಾರೆ. ಅದರಲ್ಲೂ ಶ್ರೀಮಾನ್ ಮುಕ್ಕಣ್ಣಪ್ಪನವರು ಈ ಸಭೆಯಲ್ಲಿ ಮೊದಲಿನಿಂದಲೂ ಇದ್ದಾರೆ. ಈ ಸಭೆಯಲ್ಲಿ ಯಾವರೀತಿ ವರ್ತಿಸಬೇಕು, ಯಾವರೀತಿ ನಡೆದುಕೊಳ್ಳಬೇಕು ಎಂಬುದನ್ನು ಶ್ರೀಮಾನ್ ಮುಕ್ಕಣ್ಣಪ್ಪನವರಿಂದ ಅರಿತುಕೊಳ್ಳಬೇಕು ಎಂಬ ದೃಷ್ಟಿಯಿಂದ ನಾನು ಇಲ್ಲಿಗೆ ಬಂದಿಲ್ಲ. ಒಬ್ಬ ಸದಸ್ಯರು ಸಭೆಯಲ್ಲಿ ಮಾತನಾಡುತ್ತಾ ಇರುವಾಗ ಮಧ್ಯದಲ್ಲಿ ಇವರು ತಲೆಹಾಕಿ.........

Sri C. J. MUCKANNAPPA.—I object to his statement, Sir, It is not he who can ask me to behave well. The Chair is there to do that. He cannot make any statement that he likes. Sir, you have to call the member to order.

Mr. SPEAKER.—When the Hon'ble member has not yielded, you are not to tell what the Chair should do.

Sri C. J. MUCKANNAPPA.—Because he does not yield, can he speak anything he likes?

Mr. SPEAKER.—I know how and when to protect the interests of every member. I suggest that there should be no personal remarks by one against another. The Hon'ble member will kindly deal with the demands before the House.

ಶ್ರೀ ಎ. ಪಿ. ಅಪ್ಪಣ್ಣ.—ನಾನು ಹೇಳಿದ್ದು ಏನೆಂದರೆ ನಾನು ಮತ್ತು ನನ್ನ ಅನೇಕ ಮಂದಿ ಸ್ನೇಹಿತರು ಈ ಸಭೆಗೆ ಹೊಸಬರು. ಆದ್ದರಿಂದ ಈ ಸಭೆಯಲ್ಲಿ ಮೊದಲಿನಿಂದಲೂ ಇದ್ದಂಥ ಮಾನ್ಯ ಸದಸ್ಯರು ನಮಗೆ ಒಂದು ಮಾರ್ಗದರ್ಶನ ಕೊಟ್ಟು ನಾವು ಸರಿಯಾದ ರೀತಿಯಲ್ಲಿ ನಡೆದುಕೊಳ್ಳುವಂತೆ ಮಾಡಬೇಕು. ಈಗ ಸರ್ಕಾರದವರು ಈ ಸಭೆಯುಮುಂದೆ ಮಂಡಿಸಿರತಕ್ಕಂಥ ಸಪ್ಲಿಮೆಂಟರಿ ಡಿಮ್ಯಾಂಡಿನಲ್ಲಿ ಕೇಳಿರತಕ್ಕ ಡಿಮ್ಯಾಂಡುಗಳು ನಿಜವಾಗಿಯೂ ಅರ್ಹತೆಯನ್ನು ಪಡೆದಂಥಾ ಡಿಮ್ಯಾಂಡುಗಳಾಗಿರುತ್ತವೆ. ನಾನು ಇದನ್ನು ಸಮರ್ಥಿಸುತ್ತೇನೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*Sri D. VENKATARAMAIAH (Robertsonpet).—Mr. Speaker, Sir, I was really surprised when the member from Belgaum asserted that the Mysore Officers were not acting properly. I wish the member had made certain positive and concrete suggestions or if there were any instances of that type, he could have brought to the notice of Government. Instead of doing that, to make such sweeping remarks and irresponsible and unfounded allegations of this type is not proper. My learned friend went on to the extent of saying that some of these things had been mentioned in Bombay papers. How is it that they have come to the notice of Bombay papers only and not to the notice of Mysore papers ? Such news is given to the papers either through the Press Trust of India or the Associated Press in which case those matters would certainly have been brought to the notice of other papers also if they were true. What would the man in the street think if the Mysore Legislature were to say that the Mysore officers are not doing their duty properly.

I feel, Sir, and I assert that the Mysore Officers are doing their duty with dignity and with restraint and absolutely no allegation can be made against them.

5-30 P.M.

Next, Sir, a point was made by some of the Members saying that a number of writ applications are being filed in the High Court against the Government. Have the Members any idea of the number of cases filed there ? Though thousands of petitions are being filed, hardly 10 or 15 or 40 cases are being allowed. The Hon'ble Members should make a note of that. Thousands of petitions might have been filed. But it is only a few petitions that are being allowed. I went through all the demands regarding payment of cost. You find that the payment of cost is Rs. 8 or Rs. 11 or Rs. 23 which is a small figure. Cases of that type have been mentioned. I really cannot understand why the Hon'ble Members should take a serious note of these things. When thousands of cases are being dealt with by the Government, such things do happen. There was a particular case of a school master. He died and his wife filed a case in the Munsiff Court that so much amount had to be paid. She approached the High Court and some cost had to be paid for that. That should be taken note of by the Members on the Opposite side. This is a thing which I really cannot understand. The amounts that have been paid, are really necessary and they have been really spent and spent properly also. As such, I feel every Member should give his support for this Demand.

[*Sri M. C. ANJANEYA REDDY (Chintamani) commenced his speech in Telugu] .—

A MEMBER.—Can a Member speak in Telugu ?

Mr. SPEAKER.—He may do so. If he want me to follow his speech, he has to speak in a language which I know. But he is at liberty to speak in any language.

[Mr. M. C. ANJANEYA REDDY spoke in Telugu] .—

Sri K. P. REVANNASIDDAPPA.—On a point of order, Sir. Whether 'Appaddalu' is parliamentary ?

Mr. SPEAKER.—I have already told the Members of this House that I do not know Telugu. From what I understand the word that was used when translated into English means 'lie'. I do not think it refers to any of the Members here. It is with regard to

what might have been said in the course of election campaign,; it is not used against any members on the floor of this House. I should distinctly make it clear every member that word ' lie' is unparliamentary and it should not be used against anybody during the course of the debate on the floor of this House.

Sri S. R. KANTHI.—Am I to understand your ruling to mean that when the word 'lie' is used, it can be used in the abstract and not in reference to any particular individual ?

Mr. SPEAKER.—With reference to any individual on the floor of this House generally.

Sri S. R. KANTHI.—Generally it is not unparliamentary.

Mr. SPEAKER.—I rule and say that the word 'lie' should not be used against any member.

[Sri M. C. ANJANEYA REDDY concluded his speech in Telugu].

*ಶ್ರೀ ಕೆ. ದೇವಯ್ಯ (ಮಲ್ಲೇಶ್ವರಂ).—ಮಾನ್ಯ ಸಭಾಧ್ಯಕ್ಷರೆ, ತಾವು ಈ ದಿನ ನಮ್ಮ ಮುಂದೆ ಸಪ್ಲಿಮೆಂಟರಿ ಬಡ್ಜೆಟ್ಟನ್ನು ಇಟ್ಟಿರುತ್ತೀರಿ. ನಾನು ಬೆಂಗಳೂರು ನಗರದ ಹದಿನಾಲ್ಕು ಲಕ್ಷ ಪ್ರಜೆಗಳ ಪರವಾಗಿ ಇಲ್ಲಿ ಮಾತನಾಡಬೇಕಾಗಿದೆ. ಮೈಸೂರುದೇಶದ ಪ್ರಜಾಸಂಖ್ಯೆ ಯಲ್ಲಿ ಸುಮಾರು ೧/೧೫ ಭಾಗ ಜನಸಂಖ್ಯೆಯುಳ್ಳ ಬೆಂಗಳೂರು ನಗರಕ್ಕೆ ಈ ಬಡ್ಜೆಟ್ಟಿನಲ್ಲಿ ಒಂದು ಕಾಸೂ ಕೂಡ ಕೊಟ್ಟ ಹಾಗಿಲ್ಲ. ಪ್ರಾಯಶಃ ಹಣ ಖರ್ಚಾಗಿರಬಹುದು.

> "The Supplementary Statement has to be presented to the Legislature (a) when the original Provision is found to be insufficient for expenditure, and (b) when expenditure has to be incurred on an item which falls under the category of 'New Serevice' " ಎಂಬುದಾಗಿ ತಿಳಿಸಿದೆ.

ಬೆಂಗಳೂರು ನಗರದ ಪ್ರಜೆಗಳು ಕಾರ್ಪೊರೇಷನ್ ಮೂಲಕ ಮತ್ತು ಪ್ರಜಾಪ್ರತಿನಿಧಿಗಳ ಮೂಲಕ ಸಾಮಾನ್ಯವಾಗಿ ನೀರಿಗಾಗಿ ತಮಗಾಗುತ್ತಿರುವ ತೊಂದರೆಯನ್ನು ಆಗಾಗ್ಗೆ ಸರ್ಕಾರದ ಗಮನಕ್ಕೆ ತರುತ್ತಿದ್ದಾರೆ. ನಾನು ಹನ್ನೆರಡು ವರ್ಷಗಳ ಕಾಲ ಕಾರ್ಪೊರೇಷನ್‌ನಲ್ಲಿದ್ದೆ. ಇವೊತ್ತಿನವರೆಗೆ ಬೆಂಗಳೂರು ನಗರದ ಪ್ರತಿಯೊಬ್ಬ ಪ್ರಜೆಗೆ ಮೂರು ಗ್ಯಾಲನ್‌ಗಳಷ್ಟು ನೀರನ್ನಾದರೂ ಕೊಡಲು ಶಕ್ತಿಯಿಲ್ಲದಂತಾಗಿದೆ. ಪ್ರಾಯಶಃ ಸರ್ಕಾರದ ಒಂದು ಅನಾದರಣೆಯಿಂದ ಹೀಗಾಗಿದೆಯೆಂದು ಹೇಳಿದರೆ ತಪ್ಪಾಗಲಾರದು. ಸುಮಾರು ಎರಡು ಲಕ್ಷ ಪ್ರಜೆಗಳಿದ್ದಾಗ ಏನೊಂದು ನೀರಿನ ವ್ಯವಸ್ಥೆ ಮಾಡಿತ್ತೋ ಅದೇ ವ್ಯವಸ್ಥೆ ಈ ದಿವಸ ೧೪ ಲಕ್ಷ ಪ್ರಜೆಗಳಿರುವಾಗಲೂ ಮುಂದುವರಿಯುತ್ತಿದೆಯೆಂಬುದು ಎಲ್ಲರಿಗೂ ಸಹ ತಿಳಿದ ವಿಚಾರವೇ ಆಗಿದೆ. ಈ ದಿನ ನಮ್ಮ ಬೆಂಗಳೂರಿನಲ್ಲಿ ಜನರು ನೀರಿಗಾಗಿ ಸಾರ್ವಜನಿಕ ಕೊಳಾಯಿಗಳ ಹತ್ತಿರ ಬಿಂದಿಗೆಗಳನ್ನು ಹಿಡಿದುಕೊಂಡು ನಿಂತು ಜಗಳವಾಡಿ ತಲೆ ಒಡೆದುಕೊಂಡು ಕೆಲವರು ಮರಣಕ್ಕೆ ತುತ್ತಾಗಿದ್ದಾರೆಂಬುದನ್ನು ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಈಗಿನ ಪರಿಸ್ಥಿತಿಯಲ್ಲಿ ಇಷ್ಟು ದೊಡ್ಡ ಸಮಸ್ಯೆಯನ್ನು ಪರಿಹಾರ ಮಾಡಲು ಗಮನ ಕೊಡದಿರುವುದು ಬಹಳ ಶೋಚನೀಯ, ಅದರಲ್ಲೂ ನಮ್ಮ ಹಿಂದಿನ ಸರ್ಕಾರ ಈ ಕಡೆ ಗಮನ ಕೊಡಬೇಕಾಗಿತ್ತು, ಕೊಡದಿರುವುದು ಮಹಾ ಅಪರಾಧ, ಅದು ಬೆಂಗಳೂರಿನವರಿಗೆ ಮಾಡಿದ ಅಪರಾಧ ಎಂದು ಹೇಳುತ್ತಿದ್ದೇನೆ.

ಈಗಲಾದರೂ ತಾವು ನ್ಯೂ-ಸರ್ವಿಸ್ ಎಂದು ಇದನ್ನು ಭಾವಿಸಿ ಕನಿಷ್ಠ ಪಕ್ಷ ಒಂದು ಲಕ್ಷ ರೂಪಾಯಿಗಳ Token Grant ಆದರೂ ಕೊಟ್ಟು ಈ ಕಷ್ಟವನ್ನು ಸುಧಾರಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

Mr. SPEAKER.—No supplementary grant can be added hereafter. So don't make any plea to have something included.

ಶ್ರೀ ಕೆ. ದೇವಯ್ಯ.—ನಮ್ಮ ದೇಶದಲ್ಲಿ ಕಾವೇರಿ ನದಿಗೆ ಒಂದು ಪವಿತ್ರವಾದ ಸ್ಥಾನಮಾನವಿದೆ. ಹಾಗಿದ್ದರೂ, ಈ ಬಡ್ಜೆಟ್ಟಿನಲ್ಲಿ ಶರಾವತಿ, ನೇತ್ರಾವತಿ ಭದ್ರಾ—ಈ ಎಲ್ಲ ಹೆಸರುಗಳನ್ನು ಇಲ್ಲಿ ನಮೂದಿಸಿದ್ದೀರಿ. ಅವಕ್ಕೆ ಪ್ರಾಧಾನ್ಯತೆ ಕೊಟ್ಟಿದ್ದೀರಿ. ಕಾವೇರಿ ನದಿಯ ವಿಷಯದಲ್ಲಿ ಮಾತ್ರ ಏನನ್ನೂ ಹೇಳಿಲ್ಲ. ಈ ನದಿಯ ನೀರನ್ನು ಉಪಯೋಗಿಸಿಕೊಂಡು ಬೆಂಗಳೂರಿನ ಪ್ರಜಾಕೋಟಿಗೆ ಸಹಾಯ ಮಾಡಲು ಯಾವುದಾದರೊಂದು ಯೋಜನೆಯನ್ನು ಕೈಕೊಳ್ಳುವ ಬಗ್ಗೆ ಒಂದು ಟೋಕನ್ ಗ್ರಾಂಟ್ ಇಲ್ಲಿ ಇಡುವುದು ಅವಶ್ಯಕವಾಗಿತ್ತು. ಇದು ಬಹಳ ಮುಖ್ಯವಾದ ವಿಚಾರ. ಎಷ್ಟು ಮಾತ್ರವೂ ಅಲ್ಲಗಳೆಯತಕ್ಕುದಲ್ಲ. ಈಗತಾನೆ ಮೂರು ದಿನಗಳ ಹಿಂದೆ ನಮ್ಮ ಕಾರ್ಪೊರೇಷನ್ ಮೀಟಿಂಗ್‌ನಲ್ಲಿ ಈ ಪ್ರಶ್ನೆ ಪ್ರಾಮುಖ್ಯವಾಗಿ ಬಂದು, ಕೇಂದ್ರದಿಂದ ಕಾವೇರಿ ಸ್ಕೀಮಿಗೆ ಹಣ ಒದಗಿಸಿಕೊಡುವ ಬಗ್ಗೆ ತಮ್ಮಲ್ಲಿಗೆ ಈ ವಾರದಲ್ಲೇ ಡೆಪ್ಯುಟೇಷನ್ ಬರಬೇಕೆಂದಿದ್ದಾರೆ. ಈ ಮುಖ್ಯವಾದ ಪ್ರಶ್ನೆಯ ಕಡೆ ಸರ್ಕಾರದವರು ತೀವ್ರ ಗಮನ ಕೊಡುತ್ತಾರೆಂದು ನಂಬಿದ್ದೇನೆ.

ಎರಡನೆಯದಾಗಿ, ವಿದ್ಯುಚ್ಛಕ್ತಿಯ ವಿಚಾರ. ಈ ಬಗ್ಗೆಯೂ ಈ ಸಪ್ಲಿಮೆಂಟರಿ ಬಡ್ಜೆಟ್ಟಿನಲ್ಲಿ ಹೆಚ್ಚಿಗೆ ಹಣ ಒದಗಿಸಿಲ್ಲ. ನಮ್ಮ ದೇಶದ ಅಭಿವೃದ್ಧಿಗೆ ಕೈಗಾರಿಕೆಗಳನ್ನು ಪ್ರೋತ್ಸಾಹಿಸಬೇಕಾದ್ದು ಅತ್ಯವಶ್ಯಕ. ಅಂಥಾದ್ದರಲ್ಲಿ ತಮ್ಮಲ್ಲಿ ಹೆಚ್ಚಿಗೆ ವಿದ್ಯುಚ್ಛಕ್ತಿಯಿಲ್ಲವೆಂದು ಹೇಳಿ, ಇಲ್ಲಿನ ಕೈಗಾರಿಕೆಗಳೆಲ್ಲಾ ರಾತ್ರಿಯ ಹೊತ್ತು ಮಾತ್ರ ನಡೆಯಬೇಕೆಂದು ಹೇಳಿದ್ದೀರಿ. ಇದು ನಮ್ಮ ಕೈಗಾರಿಕೆಗಳ ಅಭಿವೃದ್ಧಿಗೆ ಕುಠಾರಪ್ರಾಯವಾಗಿದೆಯೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮೂರನೆಯದಾಗಿ, ನಮ್ಮ ಈ ಬೆಂಗಳೂರು ಸಿಟಿ ಕಾರ್ಪೊರೇಷನ್ನಿಗೆ ಅಂಡರ್ ಗ್ರೌಂಡ್ ಸ್ಯೂಯೇಜ್ ಮುಂತಾದುವುಗಳಿಗೆ ಹಣವನ್ನೊದಗಿಸುವುದು ಸರಕಾರದವರು ಈ ಬಗ್ಗೆ ಗಮನಕೊಟ್ಟು ಕೇಂದ್ರದಿಂದ ಸಹಾಯವನ್ನು ದೊರಕಿಸಿ ಕೊಡುತ್ತಾರೆಂದು ನಂಬಿದ್ದೇನೆ.

(ಶ್ರೀ ಕೆ. ದೇವಯ್ಯ)

ಒಟ್ಟಿನಲ್ಲಿ ನಮ್ಮ ದೇಶದಲ್ಲಿ ಸೋಮಾರಿತನ ಜಾಸ್ತಿಯಿದೆ. ಇಂದು ನಮ್ಮ ಬೆಂಗಳೂರು ಸಿಟಿಯಲ್ಲಿ ಅಲ್ಪಸ್ವಲ್ಪ ನೀರು ಕುಡಿಯುತ್ತಿದ್ದೇವೆಂದರೆ, ಅದು ಮೂರು ವರ್ಷಗಳ ಹಿಂದೆ, ಯಾವ ಜರ್ಮನಿಯು ಯುದ್ಧದ ಬೇಗೆಗೆ ಸಿಕ್ಕಿ ನೆಲಸಮವಾಗಿತ್ತೋ, ಆ ಜರ್ಮನರು ಹಗಲಿರುಳು ಶ್ರಮಿಸಿ, ದೇಶಪ್ರೇಮದಿಂದ ಹರಕಲು ಬಟ್ಟೆಗಳಲ್ಲಿದ್ದರೂ ದುಡಿದು ತಯಾರಿಸಿದ ಯಂತ್ರವನ್ನು ನಮಗೆ ಕಳುಹಿಸಿ ಕೊಟ್ಟಿದ್ದರಿಂದ ಆಯಿತು. ಅವರ ಕೃಪೆಯಿಂದಾಗಿ ನಾವು ಇಂದು ಇಷ್ಟಾದರೂ ಸ್ವಚ್ಛವಾದ ನೀರನ್ನು ಕುಡಿಯುವ ಏರ್ಪಾಡಾಯಿತು. ಅಷ್ಟಾದರೂ ಇಂದಿಗೂ ನಾವು ಈ ಬಗ್ಗೆ ಯಾವುದೂ ವಿಶೇಷ ಕಾರ್ಯಕ್ರಮವನ್ನು ಕೈಕೊಂಡಿಲ್ಲ. ನಮ್ಮ ಆಡಳಿತದಲ್ಲಿ ಏನೋ ಲೋಪದೋಷವಿದೆ. ಇಂದಿನ ದಿವಸ ಏಕಾಏಕಿ ೨೮ ಕೋಟಿ ರೂಪಾಯಿಗಳ ಒಂದು ಸಪ್ಲಿಮೆಂಟರಿ ಬಡ್ಜೆಟ್ಟು ಬಂದಿರುವುದಕ್ಕೂ ಇದೇ ಕಾರಣ. ನಾನು ಯಾವ ಪಾರ್ಟಿಯ ಪರವಾಗಿಯೂ ಮಾತನಾಡುತ್ತಿಲ್ಲ. ಕಾಂಗ್ರೆಸ್ ಪಾರ್ಟಿಯೇ ಅಧಿಕಾರದಲ್ಲಿದ್ದಿರಬಹುದು; ಬೇರೆ ಪಾರ್ಟಿಯೇ ಇದ್ದಿರಬಹುದು. ಯಾರೇ ಆಗಲೀ, ಅಂದು ಮಾಡಿದ ತೀರ್ಮಾನಗಳನ್ನು ಅಂದೇ ನಡೆಸಿಕೊಂಡು ಬಾರದೇ ಬಿಟ್ಟಿದ್ದರಿಂದ, ಇಂದು ಅವುಗಳನ್ನು ಕಾರ್ಯಗತ ಮಾಡಲು ಹೆಚ್ಚು ಖರ್ಚುಮಾಡಬೇಕಾಗಿ ಬಂದು, ಈ ರೀತಿ ಉಬ್ಬಿದ ಬಡ್ಜೆಟ್ಟು ಅಂಕಿ ಅಂಶಗಳು ನಮ್ಮ ಮುಂದೆ ಬರುತ್ತಿವೆ. ಇಂದು ಮಾಡಬೇಕಾದ ಕೆಲಸವನ್ನು ಇಂದೇ ಮಾಡದೆ ಹೋದರೆ, ಒಂದಕ್ಕೆ ನಾಲ್ಕರಷ್ಟು ನಾಳೆ ತೆರಬೇಕಾಗಿ ಬರುತ್ತದೆ. ಒಂದು ಉದಾಹರಣೆಯನ್ನು ಹೇಳುತ್ತೇನೆ. ಇದೇ ಬೆಂಗಳೂರಿನಲ್ಲಿ ಶೇಷಾದ್ರಿಪುರದ ರೈಲ್ವೆ ಕ್ರಾಸಿಂಗ್ ಬಳಿ ಒಂದು, "Over-Bridge" ಹಾಕಬೇಕೆಂದು ಈಗ್ಗೆ ಮೂರು ವರ್ಷಗಳ ಹಿಂದೆ ನಿರ್ಣಯವಾಗಿ ಮೂರುವರೆ ಲಕ್ಷ ರೂಪಾಯಿಗಳಿಗೆ ಅಂದಾಜಾಗಿತ್ತು. ಅದನ್ನು ಕೈಗೊಳ್ಳದಿದ್ದುದರಿಂದ ಇಂದು ಹನ್ನೊಂದುವರೆ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕೈಕೊಳ್ಳಬೇಕಾಗಿ ಬಂದಿದೆ. ಹೀಗೆಯೇ ಅನೇಕ ವಿಷಯಗಳನ್ನು ಆಗಿಂದಾಗ್ಗೆ ಬಡ್ಜೆಟ್ಟಿನಲ್ಲಿ ಸೇರಿಸಿಕೊಂಡು ಕೆಲಸ ಮಾಡಿದರೆ ಎಷ್ಟೋ ನಮಗೆ ಉಳಿತಾಯವಾಗುತ್ತದೆ. ಇಷ್ಟು ಹೇಳಿ, ಈಗ ಏನು ಈ ಬಡ್ಜೆಟ್ಟಿನಲ್ಲಿ ಕೇಳಿದ್ದೀರಿ ಅದನ್ನು ಅತಿ ಜರೂರಾಗಿ ಕೆಲಸ ನಡೆಸಬೇಕೆಂದು ಹೇಳುತ್ತೇನೆ.

ಕೊನೆಯದಾಗಿ ಇನ್ನು ಒಂದೇ ಒಂದು ವಿಚಾರ. ಕ್ಷಾಮಕ್ಕೆ ಸಂಬಂಧಪಟ್ಟದ್ದು. ನೆರೆ ಬಂದದ್ದು ಯಾವಾಗ? ಅಂಥಾದ್ದನ್ನು ಈಗ ಮಾರ್ಚಿ ೨೩ ರಲ್ಲಿ ಚರ್ಚೆ ಮಾಡಿ ಹಣ ಒದಗಿಸುತ್ತಿದ್ದೇವೆ. ಪ್ರಾಯಶಃ ಈ ದುಡ್ಡು ಅವರಿಗೆ ಸಕಾಲದಲ್ಲಿ ಮುಟ್ಟುತ್ತದೆಯೋ ಇಲ್ಲವೋ ಗೊತ್ತಿಲ್ಲ. ಇನ್ನಾದರೂ ತಡಮಾಡದೆ ಬೇಗ ಸಹಾಯ ಒದಗಿಸಬೇಕೆಂದು ಹೇಳುತ್ತೇನೆ.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ಮಾನ್ಯ ಸಭಾಧ್ಯಕ್ಷರೇ, ಈಗ ಬಹಳ ಹೊತ್ತಿನಿಂದ ಈ ಸಪ್ಲಿಮೆಂಟರಿ ಬಡ್ಜೆಟ್ಟಿನ ಮೇಲೆ ದೀರ್ಘವಾದ ಚರ್ಚೆ ಇತ್ತ ಕಡೆ ವಿರೋಧ ಪಕ್ಷದವರಿಂದಲೂ, ಅತ್ತ ಕಡೆ ಕಾಂಗ್ರೆಸ್ ಪಕ್ಷದವರಿಂದಲೂ ನಡೆಯುತ್ತಿದೆ. ಮೊಟ್ಟಮೊದಲನೆಯದಾಗಿ, ದೇಶದಲ್ಲಿ ಸರ್ಕಾರದವರು ಬೇಕಾದಷ್ಟು ಅಭಿವೃದ್ಧಿ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿರತಕ್ಕದ್ದನ್ನು ನಮ್ಮ ಮಾನ್ಯ ವಿರೋಧ ಪಕ್ಷದವರು ಮರೆಯಬಾರದು. ಅವರು ಮಾಡಿರತಕ್ಕ ಅಭಿವೃದ್ಧಿ ಕೆಲಸಗಳನ್ನು ಒಪ್ಪಿಕೊಂಡು, ಮಾಡದಿರುವ ಕೆಲಸಗಳನ್ನು ತಿಳಿಸತಕ್ಕದ್ದು ಧರ್ಮವೂ ನ್ಯಾಯವೂ ಆಗಿದೆ. ಅದನ್ನು ಬಿಟ್ಟು ಸುಮ್ಮನೆ ಈ ಬಡ್ಜೆಟ್ಟು 28 ಕೋಟಿ ರೂಪಾಯಿಗಳಿಗೆ ಏರಿದೆ, ಈ ಭಾಗದಲ್ಲಿ ಜಾಸ್ತಿಯಾಯಿತು ಆ ಭಾಗದಲ್ಲಿ ಜಾಸ್ತಿಯಾಯಿತು ಎಂದು ಬರೀ ಟೀಕೆ ಮಾಡುವ ಉದ್ದೇಶದಿಂದಲೇ ಮಾತನಾಡುವುದು ಸರಿಯಲ್ಲ. ಯಾವುದೊಂದು ಕೆಲಸ ಮಾಡಬೇಕಾದರೂ ನಾವು ಒಂದು ಅಂದಾಜನ್ನು ತಯಾರು ಮಾಡುತ್ತೇವೆ, ಆದರೆ ಕೆಲಸ ಮಾಡುವ ಸಂದರ್ಭದಲ್ಲಿ ಅದು ಅಂದಾಜಿಗೆ ಹತ್ತು ಸಾವಿರ ರೂಪಾಯಿ ಹೆಚ್ಚಾದರೂ ಆಗಬಹುದು, ಇಪ್ಪತ್ತು ಸಾವಿರ ರೂಪಾಯಿ ಕಡಮೆಯಾದರೂ ಆಗಬಹುದು. ಹೀಗಿರುವಾಗ, ಒಟ್ಟಿನಲ್ಲಿ ದೇಶಾಭಿವೃದ್ಧಿಗೆ ಒಂದು ಕೆಲಸವಾಗಬೇಕೆಂದಿದ್ದರೆ ಅದಕ್ಕೆ ಎಷ್ಟೇ ಆಗಲಿ ಆ ಕೆಲಸವನ್ನು ಸರ್ಕಾರ ಮಾಡಲೇಬೇಕು. ಈ ಅಂಶವನ್ನು ಮಾನ್ಯ ಸದಸ್ಯರು ಜ್ಞಾಪಕದಲ್ಲಿಟ್ಟುಕೊಂಡು ತಮ್ಮ ಟೀಕೆಗಳನ್ನು ಮುಂದುವರಿಸಬೇಕು. ಈಗ ಎಷ್ಟೋ ಅಣೆಕಟ್ಟುಗಳಾಗಿವೆ; ಎಷ್ಟೋ ಟಾರು ರಸ್ತೆಗಳಾಗಿವೆ. ಹಳ್ಳಿಗಳ ಕಡೆ ಹಿಂದೆ ಒಂದು ರಸ್ತೆಯೂ ಇರಲಿಲ್ಲ; ಇಂದು ಬೇಕಾದಷ್ಟು ಹಣವನ್ನು ಖರ್ಚು ಮಾಡಿ ಈ ಕೆಲಸಗಳನ್ನು ಮುಂದುವರಿಸೋಣವೆಂದು ಹಣ ಕೇಳಿದರೆ ಅದಕ್ಕೆ ಖರ್ಚುಮಾಡಬಾರದೆಂದು ಹೇಳುವುದು ಸರಿಯಲ್ಲ. ಈ ಹೊತ್ತು ನಮ್ಮ ಜನರಲ್ಲಿ 80 ಭಾಗ ಜನರು ಹಳ್ಳಿಯಲ್ಲಿ ವಾಸ ಮಾಡುವವರಾಗಿದ್ದಾರೆ. ಕೇವಲ ಇಪ್ಪತ್ತು ಮಂದಿ ಪಟ್ಟಣಗಳಲ್ಲಿ ವ್ಯಾಪಾರ ಮುಂತಾದ ವೃತ್ತಿಗಳನ್ನು ಅವಲಂಬಿಸಿಕೊಂಡಿದ್ದಾರೆ. ಹೀಗಿರುವಾಗ ಎಷ್ಟೋ ಕೋಟಿ ರೂಪಾಯಿಗಳು ಬೇಕಾದರೂ ಖರ್ಚುಮಾಡಿ ಆದಷ್ಟು ಜಾಗ್ರತೆ ಹಳ್ಳಿಯ ಜನರಿಗೆ ಸೌಕರ್ಯಗಳನ್ನುಂಟು ಮಾಡುವುದು ನ್ಯಾಯವಲ್ಲವೇ? ಇದನ್ನು ನೋಡದೆ, ಟೀಕೆ ಮಾಡಬೇಕೆಂದೇ ಮಾತನಾಡುವುದೂ, ಬಯ್ಯುವುದೂ ಸರಿಯಲ್ಲ.

ಅಲ್ಲದೆ, ಒಂದು ವೇಳೆ ಹಾಗೆ ನೀವು ಟೀಕೆ ಮಾಡಿದರೂ ಸರ್ಕಾರಕ್ಕೇನೂ ಕೆಟ್ಟದ್ದಿಲ್ಲ. ಒಂದು ವಿಧದಲ್ಲಿ ಒಳ್ಳೆಯದೇ. ಹಿಂದೆ ಮಾರಿ ಜಾತ್ರೆ ಎಂದು ಮಾಡುತ್ತಿದ್ದರು. ಆ ಸಂದರ್ಭದಲ್ಲಿ ಪ್ರತ್ಯೇಕವಾಗಿರತಕ್ಕ ನನ್ನ ಕೆಲವು ಸ್ನೇಹಿತರು ಅಮ್ಮನಿಗೆ ನಾನಾ ತರಹವಾಗಿ ಬೈದರೆ ಅಮ್ಮನ ರಥ ತಾನಾಗಿಯೇ ಮುಂದೆ ಹೋಗುತ್ತಿತ್ತು. ಅದೇ ರೀತಿಯಾಗಿ ಈ ಸಭೆಯ ವಿರೋಧ ಪಕ್ಷದವರು ಬೇರೆ ಒಳ್ಳೆಯ ಉದ್ದೇಶದಿಂದ ಆಡಳಿತ ಪಕ್ಷದವರನ್ನು ಬೈದಿದ್ದೇ ಆದರೆ ಈಗಿನ ಕಾಂಗ್ರೆಸ್ ಸರ್ಕಾರ ಇನ್ನೂ ಚೆನ್ನಾಗಿ ಕೆಲಸ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತದೆ. ಆ ರಥ ಯಾವ ರೀತಿ ಮುಂದಕ್ಕೆ ಹೋಗುತ್ತಿತ್ತೋ ಆ ರೀತಿ ಕಾಂಗ್ರೆಸ್ ಸರ್ಕಾರವೂ ಹೋಗುತ್ತದೆ ಎಂದು ತಿಳಿದಿರಬಹುದು. ಈ ದೆಸೆಯಿಂದ ವಿರೋಧ ಪಕ್ಷದವರಿಗೆ ಬರೀ ಟೀಕೆ ಮಾಡತಕ್ಕ ಮನಸ್ಸು ಅವರ ದೃಷ್ಟಿಯಲ್ಲಿ ಬಾರದೆ; ದೇಶದ ಕಲ್ಯಾಣಕ್ಕಾಗಿ ನಾವು ಮತ್ತು ಅವರು ಅಣ್ಣ ತಮ್ಮಂದಿರಂತೆ ದುಡಿಯೋಣ ಎನ್ನತಕ್ಕ ಸದ್ಭಾವನೆ ಬರಲಿ ಎಂದು ನಾನು ಭಗವಂತನಲ್ಲಿ ಪ್ರಾರ್ಥನೆ ಮಾಡಿಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ.

ಇನ್ನೊಂದು ವಿಷಯ. ನಾನು ನನ್ನ ತಾಲ್ಲೂಕು ಭದ್ರಾವತಿಯ ವಿಷಯವಾಗಿ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಈಗ ಐದು ವರ್ಷಗಳ ಕೆಳಗೆ ಭದ್ರಾವತಿಯಲ್ಲಿ ಒಂದು ವಿಮಾನ ನಿಲ್ದಾಣವನ್ನು ಮಾಡಬೇಕೆಂದೂ ಅದಕ್ಕಾಗಿ ಹಣವನ್ನೂ ಸಹ ಬಡ್ಜೆಟ್ಟಿನಲ್ಲಿ

ಒದಗಿಸಿದ್ದರು. ವಿಮಾನ ನಿಲ್ದಾಣದ ಸರ್ವೆ ಕಾರ್ಯವೂ ನಡೆದು ಅದಕ್ಕಾಗಿ ಹಣವನ್ನು ಸಹ ಖರ್ಚುಮಾಡಿ ಅದನ್ನು ಅಲ್ಲಿಗೇ ನಿಲ್ಲಿಸಿದ್ದಾರೆ. ಅದೂ ಅಲ್ಲದೆ ಭದ್ರಾವತಿಯಲ್ಲಿ ಒಂದು ಡೈರಿ ಫಾರಂ ಸೊಸೈಟಿ ರಚನೆ ಮಾಡಬೇಕೆಂದು 6 ಲಕ್ಷ ರೂಪಾಯಿಗಳು ಹಿಂದೆ ಬಡ್ಜೆಟ್ಟಿನಲ್ಲಿ ಮಂಜೂರಾಗಿದ್ದರೂ ಇದುವರೆಗೂ ಆ ಕಾರ್ಯಕ್ರಮವನ್ನು ಸರ್ಕಾರದವರು ತೆಗೆದುಕೊಂಡಿಲ್ಲ. ಈಗ ಈ ಬಡ್ಜೆಟ್ಟಿನಲ್ಲಿ ಇವೆರಡೂ ಕಾರ್ಯಗಳು ಕೈಬಿಟ್ಟು ಹೋಗಿವೆಯೋ ಏನೋ ಗೊತ್ತಿಲ್ಲ. ಆದ್ದರಿಂದ ಈಗಲಾದರೂ ದಯವಿಟ್ಟು ಈ ಎರಡು ಕಾರ್ಯಗಳನ್ನು ಆದಷ್ಟು ಜಾಗ್ರತೆಯಾಗಿ ಮಾಡಿಕೊಡಬೇಕೆಂದು ಸರ್ಕಾರದವರನ್ನು ನಾನು ಒತ್ತಾಯ ಮಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ (ತಿಪಟೂರು).—ಅಧ್ಯಕ್ಷರೇ, ಈಗ ನಮ್ಮ ಮಾನ್ಯ ಕಾಂಗ್ರೆಸ್ ಪಕ್ಷದ ಕೆಲವು ಸದಸ್ಯರು ಚುನಾವಣೆಯ ಪ್ರಚಾರವನ್ನೇ ಇನ್ನೂ ತಲೆಯಲ್ಲಿಟ್ಟು ಕೊಂಡು ತಮ್ಮ ಕಡೆಗೆ ಓಟು ಮಾಡಿದವರಿಗೆ ವಂದನೆಗಳನ್ನು ಅರ್ಪಿಸುವವರಾಗಿದ್ದಾರೆ. ಅದನ್ನು ಬಿಟ್ಟು ಈ ಸಪ್ಲಿಮೆಂಟರಿ ಡಿಮ್ಯಾಂಡ್‌ಗಳ ಮೇಲೆ ಮಾತನಾಡಿ ಮಹತ್ತರವಾದ ವಿಷಯಗಳ ಕಡೆಗೆ ಗಮನ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಕೆಲವು ಕಾಂಗ್ರೆಸ್ ಪಕ್ಷದ ಸದಸ್ಯರು ಸರ್ಕಾರ ಇದುವರೆಗೂ ಮಾಡಿರತಕ್ಕ ಕಾರ್ಯ ಸಾಧನೆಯನ್ನು ಒಂದು ವಿಧವಾಗಿ ಹೇಳಿದರು. ಅದು ಯಾವ ಡಿಮ್ಯಾಂಡ್, ಎಷ್ಟನೇ ಪುಟ, ಯಾವ ಪುಸ್ತಕ ಇದಾವುದನ್ನೂ ಸಹ ಹೇಳಲಿಲ್ಲ. ಅವರೆಲ್ಲರೂ ಇನ್ನೂ ಚುನಾವಣೆ ಗಮನದಲ್ಲಿಯೇ ಇದ್ದಾರೋ ಏನೋ. ಅಸೆಂಬ್ಲಿಗೇ ಬರಲಿಲ್ಲವೋ ಏನೋ ಎಂದು ನನಗನ್ನಿಸುತ್ತದೆ. ಏಕೆಂದರೆ ವಿರೋಧ ಪಕ್ಷದವರು ಯಾರೂ ಸರ್ಕಾರದ ದುಡ್ಡನ್ನು ಖರ್ಚು ಮಾಡಬೇಡಿ, ಯಾವ ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಡಿ ಎಂದು ಹೇಳಲಿಲ್ಲ. ಸರ್ಕಾರದ ಹಣ ಜನಗಳು ಕಂದಾಯ ರೂಪವಾಗಿ ಕೊಟ್ಟ ಹಣ ನ್ಯಾಯವಾಗಿ ಖರ್ಚು ಮಾಡಬೇಕೆಂದು ವಿರೋಧ ಪಕ್ಷದವರು ಟೀಕೆ ಮಾಡಿದ್ದಾರೆಯೇ ಹೊರತು ಮತ್ತೇನೂ ಇಲ್ಲ. ಆದರೆ ಸರ್ಕಾರದ ಎಲ್ಲಾ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ದುಡ್ಡು ಖರ್ಚು ಮಾಡಬಾರದು ಎಂದು ನಮ್ಮ ಕಡೆ ಯಾರೂ ಹೇಳಲಿಲ್ಲ. ಇಂತಹ ಸಂದರ್ಭದಲ್ಲಿ ಕೆಲವು ನನ್ನ ಸ್ನೇಹಿತರು ಮಂತ್ರಿಗಳು ಉತ್ತರ ಹೇಳುವ ದಾಟಿಯಲ್ಲಿ ಹೇಳಿದರು. ಅದನ್ನು ನೋಡಿ ನನಗೆ ಬಹಳ ಆಶ್ಚರ್ಯವಾಯಿತು. ಇವೊತ್ತು ಈ ಸಪ್ಲಿಮೆಂಟರಿ ಗ್ರಾಂಟಿನಲ್ಲಿ ಯಾವಯಾವ ಲೋಪ ದೋಷಗಳಿವೆ, ಸರ್ಕಾರದವರು ಯಾವಯಾವುದನ್ನು ತಿದ್ದಿಕೊಳ್ಳಬೇಕು ಎಂಬ ಬಗ್ಗೆ ಸಲಹೆಗಳನ್ನು ಕೊಡಲು ಮಹನೀಯರು ಯಾರೂ ಈ ಸಪ್ಲಿಮೆಂಟರಿ ಎಸ್ಟಿಮೇಟ್ ಪುಸ್ತಕವನ್ನು ಚೆನ್ನಾಗಿ ಓದದೆ ಇರುವುದಕ್ಕಾಗಿ ನಾನು ವಿಷಾದವನ್ನು ವ್ಯಕ್ತಪಡಿಸಬೇಕಾಗಿದೆ. ಇದರ ಮೇಲೆ ವಿರೋಧಪಕ್ಷದ ಸದಸ್ಯರು ಹೇಳಿದ ಹಾಗೆ ಮಹಾ ಚುನಾವಣೆಗಳನಂತರ ಈಗ 3ನೆಯ ಸಾರಿ ನಾವು ಸಂಧಿಸುತ್ತಿದ್ದೇವೆ. ಮುಂದೆ ಚುನಾವಣೆ ಬರುತ್ತದೆ. ಅದಕ್ಕೋಸ್ಕರ ಇಷ್ಟು ಹಣ ಖರ್ಚು ಮಾಡಬೇಕೆಂದು ತಿಳಿದು ಕೇಂದ್ರ ಸರ್ಕಾರದಿಂದಲೂ ಮತ್ತು ನಮ್ಮ ಸರ್ಕಾರದಿಂದಲೂ ಸಾಕಷ್ಟು ಹಣವನ್ನು ಎತ್ತಬೇಕೆಂದು ಈ ಸರ್ಕಾರ ಮೊದಲೇ ಮನಗಾಣಲಿಲ್ಲವೇ? ಇನ್ನೂ ಅಭಿವೃದ್ಧಿ ಕಾರ್ಯಗಳು ದೇಶದಲ್ಲಿ ಆಗಬೇಕು. ಅದಕ್ಕಾಗಿ ಶೇಕಡ 50 ರಷ್ಟು ಹಣ ಹೆಚ್ಚುವರಿಬೇಕಾಗಿರುವಾಗ ನೀವು ಯಾವ ತರಹ ಪ್ಲಾನಿಂಗ್ ಹಾಕಿದ್ದೀರಿ? ನಿಮ್ಮ ಪ್ಲಾನಿಂಗ್ ಎಷ್ಟರ ಮಟ್ಟಿಗೆ ಸಕ್ಸೆಸ್ ಆಗಿದೆ ಎನ್ನುವುದನ್ನು ತಾವು ಯೋಚನೆ ಮಾಡಬೇಡವೇ ಎಂದು ನಾನು ಕೇಳುತ್ತೇನೆ. ವಿರೋಧ ಪಕ್ಷದವರು ಈಗಾಗಲೇ ರಸ್ತೆಯ ವಿಷಯ, ಇನ್ನೂ ಅನೇಕ ಕಾಮಗಾರಿಗಳ ವಿಷಯವನ್ನು ಹೇಳಿದರು. ಕೆಲವು ಮಾನ್ಯ ಸದಸ್ಯರು ಸಾಮಾನ್ಯವಾಗಿ ಒಂದು ಎಸ್ಟಿಮೇಟನ್ನು ಮಾಡುವಾಗ ಕನಿಷ್ಟಪಕ್ಷ 10 ಸಾವಿರ ಅಂದಾಜು ಮಾಡಿದರೆ ಅದು ಎಷ್ಟೋ ಸಾರಿ 50 ಸಾವಿರಕ್ಕೆ ಹೋಗುತ್ತದೆ ಎಂಬುದಾಗಿ ಹೇಳಿದರು. ಅಂಥಾದ್ದು ಸರ್ಕಾರದಲ್ಲಿ ಆಗಬಾರದು. ಅದು ಆಗದೇ ಇರುವ ಹಾಗೆ ಈ ಕಂಟ್ರಾಕ್ಟ್ ಕೊಡುವ ಸಂದರ್ಭದಲ್ಲಿ ಯಾವ ರೀತಿಯೋ ಸರ್ಕಾರದವರು ತಮಗೆ ಬೇಕಾದವರಿಗೆ ಪರ್ಸಂಟೇಜ್ ಜಾಸ್ತಿಮಾಡಿ ಕಂಟ್ರಾಕ್ಟ್ ಕೊಡುವ ಉದ್ದೇಶದಿಂದ ಇರತಕ್ಕ ಎಸ್ಟಿಮೇಟನ್ನು ರಿವೈಜ್ ಮಾಡಿ ಜಾಸ್ತಿ ಮಾಡುತ್ತಾರೆ. ಇದರಿಂದ ಸರ್ಕಾರದ ಹಣ ವಿಶೇಷವಾಗಿ ದುರುಪಯೋಗವಾಗುತ್ತಿದೆ. ಅದರಿಂದಲೇ ಸಪ್ಲಿಮೆಂಟರಿ ಬಡ್ಜೆಟ್ಟಿನಲ್ಲಿ ಹಣ ಹೆಚ್ಚಿಗೆ ಕೇಳಬೇಕಾದ ಪ್ರಸಂಗ ಬರುತ್ತಿದೆ. ಅಂಥಾದ್ದು ಖಂಡಿತವಾಗಿ ಆಗಬಾರದು. ಒಟ್ಟಿನಲ್ಲಿ ಸರ್ಕಾರದವರು ಅಭಿವೃದ್ಧಿ ಕಾರ್ಯಗಳನ್ನು ಮಾಡಬಾರದು ಮತ್ತು ಆದಕ್ಕಾಗಿ ಹಣವನ್ನು ವ್ಯಯ ಮಾಡಬಾರದು ಎಂಬುದಾಗಿ ವಿರೋಧ ಪಕ್ಷದ ಸದಸ್ಯರು ಯಾರೂ ಹೇಳಲಿಲ್ಲ. ಇದರ ಮೇಲೆ ಸಾಲದ್ದಕ್ಕೆ ಈ ಮಹಾರಾಷ್ಟ್ರ ಏಕೀಕರಣ ಸಮಿತಿ ಸದಸ್ಯರು ಇದುವರೆಗೂ ಮರಾಠಿಯಲ್ಲಿಯೇ ಮಾತನಾಡುತ್ತಿದ್ದರು. ಇತ್ತೀಚೆಗೆ ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಬೇರೆ ಬೇರೆ ಭಾಷೆಗಳಲ್ಲಿ ಮಾತನಾಡುತ್ತಿದ್ದಾರೆ. ನಮ್ಮ ಪಕ್ಷಕ್ಕೆ ಇದ್ದಂತಹ ಅವರ ಬೆಂಬಲ ಇದರಿಂದ ಕಡಮೆಯಾಗತಕ್ಕ ಸಂದರ್ಭ ಬರುವುದಾಗಿದೆ. ಈ ರೀತಿ ಅವರು ಮಾಡುವುದರಿಂದ ನಮ್ಮ ಪಕ್ಷಕ್ಕೆ ಎಷ್ಟರ ಮಟ್ಟಿಗೆ ಅವರ ಸಹಕಾರ ದೊರೆಯುತ್ತದೆಂಬುದನ್ನು ನಾವು ಈಗ ಯೋಚಿಸಬೇಕಾಗಿದೆ.

ಶ್ರೀ ಎಸ್. ಆರ್. ಕಂಠಿ.—ತಾವೇ ಒಂದು ಸಾರಿ ತೆಲುಗಿನಲ್ಲಿ ಮಾತನಾಡಿದಿರಿ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಶ್ರೀಮಾನ್ ಆಂಜನೇಯರೆಡ್ಡಿಯವರಿಗೆ ನನ್ನ ಭಾಷೆ ಅರ್ಥವಾಗುತ್ತದೋ ಇಲ್ಲವೋ ಎಂದು ಆ ರೀತಿ ಮಾತನಾಡಿದೆ.

ಒಬ್ಬ ಸದಸ್ಯರು.—ಇನ್ನೊಮ್ಮೆ ಮಲೆಯಾಳಿ ಭಾಷೆಯಲ್ಲೂ ಮಾತನಾಡಿ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಇನ್ನು ಅದು ಒಂದು ಉಳಿದಿದೆ. ಆದ್ದರಿಂದ ಇನ್ನು ಮುಂದಾದರೂ ಬಡ್ಜೆಟ್ಟನ್ನು ತಯಾರು ಮಾಡುವಾಗ ಸರ್ಕಾರದವರು ಬಹಳ ಬುದ್ಧಿವಂತಿಕೆಯನ್ನು ಉಪಯೋಗಿಸಬೇಕು. ಅನಾವಶ್ಯಕವಾಗಿ ಕೆಲವು ಮಂತ್ರಿಗಳಿಂದ ಎಕ್ಸ್‌ಪೆಂಡಿಚರ್ ಜಾಸ್ತಿಯಾಗಿದೆ; ಕೆಲವು ಮಂತ್ರಿಗಳಿಗೆ ಇನ್ನೂ ಖಾತೆಯೇ ಇಲ್ಲ. ಸಂಬಳವೇನೋ ಇದೆ. ಇದರಿಂದ ಅವರು ಕೇವಲ ಖಾತೆ ರಹಿತ ಆಗಿದ್ದಾರಷ್ಟೆ.

ಶ್ರೀ ಎಸ್. ಆರ್. ಕಂಠಿ.—ಸಂಬಳ ಸಹಿತ ಆದರೆ ಖಾತೆ ರಹಿತ ಎಂದು ಹೇಳಿ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಈಗೇನೋ ಖಾತೆ ರಹಿತವೆಂದು ಹೇಳಬಹುದು. ಆ ರೀತಿ ಆಗಬಾರದು. ಈಗಾಗಲೇ ಚುನಾವಣೆ ಬಹಳ ದಿವಸಗಳಾದುವು.

(ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ)

ದೇಶದ ಹಣ ನ್ಯಾಯವಾದ ರೀತಿಯಲ್ಲಿ ವ್ಯಯವಾಗಬೇಕು ಇವೆಲ್ಲಾ ಲೋಪ ದೋಷಗಳನ್ನು ಇನ್ನು ಮುಂದೆ ಸರ್ಕಾರದವರು ತಿದ್ದಿಕೊಳ್ಳಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಗೋಪಾಲ ಸಾಲೆನ್ನ (ಮೂಡಬಿದರೆ).— ಮಾನ್ಯಸಭಾಧ್ಯಕ್ಷರೇ, ಈ ದಿವಸ ನಮ್ಮ ಆಡಳಿತ ಪಕ್ಷದ ಕೆಲವು ಸದಸ್ಯರು ವಿವರಿಸಿದ ಪ್ರಕಾರ ಕೆಲವು ಪ್ರತಿಪಕ್ಷದ ಸದಸ್ಯರು ಕೇವಲ ಟೀಕೆಗಾಗಿ ಮಾತ್ರ ಮಾತನಾಡಿದ್ದಾಗಲಿ ಅಧ್ಯಕ್ಷರ ಔದಾರ್ಯವನ್ನು ಮಂಗಳೂರು ಸದಸ್ಯನಾಗಿ ನಾನು ಪಡೆದುಕೊಳ್ಳುವುದಕ್ಕಾಗಲೀ ನಾನು ಹೊರಟಿಲ್ಲ.

ಅಧ್ಯಕ್ಷರು.— ಮಂಗಳೂರು ಸದಸ್ಯರಾಗಲೀ ಅಥವಾ ಯಾವ ಕ್ಷೇತ್ರದ ಸದಸ್ಯರೇ ಆಗಲೀ ನನಗೆ ಎಲ್ಲರಲ್ಲೂ ಏಕಸಮಾನತ್ವವಿದೆ.

ಶ್ರೀ ಗೋಪಾಲ ಸಾಲೆನ್ನ.—ಈ ಸಂದರ್ಭದಲ್ಲಿ ಸತ್ಯಾಂಶಗಳು ಏನೇನಿವೆ ಎಂಬ ವಿಷಯವನ್ನು ಈ ಸಭೆಯಮುಂದೆ ಇಡುವುದು ನನ್ನ ಜವಾಬ್ದಾರಿಯಾಗಿದೆ ಆಪ್ರಯುಕ್ತ ನಾನು ಪ್ರಥಮತಃ ಹೇಳಬೇಕಾದ ವಿಚಾರಗಳು ಅಂದರೆ ಈಗ ೨೦ ಕೋಟಿಗಿಂತಲೂ ಜಾಸ್ತಿಯಾಗಿರತಕ್ಕ ಸಪ್ಲಿಮೆಂಟ್ ಬಡ್ಜೆಟ್ ಬರುವಂಥಾದ್ದು ಅದು ಒಂದು ಸಂಪ್ರದಾಯದವೆನ್ನುವುದನ್ನು ನಾವೆಲ್ಲರೂ ತಿಳಿದಿದ್ದೇವೆ. ಅದರೆ ಅ ಒಂದು ಸತ್ಸಂಪ್ರದಾಯದ ಪ್ರಕಾರ ಮೊದಲಿನ ಖರ್ಚಾದ ಬಡ್ಜೆಟ್ ಯಾವರೀತಿ ಸದುಪಯೋಗವಾಗಿದೆ; ಅದರಿಂದಾಗಿ ರಾಷ್ಟ್ರದ ಉತ್ಪನ್ನು ನಾವು ಹಾಕಿದ ಹಣಕ್ಕಿಂತ ಎಷ್ಟು ಅಂಶ ಜಾಸ್ತಿಯಾಗಿದೆ ಎನ್ನುವುದನ್ನು ತಿಳಿದುಕೊಳ್ಳುವುದು ನ್ಯಾಯ ಮತ್ತು ಅದಕ್ಕಾಗಿ ಹೆಚ್ಚಿನ ಸರಿಯಾದ ಸಪ್ಲಿಮೆಂಟರಿ ಬಡ್ಜೆಟ್ಟನ್ನು ಪಾಸ್‌ಮಾಡುವುದು ಒಂದು ಸಂಪ್ರದಾಯ.

5-30 P.M.

ಇದು ಸಾಧಾರಣವಾಗಿ, ಸ್ಥಳೀಯ ಆವಶ್ಯಕತೆಗಳಿಗನುವಾಗಿ ಸರ್ಕಾರದವರು ಮಾಡಿದಂಥಹ ವೆಚ್ಚವು ಸದುಪಯೋಗವಾಗಿದೆಯೇ ಎಂಬ ಪ್ರಶ್ನೆಯನ್ನು ನೋಡುವಾಗ ಸದುಪಯೋಗವಾಗಲಿಲ್ಲ ಎಂಬುದನ್ನು ಸರ್ವರೂ ಒಪ್ಪಬೇಕಾಗಿದೆ. ಏಕೆಂದರೆ ಕೋಟ್ಯಂತರ ರೂಪಾಯಿ ಯೋಜನೆಗಳಿಗಾಗಿ ನಾವು ವ್ಯಯಮಾಡುತ್ತ ಇದ್ದೇವೆ. ಅದರ ಪರಿಣಾಮವಾಗಿ ಅಷ್ಟೇ ಪ್ರಮಾಣದಲ್ಲಿ ರಾಷ್ಟ್ರದ ಉತ್ಪನ್ನವು ಜಾಸ್ತಿಯಾಗಿ ಜನತೆಯ ಜೀವನದಮೇಲೆ ಏನೂ ಉತ್ತಮ ಪರಿಣಾಮವಾಗಲಿಲ್ಲ, ದಿನದಿನಕ್ಕೆ ಜನಸಾಮಾನ್ಯರ ನಿತ್ಯೋಪಯೋಗವಸ್ತುಗಳ ಬೆಲೆ ಏರುತ್ತಾಯಿದೆ. ಜನರಿಗೆ ಅವನ್ನು ಕೊಂಡುಕೊಳ್ಳುವ ಶಕ್ತಿಕಡಮೆಯಾಗುತ್ತಾ ಇದೆ. ಈ ರೀತಿಯಿಂದ ನೋಡುವಾಗ ನಾವು ಹಾಕಿದ ಹಣಕ್ಕೆ ಸರಿಯಾದ ಉತ್ಪನ್ನ ಕ್ರಮವಾದ ರೀತಿಯಲ್ಲಿ ದೊರೆತಿಲ್ಲ ಎಂದು ಸ್ಪಷ್ಟವಾಗುತ್ತದೆ. ಅದಕ್ಕೆ ಕೆಲವು ನಿದರ್ಶನಗಳನ್ನು ನಾನು ಚುನಾವಣೆಯ ಸಂದರ್ಭದಲ್ಲಿ ಸಾಮಾನ್ಯವಾಗಿ 64 ಗ್ರಾಮಗಳನ್ನು ಸುತ್ತಾಡಿ ನೋಡಿದಾಗ ಅಲ್ಲಿ ವಾಸ್ತವವಾಗಿ ಲಕ್ಷಾಂತರ ರೂಪಾಯಿಗಳ ವರೆಗೂ ವೆಚ್ಚವಾಗಿರುವುದು ಕಂಡುಬಂತು. ಅದ್ದರಿಂದ ಪ್ರತಿಫಲವಾಗಿ ಉತ್ಪನ್ನ ಎಂಬುದು ಏನೇನೂ ಆಗಲಿಲ್ಲ ಎಂಬುದು ಸತ್ಯಾಂಶ. ಇವೊತ್ತಿನ ದಿವಸ ಕೇಂದ್ರ ಸರ್ಕಾರದ ಗ್ರಾಂಟಿನಿಂದ ಅಲ್ಲಿ ನಿಮ್ನ ವರ್ಗದವರಿಗೆ ಸ್ಥಾಪಿತವಾದ ಮಾಲ ಮತ್ತು ಈದು ಎಂಬ ಈ ಎರಡು ವ್ಯವಸಾಯದ ಕಾಲೋನಿಗಳಿಗೆ ಪ್ರತಿ ಒಂದಕ್ಕೆ ಎರಡು ಲಕ್ಷ ರೂಪಾಯಿಗುಳು ವ್ಯಯವಾಗಿದೆ. ಒಂದಾದರೂ ಪ್ರಯೋಜನವಾಗಿಲ್ಲ ಎಂದರೆ ಇದು ಬಹಳ ವ್ಯಸನಕರವಾದ ಸಂಗತಿ. ಒಂದರಲ್ಲಿ ಸರ್ಕಾರದವರು ಕಟ್ಟಿದ 20 ಮನೆಗಳ ಪೈಕಿ 14 ಮನೆಗಳು ಬಿದ್ದು ಹೋಗಿವೆ. ಷೆಡೂಲ್ಡ್‌ಟ್ರೈಬ್ಸ್ ನವರು ತಾವಾಗಿಯೇ ಕಟ್ಟಿದ ಅನೇಕ ಮನೆಗಳು ಇವೊತ್ತಿಗೂ ಗಟ್ಟಿಯಾಗಿ ಉಳಿದಿವೆ. ಇನ್ನೊಂದರಲ್ಲಿ ಕೆಲವು ಮನೆಗಳನ್ನು ಕಟ್ಟಿದರು. ಅಲ್ಲಿ ಹೇಗಿದೆ ಎಂದರೆ 'ಹೊಂಬಾಳಯ್ಯ ನಗರ' ಎನ್ನುವ ಒಂದು ಬೋರ್ಡು ಮತ್ತು ಕೆಲವು ಮಾಡುಗಳು ಮಾತ್ರ ಕಾಣಿಸುತ್ತವೆ. ಒಂದು ಒಕ್ಕಲೂ ಕೂಡ ಇಲ್ಲ. ಮೊನ್ನೆ ತಾನೆ ತಾಲ್ಲೂಕು ಬೋರ್ಡ್ ಮಿಟಿಂಗ್‌ನಲ್ಲಿ ಈ ವಿಷಯವಾಗಿ ವರದಿ ಮಾಡಬೇಕೆಂದು. ಅಲ್ಲಿಯ ಅಧಿಕಾರಿಗಳು ಅದನ್ನು ಬಿಟ್ಟು ಬಿಡೋಣವೇ ಎಂಬುವಷ್ಟು ಮಟ್ಟಿಗೂ ಬಂದಿದ್ದಾರೆ. ಕೇಂದ್ರ ಸರ್ಕಾರದ ಗ್ರಾಂಟ್‌ನಿಂದ ಕಟ್ಟಿದ ಇನ್ನೊ ಒಂದೆರಡು ಇಂತಹ ಕಾಲೋನಿಗಳು ಕೂಡ ಇದೇ ರೀತಿ ಇವೆ. ಮತ್ತು ಮೂಡಬಿದ್ರೆಯಲ್ಲಿ......ಒಂದು ಕಾರ್ಖಾನೆಯನ್ನು ಸ್ಥಾಪಿಸಬೇಕೆಂದು ಸಾಧಾರಣ 60 ಸಾವಿರ ಚಿಲ್ಲರೆ ರೂಪಾಯಿಗಳ ವೆಚ್ಚದಲ್ಲಿ ಕೆಲವು ಮಷಿನರಿಗಳನ್ನು ಕೂಡ ತರಿಸಿ 3-4 ವರ್ಷಗಳಾಗಿವೆ. ಇದು ಕೇವಲ ನಷ್ಟವಾದ ಹಣ. ಹೀಗೆಯೇ ಚರ್ಮದ ಕೈಗಾರಿಕೆಗೆ ಸಾವಿರಾರು ರೂಪಾಯಿ ವ್ಯಯ ಮಾಡಿದ್ದಾರೆ ಅದರಲ್ಲೂ ಕೂಡ ಪರಿಣಾಮಕಾರಿಯಾದಷ್ಟು ಪ್ರತಿಫಲ ದೊರೆತಿಲ್ಲ. ಮಂಗಳೂರಿನಲ್ಲಿ ಚರ್ಮದ ಕೈಗಾರಿಕೆಗೆ ಒಂದು ರಿಜಿಸ್ಟರ್ಡ್ ಸೊಸೈಟಿ ಮಾಡಿ ಸುಮಾರು 1 ಲಕ್ಷ ರೂಪಾಯಿ ಖರ್ಚಾಗಿದ್ದರೂ ಕೂಡ ಯಶಸ್ವಿಯಾಗಿಲ್ಲ. ಈಗ ಆದನ್ನು ಸಂಬಂಧಪಟ್ಟ ಇಲಾಖೆಯವರು 2 ಲಕ್ಷ ರೂಪಾಯಿಗಳ ಸ್ಕೀಮು ಹಾಕಿದ್ದರೂ ಕೂಡ ಅದನ್ನು ವಾಪಸು ತೆಗೆದುಕೊಳ್ಳಬೇಕಾಯಿತು. ಹೀಗೆ ಎಷ್ಟೋ ಇವೆ. ನಮ್ಮ ಜಿಲ್ಲೆಯ ಒಂದು ಚಿತ್ರವನ್ನು ಸಭೆಯ ಮುಂದೆ ಇಟ್ಟಿದ್ದೇನೆ. ಈ ವಿಚಾರದಲ್ಲಿ ಸಂಬಂಧಪಟ್ಟ ಇಲಾಖೆಯವರು ಹೆಚ್ಚಿನ ಗಮನ ತೆಗೆದುಕೊಂಡು ಇದರಿಂದ ಉಪಯೋಗವಾಗುತ್ತದೆಯೇ ಎಂಬುದನ್ನು ನೋಡಿ ಮಂಜೂರು ಮಾಡಬೇಕಾಗಿತ್ತು.

ಇನ್ನು ಇರಿಗೇಷನ್ ವಿಚಾರದಲ್ಲಿ ನೋಡಿದರೆ ಈಗ ಎಷ್ಟು ಹಣ ಖರ್ಚಾಗಿದೆ, ಎಷ್ಟು ಹೊಸಗದ್ದೆಯನ್ನು ಸಾಗುವಳಿಗೆ ತಂದಿದ್ದೇವೆ ಎಂಬ ಬಗ್ಗೆ ಅಂಕಿಸಂಖ್ಯೆಗಳು ಸಿಕ್ಕುತ್ತವೆ ಆದರೆ ಎಷ್ಟು ಗದ್ದೆ ಮುಳುಗಿ ಹೋಗಿವೆ, ನಷ್ಟವಾಗಿದೆ ಎಂಬ ಅಂಕಿ ಲೆಕ್ಕಕ್ಕೆ ಬರುವುದಿಲ್ಲ.

ಇಷ್ಟುಮಾತ್ರವಲ್ಲ ; ವಿದ್ಯಾಇಲಾಖೆಯನ್ನು ನೋಡಿದರೆ ವಿಧ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ಕೊಡುತ್ತಾರೆ. ಅದು ಇನ್ನು ಮಾರ್ಚಿನವರಗೂ ಸಹ ಸಿಕ್ಕಿಲ್ಲ. ಅದರ ಉದ್ದೇಶವೇನೆಂದರೆ ಸಾಧಾರಣವಾಗಿ ಪುಸ್ತಗಳು ಮತ್ತು ಶಾಲೆಗೆ ಸಂಬಂಧಪಟ್ಟ ಸಲಕರಣೆಗಳನ್ನು ಪಡೆದುಕೊಳ್ಳಲಿಕ್ಕೆ ಅಂತಹ ಕ್ರಮ ಜಾರಿಗೆ ಬಂದಿದೆ. ಈ ಸ್ಕಾರ್‌ಷಿಪ್ ಸಿಕ್ಕುವಂತ ಕ್ರಮ ಸಾಧಾರಣವಾಗಿ ಆಗಸ್ಟ್‌ನಲ್ಲಿ ಒಂದು ಕಂತು ಡಿಸೆಂಬರ್‌ನಲ್ಲಿ ಮತ್ತೊಂದು ಕಂತು ಕೊನೆಯದಾಗಿ ಮಾರ್ಚಿನಲ್ಲಿ ಇನ್ನೊಂದು ಕಂತು ಸಿಕ್ಕಬೇಕಾಗಿತ್ತು. ಹೀಗಾದರೆ ಪುಸ್ತಕಗಳ ಅವಶ್ಯಕತೆಯನ್ನು ಪೂರೈಸಿಕೊಳ್ಳುವ ಅನುಕೂಲತೆಯನ್ನು ಪಡೆಯಲಿಕ್ಕೆ ಸಾಧ್ಯವೇ ಎಂಬ ಪ್ರಶ್ನೆಗಮನಾರ್ಹವಾದದ್ದು. ಅದ್ದರಿಂದ ಈಗ ಕೊಡುವಂಥಾ ಸ್ಕಾಲರ್‌ಷಿಪ್ ಏನಿದೆ ಅದರಿಂದ ಉದ್ದೇಶ್ಯಸಾಧಿಸದೆ ಅದು ವ್ಯರ್ಥವಾಗುತ್ತಿದೆ. ಹೀಗೆ ಅನೇಕ ವಿಚಾರದಲ್ಲಿ ನೋಡಿದರೆ ಆಡಳಿತ

ವರ್ಗದ ನೈತಿಕ ಮಟ್ಟ ಬಹಳ ಕೆಳಕ್ಕೆ ಹೋಗುತ್ತಾ ಇದೆ ಎಂದು ಹೇಳ ಬೇಕಾಗಿದೆ. ಇದು ಒಂದೇ ಒಂದು ಜಿಲ್ಲೆಗೆ ಸಂಬಂಧ ಪಟ್ಟದ್ದು ಅಲ್ಲ ; ಒಂದೇ ಒಂದು ಇಲಾಖೆಗೆ ಸಂಬಂಧ ಪಟ್ಟದ್ದು ಅಲ್ಲ. ಎಲ್ಲಾ ಜಿಲ್ಲೆಗಳಲ್ಲೂ ಈ ಆಡಳಿತವರ್ಗದ ನೈತಿಕ ಮಟ್ಟ ಬಹಳ ಕೆಳಕ್ಕೆ ಇಳಿಯುತ್ತಾ ಇದೆ. ಅದಕ್ಕೆ ಕೆಲವು ನಿದರ್ಶನಗಳು ನಮ್ಮ ಜಿಲ್ಲೆಯಲ್ಲಿ ನನ್ನ ಗಮನಕ್ಕೆ ಬಂದಿವೆ. ಪ್ರೊಹಿಬಿಷನ್ ನಿಂದಾಗಿ ಅನೇಕ ಅನೈತಿಕ ವಿಚಾರಗಳು ಬೆಳಕಿಗೆ ಬಂದಿವೆ. ಅದರಿಂದ ಕೆಲವು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಬೇಕಾಯಿತು ಎಂದು ಸುದ್ದಿ ಬಂದಿದೆ, ಇದನ್ನು ಸುಧಾರಿಸುವ ಬಗೆ ಹೇಗೆ ಎಂಬುದನ್ನು ನೋಡಬೇಕು. ಆಕಡೆಗೆ ಹೆಚ್ಚು ಗಮನ ಕೊಟ್ಟು ಆಡಳಿತ ಮಟ್ಟವನ್ನು ಸುಧಾರಣೆಗೆ ತಂದ ಹೊರತು ಜನರಿಗೆ ಸುಖ ಸಿಕ್ಕುವುದು ಕಷ್ಟವಿದೆ. ಆಸ್ಪತ್ರೆಗಳಲ್ಲಿ ನೋಡಿದರೆ ಮದ್ದು ಸಿಕ್ಕುವುದು ಕಷ್ಟವಾಗಿದೆ. ಪ್ರಿಸ್ಕ್ರಿಪ್ಷನ್ ಕೊಟ್ಟು ಮದ್ದು ದೊರಕದೆ ಷಾಪ್ ನಿಂದ ಹೆಚ್ಚು ಕ್ರಯಬಾಳುವ ತೆಗೆದುಕೊಳ್ಳಬೇಕೆಂದು ಹೇಳುತ್ತಾರೆ. ಹೀಗಾದರೆ ಸಾಮಾನ್ಯ ಜನರು ಎಲ್ಲಿಂದ ತಾನೆ ಔಷಧಿ ಪಡೆದುಕೊಳ್ಳಬಹುದು ?

ಇನ್ನು ಆಡಳಿತದಲ್ಲಿ ದಕ್ಷತೆ ಹೆಚ್ಚಬೇಕಾದರೆ ಆಡಳಿತದಲ್ಲಿರುವಂತಹ ಕೆಳದರ್ಜೆಯ ನೌಕರರ ಉತ್ಪನ್ನದ ಮಟ್ಟವನ್ನು ಸುಧಾರಿಸಬೇಕು. ಎಲ್ಲಿಯವರೆಗೆ ಕೆಳದರ್ಜೆಯ ನೌಕರ ಸಂಬಳದ ಮಟ್ಟವನ್ನು ಸುಧಾರಿಸುವ ಕಡೆಗೆ ಗಮನ ಕೊಡುವುದಿಲ್ಲವೋ ಆಡಳಿತದಲ್ಲಿ ದಕ್ಷತೆಯನ್ನು ಅಪೇಕ್ಷಿಸುವುದು ಬಹಳ ಅಲ್ಲಿಯವರೆಗೆ ಕಷ್ಟಕರವಾದದ್ದು. ಏಕೆಂದರೆ, ಈ ಹೊತ್ತಿನ ಜೀವನದ ಮಟ್ಟಕ್ಕನುಸಾರವಾಗಿ ಅವರಿಗೆ ಸಂಭಾವನೆ ನೀಡಿದ್ದರೆ, ಅವರ family budget ಸರಿದೂಗಿಸಿಕೊಳ್ಳಲು ಸಹಾಯ ಮಾಡಿದ್ದರೆ ಅದಕ್ಕಾಗಿ, additional or supplementary grant ಕೇಳಿದ್ದರೆ ಅದು ನ್ಯಾಯವಾಗಿತ್ತು. ಕೆಳ ದರ್ಜೆ ನೌಕರರ ಸ್ಥಿತಿಯನ್ನು ಸುಧಾರಿಸಲು ಸಹಾಯ ಮಾಡುವುದಕ್ಕಾಗಿ ಹಣ ಕೊಟ್ಟಿದ್ದೇವೆ, ಅದನ್ನು ಮಂಜೂರುಮಾಡಿ ಎಂದು ಕೇಳಿದ್ದರೆ ನ್ಯಾಯವಾಗಿತ್ತು. ಅದೂ ಇಲ್ಲ.

ನಮ್ಮ ಕ್ಷೇತ್ರದಲ್ಲಿ ನಾರಾವಿ ಎಂಬ ಗ್ರಾಮ ಒಂದು ದ್ವೀಪದ ಹಾಗಿದೆ. ಅದಕ್ಕೆ ಹೋಗಿ ಬರಲು ಸರಿಯಾದ ಸೌಕರ್ಯವಿಲ್ಲ. ಯಾವುದಕ್ಕೆ ಅನುಕೂಲ ಬೇಕೋ ಅದಕ್ಕೇ ಇಲ್ಲ, ಎಲ್ಲಿ ಅನಾವಶ್ಯಕವೋ ಅಲ್ಲಿ ಹಣ ವ್ಯಯವಾಗುತ್ತಿದೆ, ಪ್ರತಿ ವರ್ಷವೂ ಯಾರಿಂದ ರಚನಾತ್ಮಕ ಸಲಹೆ ಬರುತ್ತದೆಯೋ ಅದನ್ನು ಗಮನಿಸಿ ಅದರಂತೆ ಕೆಲಸ ಮಾಡಬೇಕು. ಆದರೆ ಸರ್ಕಾರ ಹಾಗೆ ಮಾಡುತ್ತಿಲ್ಲ. ಆಡಳಿತ ಪಕ್ಷ ಇದರಿಂದ ಬೆಳಕನ್ನು ತಂದುಕೊಂಡು, ಈಗಿರತಕ್ಕ ಹೊಸ ಮಂತ್ರಿ ಮಂಡಲ ಸರಿಯಾಗಿ ಕೆಲಸಗಳನ್ನು ಮುಂದುವರಿಸಿಕೊಂಡು ಮಹಾಜನತೆಗೆ ಸೌಕರ್ಯ ದೊರಕುವಂತೆ ಕೆಲಸಗಳನ್ನು ಮಾಡಿ ಈ ಸಭೆಯ ಮುಂದಿಡಬೇಕಾದುದನ್ನು ಇಡಬೇಕು.

ಈಗ ಕೇಂದ್ರದಿಂದ ಓರ್ವ ಉಪ ಮಂತ್ರಿಯನ್ನು ನಮ್ಮ ಮಂತ್ರಿ ಮಂಡಲಕ್ಕೆ ತೆಗೆದು ಕೊಂಡಿದ್ದಾರೆ. ಇದಕ್ಕಾಗಿ ಇಲ್ಲಿ ಹೊಸ ಚುನಾವಣೆಯಾಗಬೇಕು. ಪಾರ್ಲಿಯಮೆಂಟ್ ಸ್ಥಾನಕ್ಕೆ ಚುನವಣೆ ಆಗಬೇಕು. ಇದಕ್ಕೆಲ್ಲಾ ಸರ್ಕಾರದ ಹಣವೇಕೆ ಖರ್ಚು ಮಾಡಬೇಕು ? ಇಂಥಾ ಖರ್ಚನ್ನು ತಪ್ಪಿಸಲು ಏನು ಮಾಡಬೇಕೆಂಬುದನ್ನು ಸರ್ಕಾರ ಯೋಚನೆಮಾಡಬೇಕು. ಸಂಬಂಧಪಟ್ಟ ಹಾಗೆ ಮಂತ್ರಿಗಳೇ ಈ ಖರ್ಚನ್ನು ವಹಿಸಿಕೊಂಡು ಭರ್ತಿ ಮಾಡಬೇಕೆಂದು ಕಾಯಿದೆ ತಿದುಪಡಿಯಾಗಬೇಕೆಂದು ನನ್ನ ಸೂಚನೆ. ಇವರೊಬ್ಬರಿಗೇ ಅಲ್ಲ ಇನ್ನು ಮುಂದೆಯೂ ಈ ರೀತಿ ಮಾಡಬೇಕು. ಇಂಥಾ ಖರ್ಚು ಸರ್ಕಾರಕ್ಕೆ ಬರಬಾರದು. ಏಕೆಂದರೆ, ಹೀಗೆಯೇ ಮಾಡಿದರೆ ಅನೇಕ ಜನರು ಇಂಥ ಅವಕಾಶವನ್ನು ಉಪಯೋಗಮಾಡಿಕೊಂಡು ದುಂದುವೆಚ್ಚಕ್ಕೆ ಅವಕಾಶವಾಗಬಹುದು. ಹೀಗಾಗಬಾರದು, ನ್ಯಾಯವಾಗಿ ಮಂಜೂರು ಮಾಡಬೇಕಾದುದನ್ನು ಮಾಡಬೇಕು. ಆದುದರಿಂದ ಈ ದಿವಸ ನಮ್ಮ ಮುಂದಿರುವ ವೆಚ್ಚಗಳಿಗೆ ಅಗತ್ಯವಾದ ವಿವರಣೆಯಿಲ್ಲವಾದುದರಿಂದ ಇದು ಮಂಜೂರಾತಿ ಮೂನ್ನ ಆಲೋಚನೆಮಾಡ ಬೇಕಾದ ವಿಷಯವೆಂದು ಹೇಳುತ್ತೇನೆ.

ಶ್ರೀ ಜಿ. ಮರುಳಪ್ಪ (ಕಡೂರು).—ಸ್ವಾಮಿ ಅಧ್ಯಕ್ಷರೇ, ಇಷ್ಟು ಹೊತ್ತಿನವರೆಗೂ ಈ ಹೆಚ್ಚುವರಿ ಬೇಡಿಕೆಗಳ ಮೇಲೆ ಚರ್ಚೆ ನಡೆದಿದೆ. ಪ್ರತಿ ಪಕ್ಷದ ಸದಸ್ಯರೂ ಅನೇಕ ಸಲಹೆಗಳನ್ನೂ ಟೀಕೆಗಳನ್ನೂ ಮಾಡಿದರು. ಇದು ಸ್ವಾಭಾವಿಕ, ಆಳುವ ಪಕ್ಷದವರು ಏನು ಮಾಡಿದ್ದಾರೋ ಅದು ನ್ಯಾಯವೆಂದು ಅವರು ಹೇಳುವುದೂ ಸ್ವಾಭಾವಿಕ. ನಾವೂ ಅವರಂತೆ ಆಡಳಿತದಲ್ಲಿದ್ದಿದ್ದರೆ ಹೀಗೆಯೇ ಆಗುತಿತ್ತು. ನಾನು ತಿಳಿದುಕೊಂಡಿರುವ ಮಟ್ಟಿಗೆ, ಸಪ್ಲಿಮೆಂಟರಿ ಬಡ್ಜೆಟ್ ಎಂದರೆ, ಒಂದು ಕೆಲಸಕ್ಕೆ ಒಂದು ನಿರ್ದಿಷ್ಟವಾದ ಮೊಬಲಗನ್ನು ಮೊದಲು 'ಅಲಾಟ್' ಮಾಡುತ್ತಾರೆ, ಕಾರಣಾಂತರದಿಂದ ಅಲ್ಪಸ್ವಲ್ಪ ವ್ಯತ್ಯಾಸವಾದರೂ ಆ ಅಲ್ಪ ಮೊಬಲಗನ್ನು ಕೇಳುವುದು ಸ್ವಾಭಾವಿಕವೆಂದು ತಿಳಿದಿದ್ದೇನೆ. ಇದಕ್ಕೆ ಅಂದಾಜು ಎಂದು ಹೆಸರು. ಆದರೆ ಇದರಲ್ಲಿ ನೋಡಿದರೆ, ಕೆಲವು ಬಾಬುಗಳಿಗೆ ಎಷ್ಟು ಅಂದಾಜು ಮಾಡಿದ್ದರೋ ಅದಕ್ಕೆರಡರಷ್ಟು ಖರ್ಚಾಗಿದೆ. ಇದನ್ನೆಲ್ಲಾ ನೋಡಿದರೆ ಆಡಳಿತ ಪಕ್ಷದವರಿಗೆ ಅಂದಾಜುಮಾಡುವ ಅನುಭವ ಏನೂ ಇಲ್ಲವೆಂದು ವ್ಯಕ್ತವಾಗುತ್ತದೆ. ದೇಶದ ಟ್ರಸ್ಟಿಗಳೆಂದು ದೇಶದ ಆಡಳಿತವನ್ನು ಇವರನ್ನು ನಂಬಿ ಇವರಿಗೆ ಕೊಟ್ಟಿರಬೇಕಾದರೆ ಇವರು ಸರಿಯಾದ ಅಂದಾಜು ಮಾಡುವುದು ನ್ಯಾಯ. ಇದನ್ನು ತಿಳಿಯದೆ ಮನಸ್ಸಿಗೆ ಬಂದ ಹಾಗೆ ಮಾಡಿ, 'ನಾವು ಹೆಚ್ಚು ಖರ್ಚು ಮಾಡುತ್ತೇವೆ, ನೀವು ಒಪ್ಪಿಕೊಳ್ಳಬೇಕೆಂದು' ಹೇಳುವುದು ಯಾವ ನ್ಯಾಯ ? ಇದನ್ನು ನಾವು ಹೇಗೆ ಒಪ್ಪಿಕೊಳ್ಳುವುದು ? ಹಿಂದೆ ಆದುದು ಆಯಿತು, ಮುಂದೆ ಇಂಥ ಬಡ್ಜೆಟ್ಟನ್ನು ತರಬಾರದು. ಮುಂದಿನ ಸರ್ಕಾರವಾದರೂ ಬಹಳ ಯೋಚನೆಮಾಡಿ, ತರುವಾಗ ಯಾವ ಕೆಲಸಕ್ಕೆ ಎಷ್ಟು ಮೊಬಲಗು ಬೇಕಾಗುತ್ತದೆಂಬುದನ್ನು ನೋಡಿ ಸರಿಯಾಗಿ ಅಂದಾಜು ಮಾಡಬೇಕು. ಅಲ್ಪ ಸ್ವಲ್ಪ ವ್ಯತ್ಯಾಸ ಬರಬಹುದು. ಹೀಗೆ ಮಾಡಿದರೆ ಅವರಿಗೂ ಗೌರವ; ಈ ಸಭೆಗೂ ಗೌರವ. ಅದನ್ನು ಬಿಟ್ಟು, ಮೊದಲು ಒಂದು ಕೆಲಸಕ್ಕೆ ಐದು ಲಕ್ಷ ಕೊಡಿ ಎಂದು ಕೇಳಿ, ಹೆಚ್ಚು ಖರ್ಚುಮಾಡಿದೆವು ಈಗ 17 ಲಕ್ಷ ಕೊಡಿ ಎಂದು ಹೇಳುವುದು ಸರಿಯಲ್ಲ. ಸರ್ಕಾರ ಕೊಟ್ಟಿರುವಷ್ಟನ್ನು ಅಧಿಕಾರಿಗಳು ಖರ್ಚುಮಾಡಬೇಕು. ಕೋರ್ಟಿಗೆ ಹೋಗಿದ್ದರಿಂದ ಹೆಚ್ಚು ಖರ್ಚಾಗಿದೆಯೆಂದರೆ, ಜನರು legal minded ಆಗಿದ್ದಾರೆಂದಾಯಿತು. ಆದರೆ ಸರ್ಕಾರ illegal minded ಆಗಿದ್ದಾರೆಯೇ ? ಒಂದು ಆರ್ಡರ್ ಮಾಡಿದ್ದು ತಪ್ಪಾಯಿತೆಂದು ನ್ಯಾಯಾಧೀಶರು ಹೇಳಿದರೆ, ಪುನಃ ಸರ್ಕಾರ ಅಂಥ ತಪ್ಪನ್ನು ಮಾಡಬಾರದು. ಆರೀತಿ ಮತ್ತೆ ಮಾಡಿದರೆ ಅಂಥ ಸರ್ಕಾರ ಅಧಿಕಾರದಲ್ಲಿರಬಾರದು. ಅದು ಬಿಟ್ಟು ನಾವು ಮೆಜಾರಿಟಿ

(ಶ್ರೀ ಜಿ. ಮರುಳಪ್ಪ)

ಯಲ್ಲಿದ್ದೇವೆ, 139 ಜನರಿದ್ದೇವೆ, ಹೀಗೆ ಹೇಳುತ್ತೇವೆ ಎಂದು ಹೇಳಬಾರದು. ಈ ಅನುಭವದಿಂದ ಮುಂದಾದರೂ ರಾಜ್ಯವನ್ನು ಚೆನ್ನಾಗಿ ಆಳಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—I may suggest that we may rise now and continue the discussion tomorrow.

Before the House rises, I want to mention two things. One is, I am sorry I put a time-limit for the speeches. I was wrong in my premises and the members will kindly parden me. Another is the question with regard to the particular word whether it is parliamentary or not. I reserved my ruling. I looked into it. It is a question on which there is divided opinion. I give my ruling tomorrow or day after. Now, the House rises to meet tomorrow at 8-30 A.M.

The House adjourned at Fifty Minutes past Five of the Clock to meet again at Thirty Minutes past Eight of the Clock on Saturday, the 24th March 1962.